
ವೇದಾಂತಭಾರತೀ ಗ್ರಂಥಮಾಲಾ- ಪಂಚಮಂ ಪುಷ್ಪಮ್

# ಯುಗಪುರುಷ ಶಂಕರ

ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥ ಶರ್ಮಾ



ವೇದಾಂತ ಭಾರತೀ
(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)
ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ - 571 602, ಮೈಸೂರು ಜಿಲ್ಲೆ

ಓಂ

॥ ಜ್ಞಾನಾದೇವ ತು ಕೈವಲ್ಯಮ್ ॥

ವೇದಾಂತಭಾರತೀ ಗ್ರಂಥಮಾಲಾ - ಪಂಚಮಂ ಪುಷ್ಪಮ್

# ಯುಗಪುರುಷ ಶಂಕರ

ಮಹಾಮಹೋಪಾಧ್ಯಾಯ
**ವಿದ್ವಾನ್ ಎನ್. ರಂಗನಾಥಶರ್ಮಾ**

**ವೇದಾಂತಭಾರತೀ**
(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)
ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ-೫೭೧ ೬೦೨
ಮೈಸೂರು ಜಿಲ್ಲೆ

**Yugapurusha Shankara** (Shankaracharya's life in brief and messages) - *By Vidwan. N. Ranganatha Sharma*

© : *Vedanta Bharati*

ಪುಟಗಳು :

ಪ್ರಥಮ ಮುದ್ರಣ : ೨೦೦೦ ಪ್ರತಿಗಳು : ೫,೦೦೦
ದ್ವಿತೀಯ ಮುದ್ರಣ : ೨೦೦೨ ಪ್ರತಿಗಳು : ೧೦,೦೦೦
ತೃತೀಯ ಮುದ್ರಣ : ೨೦೦೬ ಪ್ರತಿಗಳು : ೫,೦೦೦

ಬೆಲೆ : ರೂ. ೧೫/-

ಪ್ರಕಾಶಕರು:

**ವೇದಾಂತಭಾರತೀ**

(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)
ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ - 571 602
ಮೈಸೂರು ಜಿಲ್ಲೆ - 08223-262471

ಮುದ್ರಕರು

**ಸ್ಪ್ಯಾನ್**

ನಂ.72, 24ನೇ ಎ' ಕ್ರಾಸ್, ಕರೇಸಂದ್ರ,
ಬನಶಂಕರಿ 2ನೇ ಹಂತ, ಬೆಂಗಳೂರು - 560 070
ದೂರವಾಣಿ : 26718831, 26719569 .

॥ ಶ್ರೀ ಚತುರ್ಭುಜಪಟ್ಟಾಭಿರಾಮೋ ವಿಜಯತೇ ॥





# ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ

## ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ–571 602 ಮೈಸೂರು ಜಿಲ್ಲೆ

---

ಮೊಕ್ಕಾಂ – ಕೆ.ಆರ್. ನಗರ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣಪಾರಾವಾರ-ಪಾರೀಣ ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧಾರಣಾಧ್ಯಾನ-ಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನಗುರು-ಪರಂಪರಾಪ್ರಾಪ್ತಷಡ್ದರ್ಶನಸ್ಥಾಪನಾಚಾರ್ಯ ವ್ಯಾಖ್ಯಾನಸಿಂಹಾಸನಾಧೀಶ್ವರ ಸಕಲ ನಿಗಮಾಗಮಸಾರಹೃದಯ ಸಾಂಖ್ಯತ್ರಯಪ್ರತಿಪಾದಕ ವೈದಿಕಮಾರ್ಗಪ್ರವರ್ತಕ ಸರ್ವತಂತ್ರಸ್ವತಂತ್ರಾದಿರಾಜಧಾನೀಶ್ರೀಮದ್ವಿದ್ಯಾನಗರಮಹಾರಾಜಧಾನೀಕರ್ನಾಟಕ ಸಿಂಹಾಸನಪ್ರತಿಷ್ಠಾಪನಾಚಾರ್ಯಶ್ರೀಮದ್‌ರಾಜಾಧಿರಾಜಗುರುಭೂಮಂಡಲಾಚಾರ್ಯ ಶ್ರೀಮಚ್ಛಂಕರಾಚಾರ್ಯಶಿಷ್ಯ ಪರಂಪರಾಪ್ರಾಪ್ತ ಕಾವೇರೀಹೇಮಾವತೀತೀರವಾಸ ಶ್ರೀನರಸಿಂಹಪುರವರಾಧೀಶ್ವರ ಶ್ರೀಚತುರ್ಭುಜಪಟ್ಟಾಭಿರಾಮಸ್ವಾಮಿ ಶ್ರೀನೀಲಕಂಠೇಶ್ವರ ಸ್ವಾಮಿಪಾದಪದ್ಮಾರಾಧಕಯಡತೊರೆ(ಕೃಷ್ಣರಾಜನಗರ)ಶ್ರೀಯೋಗಾನಂದೇಶ್ವರ-ಸರಸ್ವತೀಮಠಾಧೀಶ್ವರಶ್ರೀರಾಮಬ್ರಹ್ಮಾನಂದಸರಸ್ವತೀಸ್ವಾಮಿದಿವ್ಯಪಾದಪದ್ಮಾರಾಧಕ **ಶ್ರೀಮದ್‌ಗಣಪತಿಭಾರತೀಸ್ವಾಮಿಶಿಷ್ಯೈಃ ಶ್ರೀಮಚ್ಛಂಕರಭಾರತೀಸ್ವಾಮಿಭಿಃ** ನಿಖಿಲಾಸ್ತಿಕಮಹಾಜನವಿಷಯೇ ನಾರಾಯಣಸ್ಮರಣಪುರಸ್ಸರವಿರಚಿತಾಶೀಃ-ಪರಂಪರಾಃ ಸಮುಲ್ಲಸಂತುತರಾಮ್,

'ಅಜ್ಞಾನಾಂತರ್ಗಹನಪತಿತಾನಾತ್ಮವಿದ್ಯೋಪದೇಶೈಃ' ಅನ್ನುವ ಸ್ತೋತ್ರದಲ್ಲಿ ತಿಳಿಸಿದಂತೆ, ಸಾಮಾನ್ಯ ಜನರನ್ನು ಸಂಸಾರದುಃಖದಿಂದ ಬಿಡುಗಡೆಗೊಳಿಸುವುದೇ ಶ್ರೀ ಶಂಕರಭಗವತ್ಪಾದರ ಅವತಾರದ ಉದ್ದೇಶವಾಗಿದೆ. ಕೇವಲ ೩೨ ವರ್ಷಗಳಲ್ಲಿ ಅವರು ರಚಿಸಿದ ಪವಿತ್ರಕೃತಿಗಳು ಅಪಾರ, ಆಸೇತು-ತುಹಿನಾಚಲ ಸಂಚರಿಸಿ ಅವರು ಮಾಡಿತೋರಿಸಿದ ಕಾರ್ಯಗಳು ಅತ್ಯಾಶ್ಚರ್ಯವನ್ನುಂಟು ಮಾಡುವವು. ಇವುಗಳನ್ನೆಲ್ಲ ಆಸ್ತಿಕಮಹಾಜನತೆಗೆ ಅತ್ಯಂತ ಸಂಕ್ಷಿಪ್ತವಾಗಿ ಮತ್ತು ಪೂರ್ಣವಾಗಿ ತಿಳಿಸುವ ಕೆಲಸವನ್ನು ಉಭಯ ಭಾಷಾವಿದ್ವಾಂಸರಾದ ಅನೇಕ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಗಳಿಸಿ ಖ್ಯಾತನಾಮರಾದ, ಮೂರು ದಶಕಗಳಿಗೂ ಹೆಚ್ಚು ಕಾಲ ಶಾಸ್ತ್ರಾಧ್ಯಾಪನವನ್ನು ಮಾಡಿರುವ ಅನೇಕ ಗ್ರಂಥಗಳ ಕರ್ತೃಗಳೂ ಆಗಿರುವ ನಮ್ಮ ಮಠದ ವಿಷಯದಲ್ಲಿ ಅತ್ಯಂತ ಶ್ರದ್ಧಾಭಕ್ತಿಯನ್ನು ಹೊಂದಿರುವ ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮರು **"ಯುಗಪುರುಷ ಶಂಕರ"** ಅನ್ನುವ ಈ ಗ್ರಂಥದಲ್ಲಿ ಸಮರ್ಥವಾಗಿ ನಿರ್ವಹಿಸಿದ್ದಾರೆ. ಈ ಪುಸ್ತಕವು ಸಮಸ್ತ ಆಸ್ತಿಕ ಜನರ ಶ್ರದ್ಧೆಗೆ ಪಾತ್ರವಾಗಲಿ ಮತ್ತು ಇದನ್ನು ಓದಿ ಶ್ರೀಶಂಕರಭಗವತ್ಪಾದರ ಸಂದೇಶ ಮತ್ತು ಜೀವನವನ್ನು ತಿಳಿದು, ಉಪದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಎಲ್ಲ ಆಸ್ತಿಕರು ಶ್ರೇಯೋಭಿವೃದ್ಧಿಯನ್ನು ಹೊಂದಲಿ ಎಂಬುದಾಗಿ ಹಾರೈಸುತ್ತೇವೆ.

ನಮ್ಮ ಆರಾಧ್ಯಮೂರ್ತಿ ಶ್ರೀಚತುರ್ಭುಜಪಟ್ಟಾಭಿರಾಮಸ್ವಾಮಿ ಹಾಗೂ ಶ್ರೀನೀಲಕಂಠೇಶ್ವರಸ್ವಾಮಿಯು ಗ್ರಂಥಕರ್ತರಿಗೆ ಮತ್ತು ಈ ಗ್ರಂಥವನ್ನು ಪ್ರಕಟಪಡಿಸುತ್ತಿರುವ ವೇದಾಂತಭಾರತಿಯ ಕಾರ್ಯಕರ್ತರಿಗೆ ಸಮಸ್ತ ಸನ್ಮಂಗಳವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತ ನಮ್ಮ ಆಶೀರ್ವಾದಗಳನ್ನು ತಿಳಿಸುತ್ತಿದ್ದೇವೆ.

ವಿಕ್ರಮಸಂ॥ ಮಾರ್ಗಶೀರ್ಷಕೃಷ್ಣಸಪ್ತಮೀ,
ಭಾನುವಾರ, ೧೭-೧೨-೨೦೦೦

ಇತಿ ನಾರಾಯಣಸ್ಮರಣಮ್

# ಪ್ರಕಾಶಕರ ಪರವಾಗಿ

ಶ್ರೀ ಶಂಕರಭಗವತ್ಪಾದರ ತತ್ತ್ವೋಪದೇಶವನ್ನು ಸಾಮಾನ್ಯ ಜನರಿಗೂ ತಲುಪಿಸುವಂತೆ ಮಾಡುವುದಕ್ಕಾಗಿ ವೇದಾಂತಭಾರತಿಯು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಶಾಂಕರಸಂದೇಶಸಪ್ತಾಹವೂ ಒಂದು. ದಿನಾಂಕ ೧೮-೧೨-೨೦೦೦ದಿಂದ ೨೪-೧೨-೨೦೦೦ದ ವರೆಗೆ ಬೆಂಗಳೂರಿನ ನೂರಾರು ಕೇಂದ್ರಗಳಲ್ಲಿ ಏಕಕಾಲದಲ್ಲಿ ನಡೆಯುವ ಈ ಕಾರ್ಯಕ್ರಮದ ಸಂದರ್ಭದಲ್ಲಿ ಆಚಾರ್ಯರ ಜೀವನಚರಿತ್ರೆ ಹಾಗೂ ಉಪದೇಶಗಳ ಬಗ್ಗೆ ಒಂದು ಪುಟ್ಟ ಪುಸ್ತಿಕೆಯನ್ನು ಹೊರತರಬೇಕೆಂಬುದು ನಮ್ಮ ಅಪೇಕ್ಷೆಯಾಗಿತ್ತು. ನಮ್ಮೀ ಇಚ್ಛೆಯನ್ನು ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಾದ ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮಾರವರಲ್ಲಿ ತೋಡಿಕೊಂಡಾಗ ಶ್ರೀಯುತರು ಸಂತೋಷದಿಂದ ನಮ್ಮ ಪ್ರಾರ್ಥನೆಯನ್ನು ಮನ್ನಿಸಿದ್ದಲ್ಲದೆ ಅತ್ಯಲ್ಪಕಾಲದಲ್ಲಿಯೇ ಈ ಸರ್ವಾಂಗ ಸುಂದರವಾದ ಗ್ರಂಥವನ್ನು ರಚಿಸಿಕೊಟ್ಟಿದ್ದಾರೆ. ಅವರಿಗೆ ಸಂಸ್ಥೆಯು ತುಂಬಾ ಕೃತಜ್ಞವಾಗಿದೆ. ಮುದ್ರಣದ ಕರಡು ಪ್ರತಿಯನ್ನು ತಿದ್ದಿದವರು ವಿದ್ವಾನ್ ಶ್ರೀ ಜಿ. ಮಹಾಬಲೇಶ್ವರ ಭಟ್ಟರು. ಅಂದವಾಗಿ ಮುದ್ರಿಸಿಕೊಟ್ಟವರು ಸೋಮಯ್ಯ ಪಬ್ಲಿಕೇಷನ್ ಪ್ರೈ.ಲಿ. ರವರು. ಪುಸ್ತಕದ ಪ್ರಕಾಶನದಲ್ಲಿ ನೆರವಾದವರು ಡಾ. ಎಲ್. ಎ. ಸೂರ್ಯನಾರಾಯಣರವರು. ಇವರೆಲ್ಲರನ್ನು ಸಂಸ್ಥೆಯು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ. ಈ ಗ್ರಂಥದ ಮುದ್ರಣಕ್ಕೆ ಧನಸಹಾಯ ಮಾಡಿ ಅತಿ ಶೀಘ್ರವಾಗಿ ಪ್ರಕಾಶಗೊಳ್ಳಲು ಕಾರಣರಾದವರು ಸಮೀರವಾಡಿ ಸೋಮಯ್ಯಆರ್ಗಾನೋ ಕೆಮಿಕಲ್ಸ್‌ನ ಮಾಲೀಕರಾದ ಡಾ. ಎಸ್.ಕೆ. ಸೋಮಯ್ಯ ಹಾಗೂ ಅವರ ಸುಪುತ್ರರಾದ ಶ್ರೀ ಸಮೀರ್ ಸೋಮಯ್ಯ. ಇವರ ಮೇಲೆ ಶಂಕರರ ಕೃಪೆ ಸದಾ ಇರಲೆಂದು ಪ್ರಾರ್ಥಿಸುತ್ತೇವೆ.

ವೇದಾಂತಭಾರತೀಸಂಸ್ಥೆಯ ಮಹಾಸಂರಕ್ಷಕರಾಗಿದ್ದು ಸಂಸ್ಥೆಯ ಎಲ್ಲ ಕಾರ್ಯಗಳಿಗೂ ತಮ್ಮ ದಿವ್ಯಾನುಗ್ರಹವನ್ನು ಅನುಗ್ರಹಿಸುತ್ತಿರುವವರು **ಶ್ರೀಮಜ್ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀ ತೀರ್ಥಮಹಾಸ್ವಾಮಿಗಳು ದಕ್ಷಿಣಾಮ್ನಾಯ ಶಾರದಾಪೀಠ ಶೃಂಗೇರಿ** ಇವರು. ಪೂಜ್ಯರಿಗೆ ನಮ್ಮ ಅನಂತಾನಂತ ಪ್ರಣಾಮಗಳು.

ವೇದಾಂತಭಾರತೀಯ ಎಲ್ಲ ಕಾರ್ಯಗಳಿಗೂ ಬೆನ್ನೆಲುಬಾಗಿ ನಿಂತು ಸದಾ

ಆಶೀರ್ವಾದ ಪ್ರೋತ್ಸಾಹವನ್ನು ನೀಡುತ್ತ ಕಾರ್ಯಕರ್ತರುಗಳನ್ನು ಅನುಗ್ರಹಿಸುತ್ತಿರುವವರು ಸಂಸ್ಥೆಯ **ಅಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳು**. ಶ್ರೀಮುಖವನ್ನಿತ್ತು ಅನುಗ್ರಹಿಸಿದ ಪೂಜ್ಯರಿಗೆ ನಮ್ಮ ಸಾಷ್ಟಾಂಗನಮನಗಳು.

ವಿಕ್ರಮಸಂ॥ ಮಾರ್ಗಶೀರ್ಷಕೃಷ್ಣಸಪ್ತಮೀ, **ವಿ॥ ಅನಂತಶರ್ಮಾಭುವನಗಿರಿ**
ಭಾನುವಾರ, ೧೭-೧೨-೨೦೦೦ **ಪ್ರಕಾಶಕರ ಪರವಾಗಿ**

## ದ್ವಿತೀಯ ಮುದ್ರಣ

**"ಯುಗಪುರುಷ ಶಂಕರ"** ಪ್ರಥಮ ಮುದ್ರಣದ ಪ್ರತಿಗಳೆಲ್ಲ ಕೆಲವೇ ತಿಂಗಳಲ್ಲಿ ಮಾರಾಟವಾಗಿ ಓದುಗರ ಕೈಸೇರಿದವು. ಆಸ್ತಿಕ ಜನತೆ ಈ ಗ್ರಂಥದ ಬಗ್ಗೆ ತೋರಿದ ಪ್ರೀತಿ ಔದಾರ್ಯಗಳಿಂದ ಉತ್ಸಾಹಗೊಂಡ **'ವೇದಾಂತಭಾರತಿ'**ಯು ಇದೀಗ ದ್ವಿತೀಯ ಮುದ್ರಣವನ್ನು ಹೊರತರುತ್ತಿದೆ. ಪ್ರಥಮ ಮುದ್ರಣಕ್ಕೆ ದೊರೆತ ಸ್ವಾಗತವೇ ಇದಕ್ಕೂ ದೊರಕಲಿ ಎಂದು ಆಶಿಸುತ್ತದೆ. ಈ ಸಂದರ್ಭದಲ್ಲಿ ದ್ವಿತೀಯ ಮುದ್ರಣವನ್ನು ಹೊರ ತರುವಲ್ಲಿ ಸಹಕರಿಸಿದ ಎಲ್ಲರಿಗೂ ಈ ಸಂಸ್ಥೆಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಕೃಷ್ಣರಾಜನಗರ **ಡಾ॥ ಶ್ರೀಧರ ಭಟ್ಟ ಐನಕೈ,**
೭-೧-೨೦೦೨ ನಿರ್ದೇಶಕರು, ವೇದಾಂತಭಾರತೀ

## ತೃತೀಯ ಮುದ್ರಣ

ವೇದಾಂತಭಾರತೀ ಗ್ರಂಥಮಾಲೆಯ ಪಂಚಮಪುಷ್ಪವಾದ **"ಯುಗಪುರುಷ ಶಂಕರ"** ಎಂಬ ಕಿರುಹೊತ್ತಿಗೆಯು ಇದೀಗ ತೃತೀಯ ಮುದ್ರಣವನ್ನು ಹೊಂದುತ್ತಿದೆ. ಶ್ರೀಶಂಕರ ಭಗವತ್ಪಾದರ ಜೀವನ ಮತ್ತು ಅವರ ಸಂದೇಶವನ್ನರಿತು ತಮ್ಮ ಜೀವನದುದ್ದಕ್ಕೂ ಅದನ್ನು ಅಳವಡಿಸಿಕೊಂಡು ಸಮಸ್ತರು ಶ್ರೇಯಸ್ಸನ್ನು ಹೊಂದಲಿ, ತನ್ಮೂಲಕ ವ್ಯಕ್ತಿ ಶುದ್ಧಿ, ಸಮಾಜ ಶುದ್ಧಿಯಾಗಲೆಂಬುದೇ ಸಂಸ್ಥೆಯ ಪರಮೋದ್ದೇಶ.

ಈ ಮುದ್ರಣವನ್ನು ಹೊರತರುವಲ್ಲಿ ಆರ್ಥಿಕ ಸಹಕಾರವನ್ನು ನೀಡಿದವರು ಶ್ರೀ ಹೆಚ್. ಪ್ರಚೇತ್ ಅವರು. ಶ್ರೀಯುತರು ವೇದಾಂತಭಾರತಿಯ ಸಕ್ರಿಯ ಕಾರ್ಯಕರ್ತರಾದ ಶ್ರೀ ಎಸ್. ಹನುಮಂತರಾವ್‌ರವರ ಪುತ್ರರು. ಅವರ ಮೇಲೆ ಶ್ರೀಶಂಕರರ ಕೃಪಾದೃಷ್ಟಿ ಸದಾ ಇರಲೆಂದು ಆಶಿಸುತ್ತೇವೆ. ಸುಂದರವಾಗಿ ಮುದ್ರಿಸಿದ ಸ್ಕ್ಯಾನ್ ಪ್ರಿಂಟ್‌ರವರಿಗೆ ನಮ್ಮ ಕೃತಜ್ಞತೆಗಳು.

ಶ್ರೀ ವ್ಯಯ ಸಂ॥ದ॥ ವೈಕುಂಠ ಏಕಾದಶೀ, **ಡಾ॥ ಶ್ರೀಧರ ಭಟ್ಟ ಐನಕೈ,**
ಸ್ಥಿರವಾಸರಃ, ದಿನಾಂಕ : ೩೦-೧೨-೨೦೦೬ ನಿರ್ದೇಶಕರು, ವೇದಾಂತಭಾರತೀ

# ನಿವೇದನೆ

ಈ ರಾಷ್ಟ್ರವನ್ನು ಕ್ಷತ್ರಿಯ ರಾಜರು ಪರಿಪಾಲಿಸುತ್ತಿದ್ದಾಗ ವೈದಿಕ ಧರ್ಮವು ಸುರಕ್ಷಿತವಾಗಿತ್ತು. ಕ್ಷತ್ರಿಯರಿಗೆ ಧರ್ಮದಲ್ಲಿ ಗೌರವ ಬುದ್ಧಿ ಇತ್ತು. ತಮ್ಮ ಹಿರಿಯರು ತೋರಿಸಿಕೊಟ್ಟ ಮಾರ್ಗದಲ್ಲಿಯೇ ನಡೆಯಬೇಕೆಂದೂ ವಂಶಕ್ಕೆ ಅಪಕೀರ್ತಿಯು ತಾಗಬಾರದೆಂದೂ ಅವರಿಗೆ ಆತ್ಮಾಭಿಮಾನವಿತ್ತು. ಕ್ಷತ್ರಿಯರ ಕಾಲವು ಗತಿಸಿತು. ನಾನಾ ಬಣ್ಣದ ಭೂಪಾಲರು ಗದ್ದುಗೆಯನ್ನೇರಿದರು. ನಾಲ್ಕು ಪಾದಗಳಿದ್ದ ಧರ್ಮ ಪುರುಷನು ಒಂದೊಂದು ಪಾದವನ್ನು ಮೇಲಕ್ಕೆ ಎತ್ತುತ್ತ ಕಡೆಗೆ ಮೂರು ಕಾಲುಗಳನ್ನು ಭೂಮಿಗೆ ಅಂಟಿಸದೆ ಒಗ್ಗಾಲಿನಿಂದ ನಿಂತಿದ್ದನು. ವಿದೇಶೀಯರು ಈ ದೇಶದ ಮೇಲೆ ಧಾಳಿ ಮಾಡಿ ಪ್ರಭುಗಳಾದಾಗ ಧರ್ಮಪುರುಷನು ಮೂಲೆಗೆ ಸರಿದು ಗೋಡೆಗೆ ಒರಗಿಕೊಂಡನು. ಆಮೇಲೆ ಬ್ರಿಟಿಷರ ಆಳ್ವಿಕೆಯಲ್ಲಿ ಗೋಡೆಯ ಅವಲಂಬನವಿಲ್ಲದೆ ದೊಣ್ಣೆಯೂರಿ ನಿಂತನು. ಅನಂತರ ಲೋಕಮಾನ್ಯ ತಿಲಕರು, ಮಹಾತ್ಮಾ ಗಾಂಧಿಯವರು ಮುಂತಾದ ನೇತಾರರು ರಾಷ್ಟ್ರದ ಸ್ವಾತಂತ್ರ್ಯವನ್ನು ಕುರಿತು ಮಾತುಗಳನ್ನಾಡುತ್ತ ಸತ್ಯ, ಧರ್ಮ, ಅಹಿಂಸೆ – ಇತ್ಯಾದಿ ಪದಗಳನ್ನು ಬಳಸುವುದನ್ನು ಕೇಳಿ ಈ ಧರ್ಮ ಪುರುಷನು ದೊಣ್ಣೆಯನ್ನೆಸೆದು ಮುಂದಕ್ಕೆ ನುಗ್ಗಿಬರಲು ಹವಣಿಸುತ್ತಿದ್ದನು. ಯಾವ ರೀತಿಯಲ್ಲೆಂದರೆ,

**ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ**
**ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ ।**
**ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ** – ಈ ರೀತಿಯಲ್ಲಿ.

ದೇಶಕ್ಕೆ ಸ್ವಾತಂತ್ರ್ಯವು ಬಂದೇ ಬಿಟ್ಟಿತು! ಆಗ ಏನಾಯಿತೆಂದರೆ–

**ಹಾ ಹಂತ ಹಂತ ನಲಿನೀಂ ಗಜ ಉಜ್ಜಹಾರ ॥**

ಧರ್ಮಪುರುಷನು ದೊಣ್ಣೆಯನ್ನು ಎಸೆದು ನೆಲದ ಮೇಲೆ ಕುಕ್ಕರಿಸಿದನು!

ಈ ಪರಿಸ್ಥಿತಿಯನ್ನು ತಮ್ಮ ದೂರದೃಷ್ಟಿಯಿಂದ ಗ್ರಹಿಸಿದ ಶ್ರೀ ಶಂಕರಾಚಾರ್ಯರು ರಾಷ್ಟ್ರದ ನಾಲ್ಕು ದಿಕ್ಕುಗಳಲ್ಲಿ ಧರ್ಮರಕ್ಷಣೆಗಾಗಿ ನಾಲ್ಕು ವೈದಿಕ ಮಠಗಳನ್ನು ಸ್ಥಾಪಿಸಿದರು. ಆ ಮೇಲ್ಪಂಕ್ತಿಯನ್ನು ಅನುಸರಿಸಿ ಆಚಾರ್ಯರ ಶಿಷ್ಯರಿಂದ ಇನ್ನೂ ಹಲವಾರು ಮಠಗಳು ಸ್ಥಾಪಿತವಾದವು. ನೆಲದಲ್ಲಿ ಕುಕ್ಕರಿಸಿದ ಧರ್ಮಪುರುಷನು, ಈ ಮಠಗಳು ಎರೆಯುವ ಹಾಲನ್ನು ಕುಡಿಯುತ್ತಾ ಇನ್ನೂ ಜೀವ ಹಿಡಿದಿದ್ದಾನೆ.

ಯಡತೊರೆ ಶ್ರೀಯೋಗಾನಂದೇಶ್ವರಸರಸ್ವತೀಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶಂಕರಭಾರತೀಮಹಾಸ್ವಾಮಿಗಳು ಒಂದು ಬೃಹತ್ತಾದ ಜ್ಞಾನಯಜ್ಞವನ್ನು

ನಡೆಸಲು ಸಂಕಲ್ಪಿಸಿ, ಶ್ರೀಶಂಕರಭಗವತ್ಪಾದರ ವಿಷಯವಾಗಿ ಒಂದು ಪುಸ್ತಕವನ್ನು ಬರೆದುಕೊಡಬೇಕೆಂದು ನನಗೆ ಆದೇಶಿಸಿದರು. ಅದರಲ್ಲಿ ಆಚಾರ್ಯರ ಜೀವನ ಚರಿತೆ, ಅದ್ವೈತ ಸಿದ್ಧಾಂತದ ರೂಪರೇಖೆ, ಆಚಾರ್ಯರ ಕೆಲವು ಸೂಕ್ತಿಗಳ ವಿವರಣೆ, ಅವರಿಂದ ರಾಷ್ಟ್ರಕ್ಕೆ, ಧರ್ಮರಕ್ಷಣೆಗೆ ಆದ ಉಪಕಾರ, ಇವಿಷ್ಟು ಸಂಕ್ಷೇಪವಾಗಿ ಬರಬೇಕೆಂದೂ ತಿಳಿಸಿದರು. ಈ ಪುಸ್ತಕವು ಪರಿಚಯಾತ್ಮಕವಾದ ಚಿಕ್ಕ ಕೈಪಿಡಿಯಾಗಿದ್ದರೆ, ಅದರಿಂದ ಬಹುಜನರಿಗೆ ಪ್ರಯೋಜನವಾಗುವುದೆಂದೂ ಸೂಚಿಸಿದರು. ಅವರ ಆಜ್ಞೆಯನ್ನು ಯಥಾಮತಿಯಾಗಿ ಪಾಲಿಸುವುದಕ್ಕಾಗಿ ಈ ಗ್ರಂಥದ ರಚನೆಯಾಯಿತು.

ಈ ಹಿಂದೆ ಶ್ರೀಶೃಂಗೇರಿಜಗದ್ಗುರುಮಹಾಸ್ವಾಮಿಗಳವರ ಆದೇಶದಂತೆ **ಮಾಧವೀಯಶಂಕರದಿಗ್ವಿಜಯ**ವನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಅದು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. ಅನಂತರ "**ಶ್ರೀ ಶಂಕರಚರಿತಾಮೃತಮ್**" ಎಂಬ ಶ್ಲೋಕರೂಪವಾದ ಒಂದು ಚಿಕ್ಕ ಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿ ಕನ್ನಡಕ್ಕೆ ಅನುವಾದಿಸಿದೆನು. ಅದನ್ನು ಹೆಬ್ಬೂರಿನ **ಶ್ರೀ ಶ್ರೀ ನಾರಾಯಣಾಶ್ರಮಸ್ವಾಮಿಗಳ** ನೇತೃತ್ವದಲ್ಲಿರುವ ಅದ್ವೈತವಿದ್ಯಾಪ್ರತಿಷ್ಠಾನವು ಪ್ರಕಾಶಿಸಿದೆ. ಈ ದಿಶೆಯಲ್ಲಿ "**ಯುಗಪುರುಷ ಶಂಕರ**" ಮೂರನೆಯ ಕೃತಿ. ಶ್ರೀಭಗವತ್ಪಾದರ ಸೇವೆಗೆ ನನಗೊಂದು ಸದವಕಾಶವನ್ನು ಕಲ್ಪಿಸಿಕೊಟ್ಟಿರುವ **ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳ** ಚರಣಗಳಿಗೆ ಕೃತಜ್ಞತೆಯಿಂದ ಸಾಷ್ಟಾಂಗ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ಈ ಗ್ರಂಥವನ್ನು ಮುದ್ರಿಸುವಾಗ ಕರಡನ್ನು ಓದಿ ಶುದ್ಧವಾಗಿ ಮುದ್ರಿತವಾಗುವಂತೆ ಉಪಕರಿಸಿದ ಚಿ॥ ವಿದ್ವಾನ್ ಜಿ. ಮಹಾಬಲೇಶ್ವರ ಭಟ್ಟರ ಮೇಲೆ ಆಚಾರ್ಯರ ಕೃಪಾದೃಷ್ಟಿ ಸದಾ ಇರಲೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಭಗವದ್ವಿಭೂತಿರೇಕಾ ಶಂಕರನಾಮ್ನಾ ಬಭೂವ ಭುವಿ ಭೂಮಾ ।**
**ಯದ್ವಚನಂ ಶ್ರುತಿಸೀಮಾ ಯದ್ರಚನಾ ಸರಸ್ವತೀಧಾಮ ॥**
**ಸದ್ಗುರುಸೇವಾಭಾರೋ ದ್ವೇಧಾ ತ್ರೇಧಾ ಚತುರ್ಧಾ ವಾ ।**
**ಪತತು ಮದೀಯೇ ಶಿರಸಿ ಪ್ರತ್ನಂ ಮನ್ಯೇಽಥ ಬೃಂಹಿತಂ ಭಾಗ್ಯಮ್ ॥**

ವಿಕ್ರಮಸಂ॥ ಮಾರ್ಗಶೀರ್ಷಕೃಷ್ಣಸಪ್ತಮೀ, **ವಿ॥ ಎನ್. ರಂಗನಾಥಶರ್ಮಾ**
ಭಾನುವಾರ, ೧೭-೧೨-೨೦೦೦

# ಯುಗಪುರುಷ ಶಂಕರ

ಭಾರತೀಯರಾದ ನಮಗೆ ವೇದವು ಪವಿತ್ರವಾದ ಆಧಾರ ಗ್ರಂಥವಾಗಿದೆ. ಅದು ಸತ್ಯವನ್ನೇ ಹೇಳುತ್ತದೆಯೆಂದೂ ಸಕಲ ಮಾನವರ ಶ್ರೇಯಸ್ಸಿಗೆ ದಾರಿಯನ್ನು ತಿಳಿಸಿಕೊಟ್ಟಿದೆಯೆಂದೂ ನಾವು ನಂಬಿದ್ದೇವೆ. ವೇದವು ಮನುಷ್ಯ ರಚಿತವಾದ್ದಲ್ಲ. ಪ್ರಾಚೀನ ಕಾಲದಲ್ಲಿ ಋಷಿಗಳು ತಪಸ್ಸಿನಲ್ಲಿ ನಿರತರಾಗಿ ಸಮಾಧಿ ಸ್ಥಿತಿಯಲ್ಲಿದ್ದಾಗ, ಈಶ್ವರನ ಅನುಗ್ರಹದಿಂದ ಆ ಋಷಿಗಳಿಗೆ ವೇದಮಂತ್ರಗಳು ಹೊಳೆದವು. ಆ ಋಷಿಗಳು ವೇದಮಂತ್ರಗಳ ದ್ರಷ್ಟಾರರು, ಕರ್ತಾರರಲ್ಲ ಎಂದು ನಮ್ಮ ದೃಢವಾದ ವಿಶ್ವಾಸ. ಆದ್ದರಿಂದಲೇ ನಮ್ಮ ಜನರು ಬಹಳ ವಿಸ್ತಾರವಾಗಿರುವ ವೇದರಾಶಿಯನ್ನು ಗುರು-ಶಿಷ್ಯ ಪರಂಪರೆಯಿಂದ ಕಲಿತು ಕಂಠಪಾಠಮಾಡಿ, ಅದನ್ನು ರಕ್ಷಿಸುತ್ತ ಉಳಿಸಿಕೊಂಡು ಬಂದಿದ್ದಾರೆ. ನಮ್ಮ ಧರ್ಮಶಾಸ್ತ್ರವೇ ಮೊದಲಾದ ಸಕಲ ಪ್ರಾಚೀನ ಗ್ರಂಥಗಳೂ ವೇದಮೂಲಕವಾದವು. ಭಾರತೀಯರ ಸಕಲ ವ್ಯವಹಾರ ಪದ್ಧತಿಗಳೂ ಮತಾಚಾರಗಳೂ ನಾಗರಿಕತೆಯೂ ವೇದಮೂಲಕವಾದ್ದರಿಂದ ಇದೆಲ್ಲವೂ ವೈದಿಕಸಂಸ್ಕೃತಿ ಎನ್ನಿಸಿಕೊಳ್ಳುತ್ತದೆ. ಈ ಸಂಸ್ಕೃತಿಯು ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದವರೆಗೂ ಸರ್ವತ್ರ ವ್ಯಾಪಿಸಿಕೊಂಡಿದೆ. ಈ ವೈದಿಕ ಸಂಸ್ಕೃತಿಯನ್ನೇ ಇಂದಿನ ಜನರು ಹಿಂದೂ ಸಂಸ್ಕೃತಿ, ಹಿಂದೂತ್ವ ಎನ್ನುತ್ತಾರೆ. ಇದರ ಸತ್ತ್ವಪೂರ್ಣವಾದ ಆಚರಣೆಯೇ **ಸನಾತನ ಧರ್ಮ**. ಸನಾತನವೆಂದರೆ **ಶಾಶ್ವತ**ವಾದದ್ದು ಎಂದರ್ಥ.

ಹೀಗೆ ಅನಾದಿಕಾಲದಿಂದ ಈ ರಾಷ್ಟ್ರದಲ್ಲಿ ನೆಲೆಸಿದ್ದ ವೈದಿಕ ಧರ್ಮಕ್ಕೆ ಒಂದು ವ್ಯಾಘಾತವೂ ಪ್ರಾಪ್ತವಾಯಿತು. ದೇವರನ್ನು ವೇದವನ್ನು ನಂಬದ ಚಾರ್ವಾಕರೆಂಬ ನಾಸ್ತಿಕರು ತಲೆದೋರಿ, ಪವಿತ್ರವೂ ಪ್ರಾಚೀನವೂ ಆದ ಎಲ್ಲವನ್ನೂ ನಾಶಮಾಡಲು ಹೊರಟರು. ಬುದ್ಧಮತವನ್ನು ಪ್ರಚಾರ ಮಾಡಲು ತೊಡಗಿದ್ದ ಬೌದ್ಧಪಂಡಿತರು ವೇದವನ್ನೂ ನಮ್ಮ ಆಚಾರ ವಿಚಾರಗಳನ್ನೂ ದೂಷಿಸುತ್ತ ರಾಜಾಶ್ರಯವನ್ನು ಪಡೆದು ಪ್ರಬಲರಾದರು. ಇವರ ಜೊತೆಗೆ ಜೈನರೂ ಕೈಗೂಡಿಸಿದರು. ಹಾಗೆಯೇ ತಂತ್ರಾಗಮಗಳ ಪ್ರಾಬಲ್ಯದಿಂದ ಶಾಕ್ತ, ಪಾಶುಪತ, ಭೈರವ, ಸೌರ, ಗಾಣಪತ್ಯ-

ಮುಂತಾದ ಮತಗಳೂ ಹುಟ್ಟಿ ಧರ್ಮಬಾಹಿರವಾದ ವಾಮಾಚಾರಗಳಲ್ಲಿ ತೊಡಗಿದವು. ವೈದಿಕರಲ್ಲಿಯೇ ಕೆಲವರು ಸಂಪ್ರದಾಯ ಕ್ರಮವನ್ನು ಉಲ್ಲಂಘಿಸಿ ವೇದವಾಕ್ಯಗಳಿಗೆ ಬೇರೆ ಬೇರೆ ಅರ್ಥಗಳನ್ನು ಹೇಳುತ್ತ ವೇದಾನುಯಾಯಿ ಗಳಲ್ಲಿಯೇ ಗೊಂದಲವನ್ನು ತುಂಬಿದರು. ಹಿಂದೂ ಸಮಾಜವು ಒಡೆದು ಅಸ್ತವ್ಯಸ್ತವಾಗುವ ಪರಿಸ್ಥಿತಿಯುಂಟಾಯಿತು.

ಈ ಅನರ್ಥಗಳಿಗೆ ಮುಖ್ಯಕಾರಣವೇನೆಂದರೆ, ಧರ್ಮರಕ್ಷಕನಾದ ಕ್ಷತ್ರಿಯ ರಾಜನಿಲ್ಲದೆ ಹೋದದ್ದು. ಸಮಸ್ತ ಭರತಖಂಡದಲ್ಲಿಯೂ ಪ್ರಭುತ್ವವನ್ನು ನಡೆಸಬಲ್ಲ ಚಕ್ರವರ್ತಿ ಇರಲಿಲ್ಲ. ಯಾವ ಹೊಂದಾಣಿಕೆಯೂ ಇಲ್ಲದ ರಾಜರು ಉದ್ಭವಿಸಿ, ರಾಗದ್ವೇಷಲೋಭಾದಿಗಳಿಗೆ ಒಳಗಾಗಿ ಪರಸ್ಪರ ಕಚ್ಚಾಡುತ್ತಿದ್ದರು. ಧರ್ಮದ ವಿಷಯವಿರಲಿ ಪ್ರಜೆಗಳ ಲೌಕಿಕಹಿತವನ್ನೂ ಗಣಿಸದೆ ಜಗಳವಾಡುತ್ತಿದ್ದರು. ಈ ರೀತಿಯಾಗಿ ಲೌಕಿಕ, ಪಾರಮಾರ್ಥಿಕ ವಿಷಯಗಳೆರಡರಲ್ಲಿಯೂ ಅಶಾಂತಿ, ಅಸಮಾಧಾನಗಳು ಈ ರಾಷ್ಟ್ರದಲ್ಲಿ ತುಂಬಿಕೊಂಡಿದ್ದವು. ಇಂತಹ ಸಮಯದಲ್ಲಿ, ಎಲ್ಲೆಲ್ಲಿಯೂ ಕತ್ತಲೆಯು ತುಂಬಿಕೊಂಡಾಗ ಸೂರ್ಯೋದಯವಾಗುವಂತೆ, ಶ್ರೀಶಂಕರಾಚಾರ್ಯರ ಉದಯವಾಯಿತು. ಆಚಾರ್ಯರ ಜೀವನ ಚರಿತ್ರೆಯು ನಮಗೆ ಸರಿಯಾಗಿ ತಿಳಿದುಬಂದಿಲ್ಲ. ಅನೇಕ ಇತಿಹಾಸಕಾರರ ಹೇಳಿಕೆಗಳಿಂದ ನಿಶ್ಚಿತವಾದ ಜೀವನ ವೃತ್ತಾಂತವನ್ನು ಹೀಗೆ ಸಂಕ್ಷೇಪಿಸಿ ಹೇಳಬಹುದು.

ಕೇರಳದೇಶದ ಪೂರ್ಣಾನದೀತೀರದಲ್ಲಿ ಕಾಲಟಿ ಎಂಬ ಒಂದು ಗ್ರಾಮವಿದೆ. ಅದು ಈಗ ಪಟ್ಟಣವಾಗಿ ಬೆಳೆಯುತ್ತಿದೆ. ಆ ಗ್ರಾಮದಲ್ಲಿ ಶಿವಗುರು ಮತ್ತು ಆರ್ಯಾಂಬಾ ಎಂಬ ದೈವಭಕ್ತರಾದ ಬ್ರಾಹ್ಮಣ ದಂಪತಿಗಳು ವಾಸಿಸುತ್ತಿದ್ದರು. ಶಿವಗುರುವು ದೊಡ್ಡ ವಿದ್ವಾಂಸನೆಂದು ಕೀರ್ತಿಶಾಲಿಯಾಗಿದ್ದನು. ಈತನದು ಅತ್ರಿಗೋತ್ರ, ಕೃಷ್ಣಯಜುರ್ವೇದದ ತೈತ್ತಿರೀಯಶಾಖೆ, ಪರಶಿವನ ಆರಾಧನೆಯಲ್ಲಿ ತೊಡಗಿದ್ದ ಈ ದಂಪತಿಗಳಿಗೆ ಕೆಲವು ಕಾಲದ ಮೇಲೆ ತೇಜಸ್ವಿಯಾದ ಒಂದು ಗಂಡು ಮಗು ಜನಿಸಿತು. ಆ ಮಗುವಿಗೆ ಶಂಕರ ಎಂದು ನಾಮಕರಣ ಮಾಡಿದರು. ಶಂಕರನಿಗೆ ಮೂರು ವರ್ಷಗಳು ತುಂಬುವಷ್ಟರಲ್ಲಿ ದೈವಗತಿಯಿಂದ ಶಿವಗುರುವು ಸ್ವರ್ಗಸ್ಥನಾದನು. ಒಬ್ಬನೇ ಮಗನಾದ ಶಂಕರನನ್ನು ಆರ್ಯಾಂಬೆ ಪ್ರೀತಿಯಿಂದ

ಸಾಕಿಸಲಹಿ, ಆತನ ಐದನೆಯ ವರ್ಷದಲ್ಲಿಯೇ ಬಂಧುಗಳಿಂದ ಶಂಕರನ ಉಪನಯನವನ್ನು ಮಾಡಿಸಿದಳು. ಪ್ರಸಿದ್ಧವಾದ ಒಂದು ವೇದ–ಸಂಸ್ಕೃತ ಪಾಠಶಾಲೆಯಲ್ಲಿ ಶಂಕರನ ವಿದ್ಯಾಭ್ಯಾಸವು ನಡೆಯಿತು. ಶಂಕರನು ಅತ್ಯಂತ ಮೇಧಾವಿಯಾದ್ದರಿಂದ ಅಲ್ಪಕಾಲದಲ್ಲಿಯೇ ಸಂಸ್ಕೃತಭಾಷೆಯಲ್ಲಿ ಪ್ರಾವೀಣ್ಯವನ್ನು ಗಳಿಸಿ, ತರ್ಕ ವ್ಯಾಕರಣಾದಿ ಶಾಸ್ತ್ರಗಳಲ್ಲಿ ಪಂಡಿತನಾಗಿ ವೇದಗಳನ್ನು ಕಂಠಪಾಠ ಮಾಡಿ ನಿರರ್ಗಳವಾಗಿ ಪಠಿಸಲು ಸಮರ್ಥನಾದನು. ಉಪಾಧ್ಯಾಯರು ಈ ಬಾಲಕನ ಬುದ್ಧಿಸಾಮರ್ಥ್ಯಕ್ಕೆ ತಲೆದೂಗಿ ತಮ್ಮ ಪಾಠಶಾಲೆಯ ವಿದ್ಯಾಭ್ಯಾಸವು ಪೂರ್ಣವಾಯಿತೆಂದು ವಿಸ್ಮಯಾನಂದಗಳಿಂದ ಶಂಕರನನ್ನು ಬೀಳ್ಕೊಟ್ಟರು.

ಶ್ರೀಶಂಕರನು ಗುರುಕುಲದಿಂದ ಮನೆಗೆ ಬಂದು ವೃದ್ಧೆಯಾದ ತಾಯಿ ಆರ್ಯಾಂಬೆಯ ಶುಶ್ರೂಷೆಯಲ್ಲಿ ತೊಡಗಿದನು. ಆ ಬ್ರಹ್ಮಚಾರಿಯ ತೇಜಸ್ಸು, ವಿದ್ಯೆ, ಸದ್ಗುಣಗಳ ಕೀರ್ತಿಯು ಬೆಳದಿಂಗಳಿನಂತೆ ಎಲ್ಲೆಲ್ಲಿಯೂ ಹರಡಿತು. ಕೇರಳದೇಶದ ರಾಜನು ಈ ಅದ್ಭುತವಟುವನ್ನು ನೋಡಬೇಕೆಂಬ ಕುತೂಹಲದಿಂದ ಆಗಮಿಸಿ ವಿದ್ಯಾವಿನಯ ಸಂಪನ್ನನೂ ವಾಗ್ಮಿಯೂ ಆದ ಈ ಬ್ರಹ್ಮಚಾರಿಯನ್ನು ಕಂಡು ಆಶ್ಚರ್ಯಪಟ್ಟನು. ಅಲ್ಲದೆ ಆತನು ಸಂಪ್ರೀತನಾಗಿ ಶ್ರೀಶಂಕರನಿಗೆ ವಿಪುಲವಾದ ಹಣವನ್ನು ಕಾಣಿಕೆಯಾಗಿ ಕೊಡಲು ಬಯಸಿದನು. ಆದರೆ ಈ ಬ್ರಹ್ಮಚಾರಿಯು ಒಂದು ಕಾಸನ್ನೂ ಮುಟ್ಟಲಿಲ್ಲ. ಎಲ್ಲ ಹಣವನ್ನೂ ಆ ರಾಜನಿಂದಲೇ ಬಡಜನರಿಗೆ ಕೊಡಿಸಿಬಿಟ್ಟನು! ಕೇರಳ ರಾಜನು ಶ್ರೀಶಂಕರನ ನಿಃಸ್ಪೃಹತೆಯನ್ನು ಕಂಡು ಮೆಚ್ಚಿ ಆತನಿಗೂ ಆರ್ಯಾಂಬೆಗೂ ನಮಸ್ಕರಿಸಿ “ನನ್ನ ರಾಜ್ಯದಲ್ಲಿ ಒಂದು ದಿವ್ಯಜ್ಯೋತಿಯು ಉದಿಸಿದೆ. ನಾನು ಧನ್ಯನಾದೆನು!” ಎಂದು ಹೇಳಿಕೊಳ್ಳುತ್ತ ತನ್ನ ರಾಜಧಾನಿಗೆ ಹಿಂದಿರುಗಿದನು.

ಆಗ ಶ್ರೀಶಂಕರನಿಗೆ ಹನ್ನೆರಡುವರ್ಷ ವಯಸ್ಸಾಗಿರಬಹುದು. ಪಿತ್ರಾರ್ಜಿತವಾದ ಆಸ್ತಿ ಯಥೇಷ್ಟವಾಗಿತ್ತು. ಆದರೂ ಆ ಬಾಲಕನಿಗೆ ವೈರಾಗ್ಯಪರವಾದ ಭಾವನೆಗಳು ತಲೆದೋರಿದವು. ವೈರಾಗ್ಯವು ತೀವ್ರವಾಯಿತು. ತಾನು ಸಂನ್ಯಾಸಿಯಾಗಬೇಕೆಂಬ ಇಚ್ಛೆ ಪ್ರಬಲವಾಯಿತು. ಆತನು ಸಂನ್ಯಾಸಿಯಾಗುವುದು ಆರ್ಯಾಂಬೆಗೆ ಇಷ್ಟವಾಗಲಿಲ್ಲ. ತಾಯಿಯ ಅನುಮತಿಯಿಲ್ಲದೆ ಸಂನ್ಯಾಸವನ್ನು ಸ್ವೀಕರಿಸುವುದು ಯುಕ್ತವಲ್ಲವೆಂದೆಣಿಸಿ ಶ್ರೀಶಂಕರನು ಚಿಂತಾಕ್ರಾಂತನಾಗಿದ್ದನು. ಒಂದು ದಿನ

ಆತನು ಪೂರ್ಣಾನದಿಯಲ್ಲಿ ಸ್ನಾನಕ್ಕೆ ಇಳಿದಾಗ ಒಂದು ಮೊಸಳೆ ಅವನ ಕಾಲನ್ನು ಹಿಡಿದುಕೊಂಡು ಹೊಳೆಯಲ್ಲಿ ಆಳವಾದ ಪ್ರದೇಶಕ್ಕೆ ಎಳೆಯತೊಡಗಿತು. ಆತನ ಕೂಗನ್ನು ಕೇಳಿ ತೀರದಲ್ಲಿದ್ದ ಆರ್ಯಾಂಬೆ ಶೋಕಾರ್ತಳಾಗಿ ಹಾಹಾಕಾರ ಮಾಡಿದಳು. ಶ್ರೀಶಂಕರನು "ಅಮ್ಮ ಈಗ ನನ್ನನ್ನು ಒಂದು ಮೊಸಳೆ ಹಿಡಿದು ಎಳೆಯುತ್ತಿದೆ. ನನ್ನ ಗತಿ ಮುಗಿದಂತೆ ಕಾಣುತ್ತದೆ. ಈ ಸಮಯದಲ್ಲಾದರೂ ನಾನು ಸಂನ್ಯಾಸಿಯಾಗಬೇಕು. ಅನುಮತಿಯನ್ನು ಕೊಡು" ಎಂದು ಕೂಗಿ ಹೇಳಿದನು. ಆರ್ಯಾಂಬೆಗೆ ದಿಕ್ಕು ತೋರಲಿಲ್ಲ. ಇದು ತನ್ನ ಮಗನ ಕಡೆಯ ಬಯಕೆಯೆಂದೆಣಿಸಿ ಸಂನ್ಯಾಸಕ್ಕೆ ಅನುಮತಿಯನ್ನಿತ್ತಳು. ಶ್ರೀಶಂಕರನು "ನಾನು ಸಂನ್ಯಾಸವನ್ನು ಸ್ವೀಕರಿಸಿದ್ದೇನೆ. ಈಗ ನಾನು ಸಂನ್ಯಾಸಿ" ಎಂದು ಮನಸ್ಸಿನಲ್ಲಿಯೇ ಸಂಕಲ್ಪಿಸಿ ಆಪತ್ ಸಂನ್ಯಾಸವನ್ನು ಸ್ವೀಕರಿಸಿದನು. ದೈವಯೋಗದಿಂದ ಮೊಸಳೆ ಅವನ ಕಾಲನ್ನು ಬಿಟ್ಟಿತು. ಬಾಲಕನು ದಡಕ್ಕೆ ಬಂದನು. ಆರ್ಯಾಂಬೆಗೆ ಹರ್ಷಶೋಕಗಳೆರಡೂ ಒಟ್ಟಿಗೆ ಉದ್ಭವಿಸಿದವು.

ತಾಯಿ–ಮಕ್ಕಳಿಬ್ಬರೂ ಮನೆಗೆ ಬಂದರು. ಶ್ರೀಶಂಕರನು ತನ್ನ ವಾಗ್ಮಿತೆಯಿಂದ ತಾಯಿಗೆ ಸಮಾಧಾನವನ್ನು ಹೇಳಿ, ಎಡಬಲದ ಮನೆಗಳಲ್ಲಿದ್ದ ದಾಯಾದಿಗೃಹಸ್ಥರಿಗೆ ತನ್ನ ಪರಿಸ್ಥಿತಿಯನ್ನು ವಿವರಿಸಿ ಹೇಳಿದನು. "ನಾನು ಸಂನ್ಯಾಸಿಯಾಗಿ ಹೊರಟು ಹೋಗುತ್ತಿದ್ದೇನೆ. ನನ್ನ ತಾಯಿ ಏಕಾಕಿನಿಯಾಗಿದ್ದಾಳೆ. ಅವಳ ಯೋಗಕ್ಷೇಮಗಳನ್ನು ನೀವು ಕಾರುಣ್ಯದಿಂದ ನೋಡಿಕೊಳ್ಳಬೇಕು" ಎಂದು ಕೇಳಿಕೊಂಡನು. ಅವರು ಒಪ್ಪಿದರು. ಶ್ರೀಶಂಕರನು ತನ್ನ ತಾಯಿಯನ್ನು ಸಂತೈಸಿ ಅವಳು ಸ್ಮರಿಸಿಕೊಂಡಾಗ ಬರುತ್ತೇನೆಂದು ಹೇಳಿ, ಕಾಷಾಯ ವಸ್ತ್ರವನ್ನುಟ್ಟು ದಂಡವನ್ನು ಹಿಡಿದು ಮನೆಯಿಂದ ನಿಷ್ಕ್ರಮಿಸಿದನು. ಗ್ರಾಮಸ್ಥರೆಲ್ಲರೂ ವಿಸ್ಮಿತರಾದರು.

ಆಗ ನರ್ಮದಾನದಿತೀರದಲ್ಲಿ ಶ್ರೀಗೋವಿಂದಭಗವತ್ಪಾದರೆಂಬ ಯತೀಂದ್ರರು ನೆಲೆಸಿದ್ದರು. ಅವರು ಶ್ರೀಗೌಡಪಾದಾಚಾರ್ಯರ ಸಾಕ್ಷಾತ್ ಶಿಷ್ಯರು. ಬ್ರಹ್ಮಜ್ಞಾನಿಗಳೆಂದು ವಿಖ್ಯಾತರಾಗಿದ್ದ ಅವರ ಬಳಿಗೆ ಶ್ರೀಶಂಕರನು ಹೋಗಿ ನಮಸ್ಕರಿಸಿ ತನ್ನ ವೃತ್ತಾಂತವನ್ನು ಹೇಳಿಕೊಂಡನು. ಈ ಬಾಲಯತಿಯ ವಿನಯ, ತೇಜಸ್ಸು, ವಾಗ್ಮಿತೆಗಳನ್ನು ಕಂಡು ಸಂತುಷ್ಟರಾದ ಶ್ರೀಗೋವಿಂದಯತಿಗಳು

ಈತನಿಗೆ ವಿಧಿಪೂರ್ವಕವಾಗಿ ಸಂನ್ಯಾಸದೀಕ್ಷೆಯನ್ನಿತ್ತು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಅನಂತರ ಶ್ರೀಶಂಕರಯತಿಗಳು ಗುರುಗಳಿಂದ ವೇದಾಂತ ದರ್ಶನವನ್ನು ಅಧ್ಯಯನಮಾಡಿದರು. ಉಪನಿಷತ್ತು, ಭಗವದ್ಗೀತೆ, ಶಾರೀರಕ ಸೂತ್ರ (ಬ್ರಹ್ಮಸೂತ್ರ) ಎಂಬ ಪ್ರಸ್ಥಾನತ್ರಯವನ್ನು ಶ್ರೀಗೋವಿಂದಯತಿಗಳು ಶ್ರೀಶಂಕರರಿಗೆ ಬೋಧಿಸಿ ಸಾಂಪ್ರದಾಯಿಕವಾದ ವೈದಿಕಸಿದ್ಧಾಂತವು ಕೇವಲ ಬ್ರಹ್ಮಾದ್ವೈತವೇ ಎಂದು ತಿಳಿಸಿದರು. ಮಹಾಮೇಧಾವಿಗಳಾದ ಶ್ರೀಶಂಕರರು ಬಹುಬೇಗನೆ ಶಾಸ್ತ್ರರಹಸ್ಯವನ್ನರಿತುಕೊಂಡು ಸಕಲಶಾಸ್ತ್ರಗಳಲ್ಲಿಯೂ ನಿಷ್ಣಾತರಾದರು. ಅನಂತರ ಗುರುಗಳ ಆದೇಶದಂತೆ ಪ್ರಸ್ಥಾನತ್ರಯಕ್ಕೆ ಭಾಷ್ಯಗಳನ್ನು ರಚಿಸಿ ವೇದಾಂತ ಪ್ರತಿಪಾದ್ಯವಾದ ಕೇವಲಾದ್ವೈತವನ್ನು ಸ್ಥಾಪಿಸಬೇಕೆಂದೂ ಲೋಕಸಂಗ್ರಹ ಕಾರ್ಯದಲ್ಲಿ ತೊಡಗಿ ಅವೈದಿಕಮತಗಳ ಪ್ರಸರಣವನ್ನು ತಡೆಗಟ್ಟಬೇಕೆಂದೂ ಸಂಕಲ್ಪಿಸಿ, ಗುರುಗಳ ಆಶೀರ್ವಾದಗಳನ್ನು ಪಡೆದು ಕಾಶಿಗೆ ಪ್ರಯಾಣ ಮಾಡಿದರು. ಶ್ರೀ ವಿಶ್ವನಾಥ ಸ್ವಾಮಿಯನ್ನು ದರ್ಶನ ಮಾಡಿ ಗಂಗಾತೀರದಲ್ಲಿ "**ಕರತಲಭಿಕ್ಷಃ ತರುತಲವಾಸಃ**" ಆದರು.

ರಾತ್ರಿಯ ಅವಧಿ ಕಳೆದು ಸೂರ್ಯನು ಉದಿಸುವುದು ತಡವಾಗಬಹುದು. ಸೂರ್ಯೋದಯವಾದ ಮೇಲೆ ಸೂರ್ಯಪ್ರಕಾಶವು ಎಲ್ಲೆಡೆಯೂ ಹರಡಿ ದಿಗಂತವನ್ನು ಮುಟ್ಟುವುದು ತಡವಾಗುವುದಿಲ್ಲ. ಶ್ರೀಶಂಕರಾಚಾರ್ಯರ ಕೀರ್ತಿಯು ಬಹುಬೇಗನೆ ಎಲ್ಲೆಲ್ಲಿಯೂ ಹರಡಿತು. ಅವರ ಘನಪಾಂಡಿತ್ಯವನ್ನೂ ವಾಕ್‌ಶಕ್ತಿಯನ್ನೂ ತಪೋಬಲಾರ್ಜಿತವಾದ ಬ್ರಹ್ಮತೇಜಸ್ಸನ್ನೂ ನೋಡಿ ಬೆರಗಾಗಿ, ಕಾಶೀಕ್ಷೇತ್ರದ ವಿದ್ವಾಂಸರು ಆಚಾರ್ಯರಿಗೆ ಶರಣಾದರು. ದಕ್ಷಿಣದ ಚೋಳದೇಶದಿಂದ ಸನಂದನನೆಂಬ ವಿದ್ವಾಂಸನು ಬಂದು ಶ್ರೀಶಂಕರರಿಂದ ಸಂನ್ಯಾಸವನ್ನು ಸ್ವೀಕರಿಸಿ, **ಪದ್ಮಪಾದಾಚಾರ್ಯರೆಂದು** ಪ್ರಸಿದ್ಧನಾದನು. ಹೀಗೆಯೇ ವಿರಕ್ತರೂ ಆತ್ಮ ಜ್ಞಾನಾಪೇಕ್ಷಿಗಳೂ ಆದ ಅನೇಕ ಸಜ್ಜನರು, ಮಧುವಿಗಾಗಿ ತಾವರೆ ಹೂವನ್ನು ಅರಸಿಕೊಂಡು ಬರುವ ದುಂಬಿಗಳಂತೆ ಬಂದು, ಅದ್ಭುತ ಮಹಿಮೆಯನ್ನು ಪ್ರಕಟಿಸಿ ಕೀರ್ತಿಭಾಜನರಾಗಿದ್ದ ಚಿಕ್ಕವಯಸ್ಸಿನ ಶ್ರೀಶಂಕರರ ಪಾದಕಮಲಗಳ ಸೇವೆಯಲ್ಲಿ ತೊಡಗಿದರು. ಆ ಶಿಷ್ಯರೆಲ್ಲರಿಗೂ ಆಚಾರ್ಯರು ವೇದಾಂತ ರಹಸ್ಯವನ್ನು ಬೋಧಿಸುತ್ತ, ವಿದ್ವಾಂಸರೊಡನೆ ಚರ್ಚಿಸುತ್ತ, ನೂತನ ಗ್ರಂಥಗಳನ್ನು ಅಧ್ಯಯನ

ಮಾಡುತ್ತ ಆತ್ಮಚಿಂತನೆಯಲ್ಲಿ ಮಗ್ನರಾಗಿದ್ದರು. ಶ್ರೀಶಂಕರರು ಒಂದು ದಿನ ಮಾಧ್ಯಾಹ್ನಿಕ ಸ್ನಾನಕ್ಕಾಗಿ ಗಂಗಾನದಿಗೆ ಹೋಗುತ್ತಿದ್ದರು. ಅವರನ್ನು ಪರೀಕ್ಷಿಸುವುದಕ್ಕಾಗಿ ಪರಮೇಶ್ವರನು ಅಂತ್ಯಜವೇಷವನ್ನು ಧರಿಸಿ ನಾಲ್ಕು ನಾಯಿಗಳೊಡನೆ ಎದುರಿಗೆ ಬಂದನು. ಆಚಾರ್ಯರು "ಅಯ್ಯಾ, ನಮಗೆ ದಾರಿಯನ್ನು ಬಿಟ್ಟು ಆಚೆಗೆ ಸ್ವಲ್ಪ ಸರಿದುಕೋ" ಎಂದರು. ಅಂತ್ಯಜನು "ಸ್ವಾಮಿ, ಯಾರು ಸರಿಯಬೇಕು? ನಿಷ್ಕ್ರಿಯವಾದ ಬ್ರಹ್ಮವು ಸರಿಯಬೇಕೊ? ಅಥವಾ ಜಡವಾದ ದೇಹವೊ?" ಎಂದು ಕೇಳಿದನು. ಹೀಗೆಯೇ ನಾಲ್ಕಾರು ಮಾತುಗಳಾಡುವಷ್ಟರಲ್ಲಿ ಆ ಅಂತ್ಯಜನು ಬ್ರಹ್ಮಜ್ಞಾನಿಯೆಂದು ನಿಶ್ಚಯಿಸಿ, ಶ್ರೀಶಂಕರ ಯತೀಶ್ವರರು ಅಲ್ಲಿಯೇ ಮನೀಷಾಪಂಚಕವೆಂಬ ಪದ್ಯಮಾಲಿಕೆಯನ್ನು ರಚಿಸಿ ಹಾಡಿದರು. ಆ ಪದ್ಯಗಳ ಕಡೆಯ ಸಾಲು "**ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ**" ಎಂದಿರುತ್ತದೆ. "ಬ್ರಹ್ಮಜ್ಞಾನಿಯಾದವನು ಚಂಡಾಲನಾಗಿರಲಿ ಬ್ರಾಹ್ಮಣನಾಗಿರಲಿ, ಆತನೇ ಗುರುವೆಂದು ನನ್ನ ದೃಢವಾದ ನಿಶ್ಚಯ" ಎಂದು ಆ ಸಾಲಿನ ಅರ್ಥ. ಒಡನೆಯೇ ಅಂತ್ಯಜ ವೇಷವನ್ನು ಧರಿಸಿ ಬಂದಿದ್ದ ವಿಶ್ವನಾಥ ಸ್ವಾಮಿಯು ತನ್ನ ದಿವ್ಯರೂಪವನ್ನು ತೋರಿಸಿ ಪ್ರಸನ್ನನಾಗಿ ಅಭಯಹಸ್ತವನ್ನು ನೀಡಿ ಅಂತರ್ಧಾನ ಹೊಂದಿದನು. ಪರಮೇಶ್ವರನ ಅಭಯಹಸ್ತವು ತಮ್ಮ ಮುಂದಿನ ಕಾರ್ಯಗಳಿಗೆ ದೊರಕಿತೆಂದು ಆಚಾರ್ಯರು ಸಂತುಷ್ಟರಾದರು.

ಸ್ವಲ್ಪ ದಿನಗಳಲ್ಲಿಯೇ ಶ್ರೀಶಂಕರರು ಶಿಷ್ಯಪರಿವಾರದೊಡನೆ ಬದರಿಕಾಶ್ರಮಕ್ಕೆ ತೆರಳಿ ತಪೋನಿರತರಾದರು. ಶ್ರೀಗುರುಪ್ರೇರಣೆಯಾದಂತೆ ಪ್ರಸ್ಥಾನತ್ರಯಗಳಿಗೂ ವಿಸ್ತಾರವಾದ ಭಾಷ್ಯಗಳನ್ನು ರಚಿಸಿದರು. ಬದರಿಯಲ್ಲಿದ್ದ ಕೆಲವು ವಿದ್ವಾಂಸರಾದ ತಪಸ್ವಿಗಳು ಆ ಭಾಷ್ಯಗಳನ್ನೋದಿ ಹರ್ಷದಿಂದ ಈ ತರುಣಯತಿಯನ್ನು ಪ್ರಶಂಸೆ ಮಾಡಿದರು. ತಮ್ಮ ಭಾಷ್ಯಗಳು ವಿದ್ವಾಂಸರ ಸಂಮತಿಯನ್ನು ಗಳಿಸಿಕೊಂಡವೆಂದು ತೃಪ್ತರಾದ ಆಚಾರ್ಯರು ಕಾಶಿಗೆ ಮತ್ತೆ ಹಿಂದಿರುಗಿ ಬಂದು, ಆ ಭಾಷ್ಯಗಳನ್ನು ಶಿಷ್ಯರಿಗೆ ಬೋಧಿಸತೊಡಗಿದರು.

ಗಂಗಾತೀರದಲ್ಲಿ ಸೂತ್ರಭಾಷ್ಯದ ಅಧ್ಯಾಪನವು ನಡೆಯುತ್ತಿರುವಾಗ ವೇದವ್ಯಾಸರೇ ಒಬ್ಬ ಬ್ರಾಹ್ಮಣನ ವೇಷದಲ್ಲಿ ಬಂದು ಆಚಾರ್ಯರ ಬೋಧನಾಕ್ರಮವನ್ನು

ವೀಕ್ಷಿಸುತ್ತ ಕುಳಿತರು. ಅನಂತರ ಒಂದು ಸೂತ್ರದ ವಿಷಯದಲ್ಲಿ ಆ ವೃದ್ಧ ಬ್ರಾಹ್ಮಣನಿಗೂ ಆಚಾರ್ಯರಿಗೂ ವಾದವೇ ಪ್ರಾರಂಭವಾಯಿತು. ಆ ಬ್ರಾಹ್ಮಣನು ಕೇಳುತ್ತಿದ್ದ ಪ್ರಶ್ನೆಗಳಿಗೆ ಆಚಾರ್ಯರು ಧೀರವಾಣಿಯಿಂದ ಉತ್ತರವನ್ನು ಹೇಳುತ್ತಿದ್ದರು. ಸಂತುಷ್ಟರಾದ ವ್ಯಾಸರು ತಮ್ಮ ನಿಜರೂಪದಿಂದ ಪ್ರತ್ಯಕ್ಷರಾಗಿ "ಶಂಕರಯತಿ! ನಾನು ರಚಿಸಿದ ಈ ಶಾರೀರಕ ಸೂತ್ರಗಳ ಅರ್ಥವನ್ನು ಸಮೀಚೀನವಾಗಿ ತಿಳಿದುಕೊಂಡಿದ್ದೀಯೆ. ನನ್ನ ಹೃದಯವನ್ನು ನೀನು ಬಲ್ಲೆ. ಇದೆಲ್ಲವನ್ನು ಭರತಖಂಡದಲ್ಲಿ ಪ್ರಚಾರಮಾಡಿ ವೈದಿಕತತ್ತ್ವವನ್ನು ಸಂರಕ್ಷಿಸು. ನಿನಗೆ ಶುಭವಾಗಲಿ!" ಎಂದು ಹರಸಿ ಅಂತರ್ಹಿತರಾದರು. ಈ ಪ್ರಸಂಗದಿಂದ ಆಚಾರ್ಯರಿಗೆ ಸಂತೋಷ ವಿಸ್ಮಯಗಳೆರಡೂ ಒಟ್ಟಿಗೆ ಆದವು. ಗುರುಗಳಾದ ಶ್ರೀಗೋವಿಂದಭಗವತ್ಪಾದರ ಆಜ್ಞೆಯೂ ಸ್ಮರಣೆಗೆ ಬಂದಿತು.

ಆಗ ಮೀಮಾಂಸಾಶಾಸ್ತ್ರದಲ್ಲಿ ವಿಖ್ಯಾತಿಯನ್ನು ಗಳಿಸಿದ್ದ ಕುಮಾರಿಲಭಟ್ಟರೆಂಬ ಬಹುದೊಡ್ಡ ವಿದ್ವಾಂಸರು ಪ್ರಯಾಗದಲ್ಲಿದ್ದಾರೆಂಬ ಸುದ್ದಿ ತಿಳಿಯಿತು. ಅವರಿಂದ ತಮ್ಮ ಸೂತ್ರಭಾಷ್ಯಕ್ಕೆ ವಾರ್ತಿಕಗಳನ್ನು ಬರೆಸಬೇಕೆಂಬ ಉದ್ದೇಶದಿಂದ ಶ್ರೀಶಂಕರಾಚಾರ್ಯರು ಪ್ರಯಾಗಕ್ಕೆ ಹೋದರು. ಕುಮಾರಿಲಭಟ್ಟರು ಬೌದ್ಧಮತದ ಪ್ರಮೇಯವನ್ನು ತಿಳಿಯುವುದಕ್ಕಾಗಿ ಒಬ್ಬ ಬೌದ್ಧಗುರುವಿನ ಶಿಷ್ಯರಾಗಿ ಆ ಮತದ ವಿಷಯವನ್ನೆಲ್ಲ ಕಲಿತು, ಅನಂತರ ಬೌದ್ಧಮತವನ್ನು ಖಂಡಿಸಿದ್ದರು. ಇದರಿಂದ ಗುರುದ್ರೋಹವಾಯಿತೆಂದು ಬಗೆದ ಆ ಧರ್ಮನಿಷ್ಠ ವಿದ್ವಾಂಸರು ಪ್ರಾಯಶ್ಚಿತ್ತಾರ್ಥವಾಗಿ ತುಷಾಗ್ನಿಯನ್ನು ಪ್ರವೇಶಿಸಿ ಕುಳಿತಿದ್ದರು. ತುಷಾಗ್ನಿಯಲ್ಲಿ ಸುಟ್ಟು ಸಾಯುವುದೆ ಪ್ರಾಯಶ್ಚಿತ್ತವೆಂದು ಅವರ ನಿರ್ಣಯವಾಗಿತ್ತು. ಆಚಾರ್ಯರು ಅವರ ಬಳಿಗೆ ಹೋಗಿ ತಮ್ಮ ಉದ್ದೇಶವನ್ನು ತಿಳಿಸಿದರು. ಆಗ ಕಾಲಾತ್ಯಯವಾಯಿತೆಂದು ವ್ಯಥಿತರಾದ ಕುಮಾರಿಲರು ಹೀಗೆಂದರು. "ಆಚಾರ್ಯರೆ, ನಿಮ್ಮ ಭಾಷ್ಯಕ್ಕೆ ವಾರ್ತಿಕಗಳನ್ನು ಬರೆಯುವ ಭಾಗ್ಯ ನನಗಿಲ್ಲದೇ ಹೋಯಿತು. ನನ್ನ ಶಿಷ್ಯನಾದ ವಿಶ್ವರೂಪನು ಮಾಹಿಷ್ಮತೀ ನಗರದಲ್ಲಿದ್ದಾನೆ. ಆತನು ಅತ್ಯಂತ ದಕ್ಷನಾದ ಪಂಡಿತಶ್ರೇಷ್ಠನಾಗಿದ್ದಾನೆ. ಆದರೆ ಮಹಾಕರ್ಮಠ. ಅವನನ್ನು ನೀವು ವಾದದಲ್ಲಿ ಗೆದ್ದು ಜ್ಞಾನಕಾಂಡದ ಶ್ರೇಷ್ಠತೆಯನ್ನು ಸ್ಥಾಪಿಸಿದರೆ, ನಿಮ್ಮ ಕಾರ್ಯಸಿದ್ಧಿಯಾಗುವುದು" ಎಂದರು. ಆಗ ಆಚಾರ್ಯರು ಮಾಹಿಷ್ಮತೀ ನಗರಕ್ಕೆ ಶಿಷ್ಯ

ಸಮೇತರಾಗಿ ಹೋದರು. ವಿಶ್ವರೂಪನನ್ನು ಕಂಡು ತಮ್ಮ ಉದ್ದೇಶವನ್ನರುಹಿದರು.

ವಾದಕ್ಕೆ ಸಿದ್ಧನಾದ ವಿಶ್ವರೂಪನಿಗೂ ಆಚಾರ್ಯರಿಗೂ ಕೆಲವು ದಿನಗಳವರೆಗೆ ಕರ್ಮ-ಜ್ಞಾನಗಳ ವಿಷಯದಲ್ಲಿ ಅತ್ಯಂತ ಪ್ರೌಢವಾದ ವಾದವೇ ನಡೆಯಿತು. ಕರ್ಮವೇ ಮೋಕ್ಷಕ್ಕೆ ಕಾರಣವೆಂದು ವಿಶ್ವರೂಪನ ಪಕ್ಷ. ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಆಚಾರ್ಯರ ಪಕ್ಷ.

ವಿಶ್ವರೂಪನ ಪತ್ನಿಯೂ ಸರ್ವಶಾಸ್ತ್ರಪಾರಂಗತಳೂ ಆದ ಉಭಯಭಾರತಿಯು ಮಧ್ಯಸ್ಥಳಾಗಿದ್ದಳು. ವಾದದಲ್ಲಿ ವಿಶ್ವರೂಪನು ಪರಾಜಿತನಾಗಿ ಸೋಲನ್ನು ಒಪ್ಪಿಕೊಂಡನು. ಆಮೇಲೆ ಉಭಯಭಾರತಿಯು ಆಚಾರ್ಯರೊಡನೆ ವಾದವನ್ನಾರಂಭಿಸಿ ಸೋತುಹೋದಳು. ವಿಶ್ವರೂಪನು ಶ್ರೀಶಂಕರಾಚಾರ್ಯರ ಲೋಕಾತೀತವಾದ ಪಾಂಡಿತ್ಯವೈಖರಿಯನ್ನು ನೋಡಿ ಅವರಿಗೆ ಶರಣಾದನು. ಅವರ ಶಿಷ್ಯವೃತ್ತಿಯನ್ನು ಸ್ವೀಕರಿಸಿ ಸಂನ್ಯಾಸವನ್ನು ಪರಿಗ್ರಹಿಸಿದನು. ಆತನೇ ವಿಖ್ಯಾತರಾದ **ಸುರೇಶ್ವರಾಚಾರ್ಯರು**.

ಅನಂತರ ಶ್ರೀಶಂಕರಾಚಾರ್ಯರು ಶ್ರೀಸುರೇಶ್ವರಾದಿ ಶಿಷ್ಯರೊಡನೆ ದಕ್ಷಿಣಕ್ಕೆ ಪ್ರಯಾಣ ಮಾಡಿದರು. ಶ್ರೀಶೈಲ, ಗೋಕರ್ಣ, ಕೊಲ್ಲೂರು, ಶ್ರೀಬಲಿ (ಶಿವಳ್ಳಿ) ಗಳ ಮಾರ್ಗವಾಗಿ ಶೃಂಗೇರಿಗೆ ಆಗಮಿಸಿದರು. ಶ್ರೀಬಲಿಯಲ್ಲಿ **'ಹಸ್ತಾಮಲಕರು** ಆಚಾರ್ಯರ ಶಿಷ್ಯರಾದರು. ಶೃಂಗೇರಿಯಲ್ಲಿ **ತೋಟಕಾಚಾರ್ಯರು** ಆಚಾರ್ಯರಿಗೆ ಶಿಷ್ಯರಾಗಿ ದೊರೆತರು. ಪದ್ಮಪಾದ, ಸುರೇಶ್ವರ, ಹಸ್ತಾಮಲಕ, ತೋಟಕ ಎಂಬ ನಾಲ್ವರು ನಾಲ್ಕು ವೇದಗಳೋ ಎಂಬಂತೆ ಆಚಾರ್ಯರ ಪ್ರಮುಖ ಶಿಷ್ಯರಾಗಿದ್ದರು. ಶ್ರೀಶಂಕರಯತೀಂದ್ರರು ವೈದಿಕಧರ್ಮರಕ್ಷಣೆಯ ಪ್ರಥಮಕಾರ್ಯವಾಗಿ ಶೃಂಗೇರಿಯಲ್ಲಿ ವಿದ್ಯಾಧಿದೇವತೆಯಾದ ಶ್ರೀಶಾರದಾದೇವಿಯನ್ನು ಪ್ರತಿಷ್ಠಾಪಿಸಿದರು. ಈ ಸ್ಥಳವೇ ಮುಂದೆ ದಕ್ಷಿಣಾಮ್ನಾಯ ಶ್ರೀಶಾರದಾಪೀಠವೆಂದು ಪ್ರಸಿದ್ಧವಾಯಿತು.

ಶ್ರೀಶಂಕರಾಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯಗಳನ್ನು ಶಿಷ್ಯರಿಗೆ ಬೋಧಿಸುತ್ತ ಶೃಂಗೇರಿಯ ತುಂಗಾ ತೀರದಲ್ಲಿ ಕೆಲವು ಕಾಲ ನೆಲೆಸಿದ್ದರು. ಆ ಸಮಯದಲ್ಲಿಯೇ ಉಪದೇಶಸಾಹಸ್ರೀ, ವಿವೇಕಚೂಡಾಮಣಿ ಮುಂತಾದ ಕೆಲವು ಪ್ರಕರಣ

ಗ್ರಂಥಗಳನ್ನೂ ಭಕ್ತಿಪೂರ್ಣವಾದ ಶಿವಾನಂದಲಹರೀ ಮುಂತಾದ ಸ್ತೋತ್ರಗಳನ್ನೂ ರಚಿಸಿದರು. ಆಗ ಕಾಲಟಿಯಲ್ಲಿದ್ದ ವೃದ್ಧಮಾತೆ ಆರ್ಯಾಂಬೆ ಮರಣ ಶಯ್ಯೆಯಲ್ಲಿ ಮಲಗಿ ಪುತ್ರರಾದ ಶ್ರೀಶಂಕರರನ್ನು ಸ್ಮರಿಸಿಕೊಂಡಳು. ಇದು ಆಚಾರ್ಯರ ದಿವ್ಯದೃಷ್ಟಿಗೆ ಗೋಚರವಾದೊಡನೆ ಏಕಾಕಿಯಾಗಿ ಕಾಲಟಿಗೆ ಪ್ರಯಾಣ ಮಾಡಿದರು. ಹಿಂದೆ ತಾವಿದ್ದ ಮನೆಯನ್ನು ಪ್ರವೇಶಿಸಿ, ಹಾಸಿಗೆಯಲ್ಲಿ ಮಲಗಿದ್ದ ತಾಯಿಯನ್ನು ಕಂಡರು. ಆ ವೃದ್ಧಮಾತೆ ಮಗನನ್ನು ನೋಡಿ ಹರ್ಷದಿಂದ ಉಲ್ಲಸಿತಳಾದಳು. ಆಕೆಯೊಡನೆ ಆಚಾರ್ಯರು ನಾಲ್ಕಾರು ಮಾತುಗಳನ್ನಾಡು ವಷ್ಟರಲ್ಲಿ ಆರ್ಯಾಂಬೆಯು ದೇಹವನ್ನು ತ್ಯಜಿಸಿದಳು.

ಅಂತಹ ಸಮಯದಲ್ಲಿ ಸಹ ಒಬ್ಬ ದಾಯಾದಿಯೂ ಮನೆಯ ಕಡೆ ಸುಳಿಯಲಿಲ್ಲ. ಆಚಾರ್ಯರೇ ಹೋಗಿ ತಾಯಿಯ ಮರಣವನ್ನು ತಿಳಿಸಿ, ಅವಳ ಅಂತ್ಯಕ್ರಿಯೆಯನ್ನು ಮಾಡಬೇಕೆಂದು ಕೇಳಿಕೊಂಡರು. ಯಾರೂ ಅದಕ್ಕೆ ಒಪ್ಪಿ ಮುಂದೆ ಬರಲಿಲ್ಲ! ಆ ಜನರ ಕಠೋರಹೃದಯವನ್ನರಿತು ಚಕಿತರಾದ ಆಚಾರ್ಯರು ತಾವೇ ತಾಯಿಯ ಉತ್ತರಕ್ರಿಯೆಯನ್ನು ಮಾಡಬೇಕೆಂದು ನಿಶ್ಚಯಿಸಿ ಅಗ್ನಿಯನ್ನು ಯಾಚಿಸಿದರು. ಅಗ್ನಿಯನ್ನು ಕೊಡಲೂ ಆ ಮೂರ್ಖರು ನಿರಾಕರಿಸಿದರು. ಶ್ರೀಶಂಕರರು ಆ ಜನರ ದುಷ್ಟತನವನ್ನರಿತು ಖಿನ್ನರಾಗಿ ತಾವೇ ಅಗ್ನಿಯನ್ನು ಉತ್ಪಾದಿಸಿ, ಮನೆಯ ಹಿತ್ತಲಿಗೆ ತಾಯಿಯ ಮೃತದೇಹವನ್ನೊಯ್ದು ವಿಧಿಪೂರ್ವಕವಾಗಿ ದಹನ ಕ್ರಿಯೆಯನ್ನು ನೆರವೇರಿಸಿದರು. "ಈ ಜನರು ನನ್ನ ತಾಯಿಗೆ ಯಾವ ಸಹಾಯವನ್ನೂ ಮಾಡಿರಲಿಕ್ಕಿಲ್ಲ. ಮುಪ್ಪಿನಲ್ಲಿ ಅವಳು ತುಂಬ ಕಷ್ಟಕ್ಕೆ ಈಡಾಗಿರಬೇಕು. ಅವಳ ಉತ್ತರಕ್ರಿಯೆಯನ್ನು ಮಾಡಲೂ ಈ ದಾಯಾದಿಗಳು ನಿರಾಕರಿಸಿದರಲ್ಲ!" ಎಂದು ಉದ್ವಿಗ್ನರಾದ ಆಚಾರ್ಯರು "ಎಲೈ, ನೀವು ಕರ್ಮಭ್ರಷ್ಟರಾಗಿದ್ದೀರಿ. ನೀವು ವೇದಬಾಹ್ಯರಾಗಿರಿ" ಎಂದು ಆ ಬ್ರಾಹ್ಮಣರನ್ನು ಶಪಿಸಿ ಕಾಲಟಿಯಿಂದ ನಿರ್ಗಮಿಸಿದರು.

ಅವರು ಕೇರಳದೇಶದಲ್ಲಿ ಸಂಚರಿಸುತ್ತಿದ್ದಾಗ ಸುರೇಶ್ವರಾಚಾರ್ಯರೇ ಮೊದಲಾದ ಎಲ್ಲ ಶಿಷ್ಯರೂ ಆಚಾರ್ಯರ ಬಳಿಗೆ ಬಂದು ಸೇರಿದರು. ಶ್ರೀಶಂಕರ ಭಗವತ್ಪಾದರು ಅವರೆಲ್ಲರೊಡನೆ ಸಮಾಲೋಚಿಸಿ "ಈಗ ನಮ್ಮ ಪೂರ್ವಸಿದ್ಧತೆಗಳೆಲ್ಲವೂ ಆದವು. ಇನ್ನು ಅವೈದಿಕ ಮತಗಳನ್ನು ಖಂಡಿಸಿ ಅನಾದಿ ಸಂಪ್ರದಾಯಸಿದ್ಧವಾದ

ವೇದಾಂತಸಿದ್ಧಾಂತವನ್ನು ಭರತಖಂಡದಲ್ಲಿ ಸ್ಥಾಪಿಸಬೇಕಾಗಿದೆ. ವಿಜಯ ಯಾತ್ರೆಯನ್ನು ಕೈಗೊಳ್ಳಲು ಇದು ಸಮಯವಾಗಿದೆ" ಎಂದು ತಮ್ಮ ನಿಶ್ಚಯವನ್ನು ತಿಳಿಸಿದರು. ಅವರೆಲ್ಲರೊಡನೆ ಮೊದಲು ಶ್ರೀರಾಮೇಶ್ವರಕ್ಷೇತ್ರಕ್ಕೆ ಹೋಗಿ ಸರ್ವವಿದ್ಯೆಗಳಿಗೆ ಈಶಾನನಾದ ಪರಮೇಶ್ವರನನ್ನು ಸ್ತುತಿಸಿ, ವಿಜಯ ಯಾತ್ರೆಯನ್ನಾರಂಭಿಸಿದರು. ಹಿಂದೆ ಯಾರೂ ಕೈಗೊಳ್ಳದ ಮಹತ್ತರವಾದ ಕಾರ್ಯ ಅದಾಗಿತ್ತು.

ಮೊದಲು ಕೇರಳದೇಶದ ವಿದ್ವಾಂಸರನ್ನು ಜಯಿಸಿ, ಕರ್ನಾಟಕದಲ್ಲಿ ಸುತ್ತಾಡಿ, ತಮಿಳುನಾಡನ್ನು ಹೊಕ್ಕು, ಆಂಧ್ರದೇಶದಲ್ಲಿ ಸಂಚರಿಸಿ, ಮಹಾರಾಷ್ಟ್ರವನ್ನು ಸೇರಿ ಅದ್ವಯಬ್ರಹ್ಮವಾದವನ್ನು ವಿರೋಧಿಸುವ ಸಮಸ್ತ ವಿದ್ವಾಂಸರನ್ನು ಜಯಿಸಿ ಗುಜರಾತನ್ನು ಪ್ರವೇಶಿಸಿದರು. ಈ ಪ್ರಕಾರದಲ್ಲಿ ಭರತಖಂಡದ ಸಮಸ್ತ ರಾಜ್ಯಗಳಿಗೂ ಹೋಗಿ ಶ್ರೀಶಂಕರಭಗವತ್ಪಾದರು ತಮ್ಮ ಅಸಾಧಾರಣವಾದ ಸಪ್ರಮಾಣವಾದ ವಾಗ್ವೈಖರಿಯನ್ನು ಮೆರೆಸಿ ಚಾರ್ವಾಕರು, ಬೌದ್ಧರು, ಜೈನರು, ಸಾಂಖ್ಯರೇ ಮೊದಲಾದ ಸಮಸ್ತ ಪ್ರತಿವಾದಿಗಳನ್ನು ಪರಾಭವಗೊಳಿಸಿ ಅದ್ವೈತವಾದದ ವಿಜಯ ಪತಾಕೆಯನ್ನು ಎತ್ತಿ ಹಿಡಿದರು. ಅವರು ಹೋದೆಡೆಯಲ್ಲಿ ಅಸಂಖ್ಯಾತ ಜನರು ನೆರೆಯುತ್ತಿದ್ದರು. ಆಚಾರ್ಯರು ಅವರೆಲ್ಲರಿಗೂ ಹಿತವಾಗಲೆಂದು ಸರಳಭಾಷೆಯಲ್ಲಿ ಪ್ರವಚನಗಳನ್ನು ಮಾಡಿ ವೈದಿಕಧರ್ಮದ ಶ್ರೇಷ್ಠತೆಯನ್ನು ಬೋಧಿಸುತ್ತಿದ್ದರು. ಸೌರ, ಶಾಕ್ತ, ಪಾಶುಪತ, ಭೈರವಾದಿ ಮತಗಳೆಲ್ಲವೂ ಸೋತು ಮೂಲೆಗೆ ಸರಿದವು.

ಹೀಗೆ ಸಮಸ್ತದೇಶಗಳಲ್ಲಿಯೂ ಸುತ್ತಾಡಿ ಪ್ರತಿವಾದಿಗಳನ್ನು ಜಯಿಸಿ ಕಾಶ್ಮೀರ ದೇಶವನ್ನು ಪ್ರವೇಶಿಸಿದರು. ಅಲ್ಲಿದ್ದ ಸರ್ವಜ್ಞಪೀಠವನ್ನು ದಾಕ್ಷಿಣಾತ್ಯರು ಯಾರೂ ಅದುವರೆಗೂ ಏರಲು ಸಮರ್ಥರಾಗಲಿಲ್ಲವೆಂಬ ಅಪವಾದವಿತ್ತು. ಆ ಅಪವಾದವನ್ನು ತೊಡೆಯುವುದಕ್ಕಾಗಿ ಶ್ರೀಶಂಕರಭಗವತ್ಪಾದರು ಅಲ್ಲಿಗೆ ಹೋಗಿ, ತಮ್ಮನ್ನು ತಡೆದ ಸಮಸ್ತವಿದ್ವಾಂಸರನ್ನೂ ವಾದದಲ್ಲಿ ಜಯಿಸಿ ಸರ್ವಜ್ಞ ಪೀಠವನ್ನೇರಿ, ಎಲ್ಲರಿಂದಲೂ ಸಮ್ಮಾನಿತರಾದರು.

ಅನಂತರ ಸರ್ವಜ್ಞರಾದ ಆಚಾರ್ಯರು ತಮ್ಮ ಶಿಷ್ಯರೆಲ್ಲರನ್ನು ಒಂದೆಡೆಗೆ ಕರೆದು ಇಂತೆಂದರು: "ಪ್ರಿಯರಾದ ಯತಿಶ್ರೇಷ್ಠರೆ, ನನ್ನ ಗುರುಗಳ ಆದೇಶದಂತೆ

ವೈದಿಕಧರ್ಮರಕ್ಷಣೆಗಾಗಿ ಯಥಾಶಕ್ತಿ ಶ್ರಮಿಸಿದ್ದಾಯಿತು. ಈ ವೈದಿಕಧರ್ಮವು ನಮ್ಮ ಭರತಖಂಡದಲ್ಲಿ ಮುಂದೆಯೂ ಸ್ಥಿರವಾಗಿ ನಿಂತಿರಬೇಕು. ಆದ್ದರಿಂದ ಶುಭವ್ರತರಾದ ನಿಮಗೆ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಹಿಂದೆ ನಾನು ಶೃಂಗೇರಿಯಲ್ಲಿ ಸ್ಥಾಪಿಸಿದ ಶ್ರೀಶಾರದಾಪೀಠಕ್ಕೆ ಸುರೇಶ್ವರಾಚಾರ್ಯರು ಅಧಿಪತಿಗಳಾಗಿ ಈ ಧರ್ಮಕಾರ್ಯವನ್ನು ನಿರ್ವಹಿಸಲಿ. ಅದು ದಕ್ಷಿಣಾಮ್ನಾಯಪೀಠ. ಹಾಗೆಯೇ ಈ ರಾಷ್ಟ್ರದ ಉಳಿದ ಮೂರು ದಿಕ್ಕುಗಳಲ್ಲಿಯೂ ಮಠಗಳನ್ನು ಸ್ಥಾಪಿಸತಕ್ಕದ್ದು. ದ್ವಾರಕೆಯಲ್ಲಿ ಪದ್ಮಪಾದರೂ ಬದರಿಯಲ್ಲಿ ತೋಟಕರೂ ಜಗನ್ನಾಥಪುರಿಯಲ್ಲಿ ಹಸ್ತಾಮಲಕರೂ ಮಠಾಧಿಪತಿಗಳಾಗಿ ಧರ್ಮಕಾರ್ಯಗಳನ್ನು ನಡೆಸಬೇಕು. ಹೀಗೆಯೇ ಉಳಿದ ಯತಿಗಳೂ ಸೂಕ್ತವಾದ ಸ್ಥಳಗಳಲ್ಲಿ ವೈದಿಕಧರ್ಮದ ಭದ್ರತೆಗಾಗಿ ಕಾರ್ಯಪ್ರವೃತ್ತರಾಗಲಿ, ಸಂಪ್ರದಾಯಕ್ರಮದಿಂದ ಬಂದ ಅದ್ವೈತದರ್ಶನದ ಸಂರಕ್ಷಣೆಗಾಗಿ ಈ ಯತಿಪರಂಪರೆ ಮುಂದುವರೆಯಲಿ. ನೀವೆಲ್ಲರೂ ನಿಷ್ಠೆಯಿಂದ ಬಹುವಿಧದಲ್ಲಿ ಸೇವಿಸಿ ನನಗೆ ಉಪಕಾರ ಮಾಡಿದ್ದೀರಿ. ಇನ್ನು ನೀವು ಇಷ್ಟವಾದೆಡೆಗೆ ತೆರಳಬಹುದು. ಭಗವಂತನು ನಿಮ್ಮೆಲ್ಲರಿಗೂ ಸದಾ ಮಂಗಳವನ್ನನುಗ್ರಹಿಸಲಿ" ಎಂದು ನುಡಿದು ಎಲ್ಲರನ್ನು ವಿಸರ್ಜಿಸಿದರು. ಆ ಶಿಷ್ಯರು ಗುರುಗಳ ಆಜ್ಞೆಯನ್ನು ಮೀರಲಾರದೆ ಕಣ್ಣೀರು ತುಂಬಿಕೊಂಡು ಅಲ್ಲಿಂದ ನಿಷ್ಕ್ರಮಿಸಿದರು.

ಆ ಮೇಲೆ ಶ್ರೀಶಂಕರಭಗವತ್ಪಾದರು ಏಕಾಕಿಯಾಗಿ ಬದರಿಕಾಶ್ರಮಕ್ಕೆ ತೆರಳಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತ ಕೆಲವು ದಿನಗಳಿದ್ದು, ಆಮೇಲೆ ಕೇದಾರಕ್ಕೆ ಹೋದರು. ಕೇದಾರೇಶ್ವರನನ್ನು ಧ್ಯಾನಿಸುತ್ತ ಸ್ವಲ್ಪ ಕಾಲ ಅಲ್ಲಿದ್ದರು. ತಮಗೆ ಮೂವತ್ತೆರಡುವರ್ಷವಯಸ್ಸು ಕಳೆಯುತ್ತಿರಲಾಗಿ ಭಗವತ್ಪಾದರು ನಿರ್ವಿಕಲ್ಪಕ ಸಮಾಧಿಯನ್ನೇರಿ ಮರ್ತ್ಯದೇಹವನ್ನು ವಿಸರ್ಜಿಸಿ, ಪರಬ್ರಹ್ಮದಲ್ಲಿ ಲೀನರಾದರು.

ಇದಿಷ್ಟು ಶ್ರೀ ಶಂಕರಾಚಾರ್ಯರ ಚರಿತೆಯ ಸಂಕ್ಷೇಪ. ಶಂಕರವಿಜಯಾದಿ ಗ್ರಂಥಗಳು ವರ್ಣಿಸಿರುವ ಪರಕಾಯಪ್ರವೇಶ ಮುಂತಾದ ಅದ್ಭುತವೃತ್ತಾಂತ ಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಆಚಾರ್ಯರ ಜೀವಿತಾವಧಿ ಮೂವತ್ತೆರಡು ವರ್ಷಗಳು ಮಾತ್ರ ಎನ್ನುವುದು ಸರ್ವಸಮ್ಮತ. ಅವರ ಜೀವಿತಕಾಲ ಯಾವುದೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಇತಿಹಾಸ ಸಂಶೋಧಕರಾದ ಕೆಲವು

ವಿದ್ವಾಂಸರು ಕ್ರಿ.ಶ. ೭೮೮ ರಿಂದ ೮೨೦ ಆಚಾರ್ಯರ ಜೀವಿತಕಾಲವೆಂದು ಅಭಿಪ್ರಾಯಪಟ್ಟಿದ್ದರು. ಈಚೆಗೆ ನಡೆದ ವಿಶಿಷ್ಟ ಸಂಶೋಧನೆಗಳಿಂದ ಜೀವಿತಕಾಲವು ಕ್ರಿ.ಶ. ೬೮೮ ರಿಂದ ೭೨೦ ಎಂದು ನಿಶ್ಚಯಿಸಿದ್ದಾರೆ. ಒಟ್ಟಿನಲ್ಲಿ ಭಗವತ್ಪಾದರು ಇಂದಿಗೆ ೧೩೦೦ ವರ್ಷಗಳಷ್ಟು ಪ್ರಾಚೀನರೆಂದು ನಿರ್ಣಯಿಸಬಹುದು.

## ಜೀವನಚರಿತೆಯ ಪರಾಮರ್ಶೆ

ಶ್ರೀಶಂಕರರಿಗೆ ಸಂಬಂಧಿಸಿದ ಒಂದೊಂದು ಘಟನೆಯೂ ಒಂದೊಂದು ಕಾರ್ಯವೂ ನಮಗೆ ವಿಸ್ಮಯವನ್ನೇ ಹುಟ್ಟಿಸುತ್ತದೆ. ಅವರಿಗೆ ಪಿತ್ರಾರ್ಜಿತವಾದ ಸಂಪತ್ತು ಯಥೇಷ್ಟವಾಗಿತ್ತು. ವಾತ್ಸಲ್ಯದಿಂದ ಪಾಲಿಸುತ್ತಿದ್ದ ತಾಯಿಯಿದ್ದಳು. ಆದರೂ ಆ ಚಿಕ್ಕವಯಸ್ಸಿನಲ್ಲಿ ಸಂನ್ಯಾಸವನ್ನು ಸ್ವೀಕರಿಸಿ ಹೊರಟು ಹೋಗಬೇಕೆಂದು ಪರಮವೈರಾಗ್ಯ ಉಂಟಾದದ್ದು ವಿಸ್ಮಯಕರವಲ್ಲವೆ? ಏಕಾಕಿಯಾಗಿ ಗುರುವನ್ನರಸುತ್ತ, ಭಿಕ್ಷೆ ಬೇಡುತ್ತ, ಅರಣ್ಯ ಗಿರಿ ನದಿಗಳನ್ನು ದಾಟಿ ಕಾಲ್ನಡಿಗೆಯಿಂದ ನರ್ಮದಾ ತೀರವನ್ನು ಸೇರಿ ಶ್ರೀಗೋವಿಂದಯತಿಗಳನ್ನು ಕಂಡದ್ದು ಸಾಮಾನ್ಯ ವಿಷಯವಲ್ಲ. ಬಾಲ್ಯದಲ್ಲಿಯೇ ಸಕಲವೇದಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ತಲಸ್ಪರ್ಶಿಯಾದ ಪಾಂಡಿತ್ಯವನ್ನು ಗಳಿಸಿದ್ದು ಆಶ್ಚರ್ಯಕರ, ಸುರೇಶ್ವರಾಚಾರ್ಯ, ಪದ್ಮಪಾದಾಚಾರ್ಯ ಮುಂತಾದ ಹಿರಿಯ ವಯಸ್ಸಿನ ವಿದ್ವಾಂಸರು ತಮಗಿಂತ ತುಂಬ ಕಿರಿಯನಾದ ಒಬ್ಬ ತರುಣಯತಿಯ ಪದತಳದಲ್ಲಿ ಕುಳಿತು ಅಧ್ಯಯನ ಮಾಡುತ್ತಿದ್ದುದು ಇನ್ನೊಂದು ಕೌತುಕದ ಸಂಗತಿ. ಶ್ರೀದಕ್ಷಿಣಾಮೂರ್ತಿ ಸ್ತೋತ್ರದ ಒಂದು ಶ್ಲೋಕವು ಇಲ್ಲಿ ಸ್ಮರಣೆಗೆ ಬರುತ್ತದೆ.

**ಚಿತ್ರಂ ವಟತರೋರ್ಮೂಲೇ ವೃದ್ಧಾಃ ಶಿಷ್ಯಾ ಗುರುರ್ಯುವಾ ।**
**ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನಸಂಶಯಾಃ ॥**

"ಆಲದ ಮರದ ಬುಡದಲ್ಲಿ ಕುಳಿತಿರುವ ಗುರುವು ಯುವಕ. ಶಿಷ್ಯರು ವೃದ್ಧರು! ಮೌನವೇ ಗುರುವಿನ ವ್ಯಾಖ್ಯಾನ, ಆದರೆ ಶಿಷ್ಯರ ಸಂಶಯಗಳೆಲ್ಲ ಕತ್ತರಿಸಿ ಹೋಗುತ್ತವೆ! ಇದು ವಿಚಿತ್ರ!"

ಶ್ರೀಶಂಕರರು ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ರಚಿಸುವಾಗ ಅವರಿಗೆ ಹದಿನಾರು

ವರ್ಷ ವಯಸ್ಸು. ಅದು **'ವಿದ್ವಜ್ಜಾಲತಪಃಫಲ'**ವೆಂದೂ ವಾಗ್ದೇವಿಯ ಚಿರಭೋಗ್ಯವಾದ "**ಕೋಶಾಲಯ**"ವೆಂದೂ ಶ್ರೀಶಂಕರ ದಿಗ್ವಿಜಯವು ವರ್ಣಿಸಿದೆ. ಅದ್ವಿತೀಯ ಪಂಡಿತಾಗ್ರಣಿಯಾದ ವಾಚಸ್ಪತಿಮಿಶ್ರನು ಸೂತ್ರವ್ಯಾಖ್ಯಾನವಾದ ಭಾಮತಿಯ ಆರಂಭದಲ್ಲಿಯೇ "ಆಚಾರ್ಯರ ವಾಣಿಯು ಗಂಗಾಪ್ರವಾಹವಿದ್ದಂತೆ, ನಮ್ಮಂತಹವರ ವ್ಯಾಖ್ಯಾನವು ಚರಂಡಿಯ ನೀರಿದ್ದಂತೆ!" ಎಂದು ಹೇಳಿಕೊಂಡಿದ್ದಾನೆ. ತಮ್ಮ ಮೂವತ್ತೆರಡನೆಯ ವರ್ಷ ವಯಸ್ಸಿನಲ್ಲಿಯೇ ಅಖಿಲ ಭಾರತ ರಾಷ್ಟ್ರದಲ್ಲಿ ಹಲವು ಸಲ ಕಾಲ್ನಡಿಗೆಯಲ್ಲಿಯೇ ಸುತ್ತಾಡಿ, ವಿದ್ವಾಂಸರನ್ನು ವಾದದಲ್ಲಿ ಜಯಿಸಿ, ಕಾಶ್ಮೀರಕ್ಕೆ ಹೋಗಿ ಸರ್ವಜ್ಞಪೀಠವನ್ನೇರಿದ್ದು ಇನ್ನೊಂದು ದೃಷ್ಟಾಂತವಿಲ್ಲದ ಅಸಾಧಾರಣವಾದ ಕಾರ್ಯ. ಬಿಡುವಿಲ್ಲದ ಈ ಸಮಯದಲ್ಲಿ ಪ್ರಸ್ಥಾನತ್ರಯ ಭಾಷ್ಯಗಳನ್ನೂ ಪ್ರಕರಣ ಗ್ರಂಥಗಳನ್ನೂ ನಾನಾ ಸ್ತೋತ್ರಗಳನ್ನೂ ರಚಿಸಲು ಅವಕಾಶ ಹೇಗೆ ದೊರೆಕಿರಬಹುದು ಎಂಬುದಂತೂ ಊಹೆಗೆ ನಿಲುಕದ ವಿಷಯವಾಗಿದೆ. ಒಂದು ಪ್ರಾಚೀನ ಶ್ಲೋಕವು ಹೀಗಿದೆ.

**ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।**
**ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥**

"ಶ್ರೀ ಶಂಕರಾಚಾರ್ಯರು ಎಂಟು ವರ್ಷದವರಿರುವಾಗ ನಾಲ್ಕು ವೇದಗಳನ್ನು ಕಲಿತಿದ್ದರು. ಹನ್ನೆರಡನೆಯ ವರ್ಷದಲ್ಲಿ ಸರ್ವಶಾಸ್ತ್ರಗಳನ್ನು ಬಲ್ಲವರಾಗಿದ್ದರು. ಹದಿನಾರನೆಯ ವಯಸ್ಸಿನಲ್ಲಿ ಭಾಷ್ಯವನ್ನು ರಚಿಸಿದರು. ತಮ್ಮ ಮೂವತ್ತೆರಡನೆಯ ವರ್ಷದಲ್ಲಿ ತಿರೋಧಾನವನ್ನೈದಿದರು."

ಆಚಾರ್ಯರ ಅಪೂರ್ವವಾದ ಈ ಅದ್ಭುತ ಸಾಧನೆಗಳನ್ನು ಕಂಡು "ಶ್ರೀಶಂಕರಚರಿತಾಮೃತಮ್" ಎಂಬ ನನ್ನ ಗ್ರಂಥದಲ್ಲಿ ಈ ಶ್ಲೋಕವು ಹೊಮ್ಮಿತು–

**ದ್ವಾತ್ರಿಂಶವತ್ಸರಾದರ್ವಾಕ್ ಈದೃಕ್ ತೇ ಕೃತಿವೈಭವಂ ।**
**ಸರ್ವಜ್ಞಃ ಶಂಕರೋಽಸಿ ತ್ವಾಂ ನಮಸ್ಕುರ್ಮೋ ಯಥಾಬಲಮ್ ॥**

"ನಿಮ್ಮ ಮೂವತ್ತೆರಡನೆಯ ವರ್ಷದೊಳಗೆ ಇಷ್ಟು ಅಗಾಧವಾದ ಕಾರ್ಯವೈಭವವನ್ನು ಮೆರೆಸಿಬಿಟ್ಟಿದ್ದೀರಿ. ಆದ್ದರಿಂದ ನೀವು ಸರ್ವಜ್ಞನಾದ ಶಂಕರನೇ ಹೌದು. ನಮಗೆ ಬಲವಿರುವಷ್ಟು ಅಡ್ಡಬಿದ್ದು ನಿಮಗೆ ನಮಸ್ಕರಿಸುತ್ತೇವೆ."

## ವೇದಾಂತದರ್ಶನ – ಅದ್ವೈತಸಿದ್ಧಾಂತ

ವೈದಿಕಧರ್ಮದ ರಕ್ಷಣೆಗಾಗಿ ಪ್ರವೃತ್ತರಾದ ಶ್ರೀಶಂಕರಾಚಾರ್ಯರು ವೇದ ಬೋಧಿತವಾದ ಶ್ರೇಯೋಮಾರ್ಗವು ಯಾವುದೆಂಬುದನ್ನು ತಿಳಿಸಿಕೊಡುವುದು ಅವಶ್ಯಕವಾಯಿತು. ಅದು ಪ್ರಾಚೀನ ಋಷಿಜನರಿಂದ ತುಳಿದ ಮಾರ್ಗವೇ ಆದರೂ ಕಾರಣಾಂತರಗಳಿಂದ ಕಲ್ಲುಮಣ್ಣುಧೂಳಿಗಳು ತುಂಬಿ ಮಲಿನವಾಗಿತ್ತು. ಅವೆಲ್ಲವನ್ನು ತೆಗೆದು ಸ್ವಚ್ಛಮಾಡಿ ರಾಜಮಾರ್ಗವನ್ನಾಗಿ ನಿರ್ಮಿಸಿದ ಕೀರ್ತಿ ಶ್ರೀಶಂಕರಭಗವತ್ಪಾದರಿಗೆ ಸಲ್ಲುತ್ತದೆ. ಅದೇ ವೇದಾಂತದರ್ಶನ – ಅದ್ವೈತಸಿದ್ಧಾಂತ. ವೇದಗಳ ಕಡೆಯಸಿದ್ಧಾಂತ ವೇದಾಂತ. ಅದನ್ನು ಪ್ರತಿಪಾದಿಸುವ ಉಪನಿಷತ್ತುಗಳಿಗೂ ವೇದಾಂತವೆಂದೇ ಹೆಸರು. ಈ ಮಾರ್ಗವನ್ನು ಹಿಡಿದವರು ವೇದಾಂತಿಗಳು. ವೇದಾಂತಿಗಳೇ ಔಪನಿಷದರು.

**'ದೃಶ್ಯತೇ ಪರಮಾರ್ಥಃ ಅನೇನೇತಿ ದರ್ಶನಂ'** ಎಂದು ದರ್ಶನ ಶಬ್ದದ ವ್ಯುತ್ಪತ್ತಿ. ಪರಮಾರ್ಥವಾದ ಸತ್ಯವನ್ನು ತಿಳಿಸುವ ಸಾಧನವೆಂದು ಈ ಶಬ್ದದ ಅರ್ಥ. ನಮ್ಮ ದೇಶದಲ್ಲಿ ವಿಚಾರ ಸ್ವಾತಂತ್ರ್ಯವು ಯಾವಾಗಲೂ ಇತ್ತು. ಯಾವ ಅರಸೊತ್ತಿಗೆಯೂ ಅದಕ್ಕೆ ಅಡ್ಡ ಬರಲಿಲ್ಲ. ಆದ್ದರಿಂದ ಸಾಂಖ್ಯ, ವೈಶೇಷಿಕಾದಿ ದರ್ಶನಗಳೂ, ಶೈವ, ವೈಷ್ಣವ, ಶಾಕ್ತ ಮುಂತಾದ ಮತಗಳೂ ಬೆಳೆದವು. ವೇದದ ಪ್ರಾಮಾಣ್ಯವನ್ನಂಗೀಕರಿಸದ ಬೌದ್ಧ, ಜೈನ, ಚಾರ್ವಾಕರ ಸಿದ್ಧಾಂತಗಳೂ ಹುಟ್ಟಿಕೊಂಡವು. ಅದ್ವೈತದರ್ಶನದಲ್ಲಿ ಎಲ್ಲ ವಿಷಯಗಳಿಗೂ ವೇದಗಳೇ ಪರಮ ಪ್ರಮಾಣ. ವೇದವಿರುದ್ಧವಲ್ಲದ ಅನುಭವಾನುಸಾರಿಯಾದ ತರ್ಕವೂ ಪ್ರಮಾಣವಾಗಬಹುದು. ಸಾಂಖ್ಯಾದಿದರ್ಶನಗಳಲ್ಲಾದರೋ ತರ್ಕವೇ ಮುಖ್ಯವಾದದ್ದು. ವೇದದ ಸ್ಥಾನ ಗೌಣ. ಶೈವ, ಶಾಕ್ತಾದಿಮತಗಳಲ್ಲಿ ಒಬ್ಬ ಗುರುವಿನ ನುಡಿ ಮತ್ತು ಶ್ರದ್ಧಾಭಕ್ತಿಗಳೇ ಪ್ರಮಾಣ.

## ದರ್ಶನಗಳ ಉದ್ದೇಶ

ವಿಚಾರಶೀಲನಾದ ಮನುಷ್ಯನಿಗೆ ಕೆಲವು ಜಿಜ್ಞಾಸೆಗಳು ಹುಟ್ಟುತ್ತವೆ. ನಾನು, ನಾನು – ಎಂದುಕೊಳ್ಳುತ್ತೇನಲ್ಲ, ಈ ನಾನು ಎಂದರೆ ಯಾರು? ದೇಹವೆ? ಪ್ರಾಣ, ಇಂದ್ರಿಯ, ಮನಸ್ಸುಗಳೇ? ಸುತ್ತಮುತ್ತ ಕಾಣುವ ಈ ಜಗತ್ತಿನ ಸ್ವರೂಪ

ಯಾವುದು? ಈ ನಾನು, ಜಗತ್ತುಗಳಿಗೆ ನಿಯಾಮಕನಾದ ದೇವರು ಎಂಬವನಿದ್ದಾನೆಯೇ? ಇದ್ದರೆ ಅವನ ಸ್ವರೂಪವೆಂತಹುದು? ಹುಟ್ಟು, ಸಾವುಗಳ ಉದ್ದೇಶವೇನು? ನಮಗೆ ಒದಗುವ ದುಃಖವನ್ನು ಸಂಪೂರ್ಣವಾಗಿ ತಡೆಗಟ್ಟಿ ಸಂಪೂರ್ಣ ಶಾಂತಿಯಿಂದಿರಲು ಸಾಧ್ಯವೇ? ಇತ್ಯಾದಿ. ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನಿತ್ತು ಅದನ್ನು ಸಾಧಿಸುವ ಮಾರ್ಗವನ್ನು ತಿಳಿಸಿಕೊಡುವುದು ದರ್ಶನಶಾಸ್ತ್ರದ ಉದ್ದೇಶವಾಗಿದೆ. ವೇದಗಳನ್ನೇ ಮುಖ್ಯ ಪ್ರಮಾಣಗಳನ್ನಾಗಿ ಸ್ವೀಕರಿಸಿರುವುದರಿಂದಲೂ ಸಾಧನಮಾರ್ಗಗಳನ್ನು ಸ್ಪಷ್ಟವಾಗಿ ತಿಳಿಸಿಕೊಡುವುದ ರಿಂದಲೂ ವೇದಾಂತವು ಇತರ ದರ್ಶನಗಳಿಗಿಂತ ಸುಪ್ರಸಿದ್ಧವೂ ಜನಪ್ರಿಯವೂ ಆಯಿತು. ಸಾಂಖ್ಯಾದಿ ದರ್ಶನಗಳು ಪಂಡಿತರ ವಾದಕಥೆಯಲ್ಲಿ ಮಾತ್ರ ಉಳಿದು ಕೊಂಡವು.

## ಅದ್ವೈತಸಿದ್ಧಾಂತದ ಪ್ರಮೇಯಗಳು

ಅದ್ವೈತವೆಂದರೇನು? ದ್ವೈತವಿಲ್ಲದಿರುವುದು ಅದ್ವೈತ. ದ್ವೈತವೆಂದರೆ ದ್ವಿತ್ವ ಎರಡು ಎಂಬ ಸಂಖ್ಯೆ. ಸತ್ಯವಾಗಿ ಇರತಕ್ಕದ್ದು ಒಂದೇ ಒಂದು ಅದ್ವಿತೀಯವಾದ ವಸ್ತು. ಎರಡನೆಯ ವಸ್ತುವೇ ಇಲ್ಲ – ಎಂದು ಅದ್ವೈತ ಸಿದ್ಧಾಂತವು ಪ್ರತಿಪಾದಿಸುತ್ತದೆ. ಇದೇ ವೇದಾಂತದರ್ಶನ ಎಂದು ಶ್ರೀಶಂಕರಾಚಾರ್ಯರು ನಿರೂಪಿಸಿದ್ದಾರೆ. ದ್ವೈತ, ವಿಶಿಷ್ಟಾದ್ವೈತ ಇತ್ಯಾದಿ ವೇದಾಂತ ಭೇದಗಳನ್ನು ಆಚಾರ್ಯರು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಬಹುಶಃ ವೇದಾಂತದಲ್ಲಿ ಆ ಭೇದಗಳು ಆಚಾರ್ಯರ ಕಾಲದಲ್ಲಿ ಇರಲಿಲ್ಲವೆಂದು ಹೇಳಬೇಕಾಗುತ್ತದೆ. ಆಚಾರ್ಯರ ಹೇಳಿಕೆಯಂತೆ ಅದ್ವೈತಸಿದ್ಧಾಂತ ಒಂದೇ ವೇದಾಂತ ಸಿದ್ಧಾಂತವಾಗಿದೆ. ಉಳಿದ ಎಲ್ಲವೂ ದ್ವೈತ ದರ್ಶನಗಳು. ಸಾಂಖ್ಯಾದಿ ದರ್ಶನಕಾರರೂ ಬೌದ್ಧ ಜೈನರೂ ಸಹ ಅದ್ವೈತಿಗಳನ್ನೇ ವೇದಾಂತಿಗಳೆಂದು ಉಲ್ಲೇಖಿಸಿರುವುದೂ ಇಲ್ಲಿ ಗಮನಾರ್ಹ.

ಮನುಷ್ಯನ ತೀವ್ರವಾದ ಬುದ್ಧಿಶಕ್ತಿಯೂ ಪ್ರತ್ಯಕ್ಷ, ಅನುಮಾನ ಇವೆರಡು ಪ್ರಮಾಣಗಳಿಗೆ ಕಟ್ಟುಬಿದ್ದಿದೆ. ಈ ದಿನ ವಿಸ್ಮಯಕಾರಿಯಾಗಿ ಬೆಳೆದಿರುವ ವಿಜ್ಞಾನವೂ ಸಹ ಪ್ರಯೋಗಪೂರ್ವಕವಾದ ಇವೆರಡು ಆಧಾರಗಳಿಂದಲೇ ಸಿದ್ಧವಾಗಿದೆ. ಆಪ್ತವಾಕ್ಯವೆಂಬ ಶಬ್ದಪ್ರಮಾಣವೂ ಸಹ, ಆಪ್ತನಿಗೆ ಈ ಎರಡು ಪ್ರಮಾಣಗಳಿಂದ ಪ್ರಾಪ್ತವಾದ ಜ್ಞಾನದಿಂದಲೇ ಪ್ರಮಾಣವೆನಿಸಿದೆ. ಅನುಮಾನವೂ

ಸಹ ಪ್ರತ್ಯಕ್ಷಮೂಲಕವಾದದ್ದು. ಪರಮಾರ್ಥವಾದ ಬ್ರಹ್ಮವು ಪ್ರತ್ಯಕ್ಷವಲ್ಲವಾದ್ದರಿಂದ ಅನುಮಾನಕ್ಕೂ ಎಟಕುವುದಿಲ್ಲ. ಆದ್ದರಿಂದಲೇ ವೇದಾಂತಿಗಳು ಅಪೌರುಷೇಯವಾದ ವೇದವಾಣಿಗೆ ಶರಣಾಗತರಾಗಿ ಅಧ್ಯಾತ್ಮಶಾಸ್ತ್ರವನ್ನು ಬೆಳೆಸಿದರು. ಪ್ರಸಿದ್ಧವಾದ ಒಂದು ಶ್ಲೋಕವು ಹೀಗಿದೆ.

**ಪ್ರತ್ಯಕ್ಷೇಣಾನುಮಿತ್ಯಾ ವಾ ಯಸ್ತೂಪಾಯೋ ನ ಬುಧ್ಯತೇ ।**
**ಏನಂ ವಿದಂತಿ ವೇದೇನ ತಸ್ಮಾದ್ವೇದಸ್ಯ ವೇದತಾ ॥**

"ಪ್ರತ್ಯಕ್ಷ ಅನುಮಾನ ಇವೆರಡಕ್ಕೂ ಯಾವ ಅಧ್ಯಾತ್ಮ ಮಾರ್ಗವು ತಿಳಿಯಲು ಅಶಕ್ಯವಾಗಿದೆಯೋ ಅದನ್ನು ಪ್ರಾಮಾಣಿಕರು ವೇದದಿಂದ ತಿಳಿದುಕೊಳ್ಳುತ್ತಾರೆ. ಆದ್ದರಿಂದ ವೇದಕ್ಕೆ ವೇದವೆಂಬ ಹೆಸರು ಅನ್ವರ್ಥವಾಗಿದೆ" ಎಂದು ಇದರ ತಾತ್ಪರ್ಯ. **ವೇದಯತಿ ಬೋಧಯತಿ** = ಮನುಷ್ಯನಿಗೆ ಅಗೋಚರವಾದ್ದನ್ನು ತಿಳಿಸಿಕೊಡುತ್ತದೆ. ಆದ್ದರಿಂದ ಶ್ರುತಿಗೆ ವೇದವೆಂದು ಹೆಸರು. ಈ ಕಾರಣದಿಂದ ಶ್ರೀಶಂಕರಾಚಾರ್ಯರು ಪ್ರಧಾನವಾಗಿ ಉಪನಿಷತ್ತುಗಳನ್ನು ಆಶ್ರಯಿಸಿದರು. ಉಪನಿಷತ್ತುಗಳ ಸಾರವೆನಿಸಿದ ಭಗವದ್ಗೀತೆ, ಇವೆರಡರ ಅರ್ಥನಿರ್ಣಯಕ್ಕಾಗಿ ಹೊರಟ ಬಾದರಾಯಣರ ಬ್ರಹ್ಮಸೂತ್ರ – ಇವು ಮೂರಕ್ಕೆ ಭಾಷ್ಯಗಳನ್ನು ರಚಿಸಿ ಅದ್ವೈತಸಿದ್ಧಾಂತವನ್ನು ದೃಢಪಡಿಸಿದರು.

"ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ" ಎಂಬುದು ಅದ್ವೈತಸಿದ್ಧಾಂತದ ಮೂಲಮಂತ್ರ.

೧. ಬ್ರಹ್ಮವೊಂದೇ ಸತ್ಯವಾಗಿ ಇರತಕ್ಕದ್ದು.

೨. ಈ ಜಗತ್ತು ಮಿಥ್ಯಾರೂಪವಾದದ್ದು.

೩. ಜೀವನು ಬ್ರಹ್ಮನೇ. ಜೀವನು ಬ್ರಹ್ಮನಿಂದ ಬೇರೆ ಅಲ್ಲ.

## ಬ್ರಹ್ಮ

ಈ ಶಬ್ದವು 'ಬೃಹಿ–ವೃದ್ಧೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ದೊಡ್ಡದು ಎಂದು ಶಬ್ದಾರ್ಥ. ಯಾವುದು ವಿಭುವೂ ಅನಂತವೂ ಶಾಶ್ವತವೂ ವಾಕ್ಕು ಮನಸ್ಸುಗಳಿಗೆ ಅಗೋಚರವೂ ಆಗಿದೆಯೋ ಅದನ್ನು ಬೇರೆ ಶಬ್ದದಿಂದ

ಗುರುತಿಸಲು ಸಾಧ್ಯವಿಲ್ಲವಾದ್ದರಿಂದ ಬ್ರಹ್ಮ ಶಬ್ದವನ್ನೇ ಉಪನಿಷತ್ತು ಹೆಚ್ಚಾಗಿ ಬಳಸಿದೆ. **ಆತ್ಮ** – ಎಂಬ ಶಬ್ದವನ್ನೂ ಪ್ರಯೋಗಿಸುವುದುಂಟು. **'ಅಯಮಾತ್ಮಾ ಬ್ರಹ್ಮ'** ಎಂಬ ಶ್ರುತಿವಾಕ್ಯದಲ್ಲಿ ಆತ್ಮನೆಂದರೆ ಜೀವನೆಂದರ್ಥ. ಪರಾತ್ಮನು ಇನ್ನೊಂದು ಸ್ಥಿತಿಯಲ್ಲಿರುವಾಗ ಜೀವನೆನಿಸುತ್ತಾನೆ. ಆದ್ದರಿಂದ ಪರಮಾತ್ಮ, ಜೀವಾತ್ಮ – ಎಂಬ ವ್ಯವಹಾರ ಬಂದಿದೆ.

**ಏಕಮೇವಾದ್ವಿತೀಯಂ ಬ್ರಹ್ಮ, ಸತ್ಯಂ ಜ್ಞಾನಮನಂತಂ ಬ್ರಹ್ಮ, ನಿರ್ಗುಣಂ ನಿಷ್ಕ್ರಿಯಂ ಶಾಂತಮ್, ಆನಂದೋ ಬ್ರಹ್ಮೇತಿ ವ್ಯಜಾನಾತ್** – ಇತ್ಯಾದಿ ನೂರಾರು ವೇದವಾಕ್ಯಗಳು ಪರಬ್ರಹ್ಮದ ಅಸ್ತಿತ್ವವನ್ನೂ ಅದರ ಸ್ವರೂಪವನ್ನೂ ತಿಳಿಸಿಕೊಡುತ್ತವೆ. **'ಸರ್ವಂ ಖಲ್ವಿದಂ ಬ್ರಹ್ಮ, ಆತ್ಮೈವೇದಂ ಸರ್ವಂ, ಪುರುಷ ಏವೇದಂ ಸರ್ವಂ, ನೇಹ ನಾನಾಸ್ತಿ ಕಿಂಚನ'** ಇತ್ಯಾದಿ ಶ್ರುತಿಗಳು ನಮಗೆ ಗೋಚರಿಸುವ ವಿಶ್ವವೆಲ್ಲವೂ ಬ್ರಹ್ಮ ವಸ್ತುವೇ, ಅದನ್ನು ಬಿಟ್ಟು ಇನ್ನೊಂದು ಪದಾರ್ಥವೇ ಇಲ್ಲವೆಂದು ಬೋಧಿಸುತ್ತವೆ. ಇದನ್ನೇ ಪರಬ್ರಹ್ಮ, ನಿರ್ಗುಣ, ನಿರ್ವಿಶೇಷ, ಸಚ್ಚಿದಾನಂದ ಸ್ವರೂಪ ಎಂದು ವರ್ಣಿಸಿದ್ದಾರೆ.

## ಸಗುಣಬ್ರಹ್ಮ

ಪರಬ್ರಹ್ಮವೇ ಅನಿರ್ವಚನೀಯವಾದ ಮಾಯಾಶಕ್ತಿಯ ವಿಜೃಂಭಣೆಯಿಂದ ಸಗುಣ ಬ್ರಹ್ಮವೆನಿಸುತ್ತದೆ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣವಾದದ್ದು ಈ ಸಗುಣಬ್ರಹ್ಮ, ಲೋಕದಲ್ಲಿ ಜನರು ಈಶ್ವರ, ದೇವರು ಎಂದು ವ್ಯವಹರಿಸುವುದು ಈ ಸಗುಣಬ್ರಹ್ಮವನ್ನು. ಈಶ್ವರನು ಸೃಷ್ಟಿಕಾರ್ಯದಲ್ಲಿ ತೊಡಗಿದಾಗ ಆತನನ್ನೇ ಬ್ರಹ್ಮನೆಂದೂ ಸ್ಥಿತಿಕಾರ್ಯವನ್ನನುಸರಿಸಿ ವಿಷ್ಣುವೆಂದೂ ಲಯಕಾರ್ಯವನ್ನು ಗಮನಿಸಿ ರುದ್ರನೆಂದೂ ಪುರಾಣಗಳು ವರ್ಣಿಸಿವೆ. ಬ್ರಹ್ಮ, ವಿಷ್ಣು, ರುದ್ರ (ಶಿವ) – ಎಂಬ ತ್ರಿಮೂರ್ತಿಗಳು ವಸ್ತುತಃ ಭಿನ್ನರಲ್ಲ. ಈ ತ್ರಿಮೂರ್ತಿಗಳಲ್ಲಿರುವ ಸೃಷ್ಟಿ, ಸ್ಥಿತಿ, ಲಯಶಕ್ತಿಗಳು ಕ್ರಮವಾಗಿ ಸರಸ್ವತೀ, ಲಕ್ಷ್ಮೀ, ಪಾರ್ವತಿಯರೆಂದು ತಿಳಿಯಬೇಕು. ಭಕ್ತರ ಉಪಾಸನಾರ್ಥವಾಗಿ ಸಗುಣ ಬ್ರಹ್ಮವು ನಾನಾ ದೇವತಾ ರೂಪಗಳನ್ನು ತಳೆದು ಭಕ್ತರನ್ನು ಅನುಗ್ರಹಿಸುತ್ತದೆ. ಎಲ್ಲ ದೇವತಾ ಪುರುಷರೂ ಸಗುಣಬ್ರಹ್ಮದ ವಿಭೂತಿಗಳು, ಪುರುಷದೇವತೆಗಳಲ್ಲಿರುವ ವಿಶಿಷ್ಟ ಶಕ್ತಿಗಳನ್ನೇ ಸ್ತ್ರೀದೇವತೆಗಳೆಂದೂ ಆಯಾ ಪುರುಷದೇವತೆಗಳ ಪತ್ನಿಯರೆಂದೂ

ವರ್ಣಿಸುವುದುಂಟು. ಇದೆಲ್ಲವೂ ಭಕ್ತಿಮಾರ್ಗಕ್ಕೆ ಉಪಯುಕ್ತವಾಗಿರುತ್ತದೆ.

## ಜಗತ್ತು

ಬ್ರಹ್ಮಾತಿರಿಕ್ತವಾದ ಪದಾರ್ಥವೇ ಇಲ್ಲವಾದರೆ ಈ ಜಗತ್ತಿನ ನಿರ್ಮಾಣ ವಾದದ್ದು ಹೇಗೆ? ಮನುಷ್ಯ, ಮೃಗ, ಪಕ್ಷಿ, ಕೀಟಾದಿಗಳ ಸಂಖ್ಯೆಗೆ ಮೇರೆಯೇ ಇಲ್ಲ. ಭೂಮಿ, ಅಗ್ನಿ, ಜಲ, ವಾಯುಗಳು ಸೂರ್ಯಾದಿಗ್ರಹನಕ್ಷತ್ರಗಳೂ ಅಸಂಖ್ಯವಾಗಿರುವ ಈ ಜಗತ್ತು ದ್ವೈತಮಯವಾಗಿ ಇರುವುದು ಸ್ಪಷ್ಟವಾಗಿದೆ. ಈ ಜಗತ್ತೆಲ್ಲವೂ ಬ್ರಹ್ಮವೇ ಎಂದು ಹೇಳುವುದೂ ಅಸಂಗತವಲ್ಲವೆ? ಈ ಎಲ್ಲ ವಸ್ತುಗಳೂ ಹುಟ್ಟುತ್ತವೆ, ನಾಶವಾಗುತ್ತವೆ. ಇವುಗಳಿಗೆ ನಾನಾ ರೂಪಗಳಿವೆ, ಕ್ರಿಯೆಗಳಿವೆ. ಬ್ರಹ್ಮದ ಒಂದು ಸ್ವರೂಪವೂ ಇದರಲ್ಲಿಲ್ಲ ಎಂಬ ಆಕ್ಷೇಪಗಳು ತಲೆ ಎತ್ತುತ್ತವೆ. ಇದಕ್ಕೆ ವೇದಾಂತಿಗಳು ಕೊಡುವ ಉತ್ತರ ಇದು –

ಐಂದ್ರಜಾಲಿಕನು ತನ್ನ ಇಂದ್ರಜಾಲದಿಂದ ವಿಚಿತ್ರವಾದ ವಸ್ತುಗಳನ್ನು ನಿರ್ಮಿಸುವಂತೆ, ಈಶ್ವರನು ತನ್ನ ಅದ್ಭುತವಾದ ಮಾಯಾಶಕ್ತಿಯಿಂದ ಈ ಜಗತ್ತನ್ನು ನಿರ್ಮಿಸಿದ್ದಾನೆ. ಐಂದ್ರಜಾಲಿಕನು ನಿರ್ಮಿಸಿದ ವಸ್ತುಗಳು ಪ್ರೇಕ್ಷಕರಿಗೆ ಸತ್ಯವಾಗಿಯೇ ತೋರುತ್ತವೆ. ಹಾಗೆಯೇ ಈ ಜಗತ್ತು ನಮಗೆ ಸತ್ಯವಾಗಿ ತೋರುತ್ತದೆ. ಇದು ನಮ್ಮೆಲ್ಲರ ಅಜ್ಞಾನದ ಫಲ. ಅಜ್ಞಾನವಿರುವವರೆಗೂ ಈ ಜಗತ್ತು ಸತ್ಯವಾಗಿಯೇ ಭಾಸವಾಗುತ್ತದೆ. ಈ ಅಜ್ಞಾನವನ್ನು ವೇದಾಂತಿಗಳು ಅವಿದ್ಯೆ ಎನ್ನುತ್ತಾರೆ. ಬ್ರಹ್ಮಜ್ಞಾನವಾಗುವವರೆಗೂ ಈ ಅಜ್ಞಾನವಿರುತ್ತದೆ. ಇದಕ್ಕೆ ರಜ್ಜುಸರ್ಪ ದೃಷ್ಟಾಂತವನ್ನು ಕೊಡುತ್ತಾರೆ. ರಜ್ಜುವೆಂದರೆ ಹಗ್ಗ. ಮಾಸಲು ಕತ್ತಲೆಯಲ್ಲಿ ದೂರದಲ್ಲಿ ಬಿದ್ದಿರುವ ಹಗ್ಗವು ಹಾವಿನಂತೆ ಕಾಣುತ್ತದೆ. ನಿಜವಾಗಿ ಹಾವಾಗಿದ್ದರೆ ಯಾವರೀತಿ ಭಯ, ನಡುಕಗಳಾಗುತ್ತವೆಯೋ ಹಾಗೆಯೇ ಹಾವೆಂಬ ಭ್ರಮೆಯಿಂದಲೂ ಜನರಿಗೆ ಆಗುತ್ತವೆ. ಆದ್ದರಿಂದ ವಿಶ್ವವೆಲ್ಲವೂ ಮಾಯಾಶಕ್ತಿಯ ವಿಜೃಂಭಣವೆಂದು ತಿಳಿಯಬೇಕು. ನಿತ್ಯಸಿದ್ಧವಾದ ಪರಮಾಣುಗಳಿಂದ ಜಗತ್ತು ಹುಟ್ಟಿತು ಎಂಬ ವಾದವನ್ನು ಅದ್ವೈತದರ್ಶನವು ಅಂಗೀಕರಿಸುವುದಿಲ್ಲ.

ಹೀಗೆ ಹೇಳಲು ಕಾರಣವೇನೆಂದರೆ, ಪರಬ್ರಹ್ಮವು ರೂಪರಹಿತವೂ ವಿಕಾರವಿಲ್ಲದ್ದೂ ಶಾಶ್ವತವೂ ಆಗಿದೆಯೆಂದು ವೇದವೇ ತಿಳಿಸಿಕೊಟ್ಟಿದೆ.

**' ನ ತು ದ್ವಿತೀಯಮಸ್ತಿ '** ಇತ್ಯಾದಿ ವಾಕ್ಯಗಳಿಂದ ಇನ್ನೊಂದು ವಸ್ತುವೇ ಇಲ್ಲವೆಂದು ಹೇಳಿದೆ. ಅನಂತರ "**ಸ ಐಕ್ಷತ ಲೋಕಾನ್ನು ಸೃಜಾ ಇತಿ** = ಆ ಪರಮಾತ್ಮನು ಈ ಲೋಕಗಳನ್ನೆಲ್ಲ ಸೃಜಿಸಬೇಕೆಂದು ಆಲೋಚಿಸಿದನು." "**ಬಹು ಸ್ಯಾಂ ಪ್ರಜಾಯೇಯೇತಿ** = ನಾನು ಬಹುರೂಪನಾಗಬೇಕು, ನಾನು ಆ ರೀತಿ ಹುಟ್ಟಬೇಕು" ಎಂದು ಆಲೋಚಿಸಿ ಈ ಲೋಕವನ್ನು ಸೃಷ್ಟಿಸಿದನೆಂದು ಶ್ರುತಿಯೇ ಹೇಳುತ್ತದೆ. ಇಂತಹ ಹಲವಾರು ಮಾತುಗಳು ಬೇರೆ ಬೇರೆ ಉಪನಿಷತ್ತುಗಳಲ್ಲಿ ಬಂದಿವೆ. ಈಶ್ವರನ ಮಾಯೆಯೂ ಅಚಿಂತ್ಯರಚನಾ ಶಕ್ತಿಯುಳ್ಳದ್ದು – ಎಂದು ವೇದಾದಿಶಾಸ್ತ್ರಗಳು ಘೋಷಿಸಿವೆ.

**ಮಾಯಾಂ ತು ಪ್ರಕೃತಿಂ ವಿದ್ಯಾತ್ ಮಾಯಿನಂ ತು ಮಹೇಶ್ವರಂ ॥**

"ಮಾಯೆಯನ್ನು ಪ್ರಕೃತಿಯೆಂದೂ ಈ ಮಾಯೆಯುಳ್ಳ ಮಾಯಾವಿಯೇ ಪರಮೇಶ್ವರನೆಂದೂ ತಿಳಿಯತಕ್ಕದ್ದು" ಈ ಬಗೆಯ ವಚನಗಳೂ ವಿಪುಲವಾಗಿ ದೊರೆಯುತ್ತವೆ. ಆದ್ದರಿಂದ ಪ್ರಕೃತಿಯೆಂದರೆ ವೇದಾಂತದಲ್ಲಿ ಈಶ್ವರನ ಮಾಯೆಯೇ.

ಲೋಕದಲ್ಲಿ ಒಂದು ಗಡಿಗೆಯನ್ನು ಮಾಡುವುದಕ್ಕೆ ಮಣ್ಣು, ಕುಂಬಾರ ಇವೆರಡು ಅತ್ಯಾವಶ್ಯಕ. ಇವೆರಡೂ ಗಡಿಗೆಯ ಉತ್ಪತ್ತಿ ಕಾರಣಗಳು. ಇವುಗಳಲ್ಲಿ ಮಣ್ಣು ಗಡಿಗೆಗೆ ಉಪಾದಾನ ಕಾರಣ. ಕುಂಬಾರನು ನಿಮಿತ್ತಕಾರಣ. ಸಕಲ ಪದಾರ್ಥಗಳ ಸೃಷ್ಟಿಗೂ ಈ ಕಾರಣಗಳು ಇದ್ದೇ ಇರಬೇಕು. ಬಟ್ಟೆಗೆ ನೂಲು ಉಪಾದಾನಕಾರಣ. ನೇಯ್ಗೆಯವನು ನಿಮಿತ್ತ ಕಾರಣ. ಹೀಗೆ ಊಹಿಸಿ ಕೊಳ್ಳಬಹುದು. ವಿಚಿತ್ರವಾದ ಈ ಜಗತ್ತಿಗಾದರೋ ಸಗುಣಬ್ರಹ್ಮವೇ ಉಪಾದಾನ ಕಾರಣವೂ ನಿಮಿತ್ತಕಾರಣವೂ ಆಗಿದೆ. ಬ್ರಹ್ಮವು ಜಗತ್ತಿನ ರೂಪದಲ್ಲಿ ಕಾಣುತ್ತದೆಯಾದ್ದರಿಂದ ಅದು ಗಡಿಗೆಗೆ ಮಣ್ಣು ಇರುವಂತೆ ಉಪಾದಾನವಾಗಿದೆ. ಬ್ರಹ್ಮವು ಚೇತನವಾದ್ದರಿಂದ ಕುಂಬಾರನಂತೆ ನಿಮಿತ್ತಕಾರಣವೂ ಹೌದು.

ಮಣ್ಣಿನ ಮುದ್ದೆ ಗಡಿಗೆಯಾಗುವಾಗ, ತನ್ನ ಮೊದಲಿನ ರೂಪವನ್ನು ಬಿಟ್ಟು ಇನ್ನೊಂದು ರೂಪವನ್ನು ತಾಳಬೇಕಾಗುತ್ತದೆ. ಹೀಗೆಯೇ ನೂಲು ಬಟ್ಟೆಯಾಗುವಾಗ, ಹಾಲು ಮೊಸರಾದಾಗ; ಬೆಣ್ಣೆ ತುಪ್ಪವಾದಾಗ ಮೂಲವಸ್ತು ರೂಪಾಂತರವನ್ನು ತಾಳುವುದು. ಇದಕ್ಕೆ ಪರಿಣಾಮವಾದವೆಂದು ಹೆಸರು. ಹಾಗೆ

ಬ್ರಹ್ಮವು ಜಗತ್ತಾಗಿ ಪರಿಣಮಿಸುವುದಿಲ್ಲವೆಂಬುದೇ ವಿಶೇಷ. ಇದನ್ನು ಮುಖ್ಯವಾಗಿ ತಿಳಿದಿರಬೇಕು. ವೇದಾಂತಿಗಳು ಜಗತ್ತನ್ನು ಬ್ರಹ್ಮನ **ವಿವರ್ತ**ವೆನ್ನುತ್ತಾರೆ. ವಿವರ್ತವೆಂದರೆ ತನ್ನ ಸ್ವರೂಪವನ್ನು ತ್ಯಜಿಸದೆಯೇ ರೂಪಾಂತರವನ್ನು ತಳೆದಂತೆ ಭಾಸವಾಗುವುದು. ಹಗ್ಗವು ಹಾವಾಗಿ ತೋರುವುದು ವಿವರ್ತ. ದೂರದಲ್ಲಿರುವ ಒಂದು ಮೋಟು ಮರವು ಮನುಷ್ಯನಂತೆ ಕಾಣಿಸಿದರೆ ಅದು ವಿವರ್ತ. ಹೀಗೆ ಎಲ್ಲೆಲ್ಲಿ ಭ್ರಮೆಯಿಂದ ಒಂದು ವಸ್ತು ಇನ್ನೊಂದರಂತೆ ತೋರುತ್ತದೆಯೋ ಅಲ್ಲಿ ವಿವರ್ತವಾದವನ್ನು ಸ್ವೀಕರಿಸಬೇಕು. ಬ್ರಹ್ಮವೇ ಜಗತ್ತಾಗಿ ತೋರುವುದು ಈ ವಿವರ್ತದಿಂದ. ಆದಕಾರಣ ಅದ್ವೈತವಾದ ಬ್ರಹ್ಮವು ದ್ವೈತಾತ್ಮಕ ಜಗತ್ತಾಗಿಯೂ ಜಡವಾಗಿಯೂ ನಾನಾ ರೂಪಸಹಿತವಾಗಿಯೇ ಕಾಣಿಸಿದರೆ ಬಾಧೆ ಏನೂ ಇಲ್ಲ. ಬ್ರಹ್ಮವೇ ಎಂದರೂ ಬಾಧೆ ಇಲ್ಲ. ಹಗ್ಗವು ಹಾವೆಂದು ಭ್ರಮಿಸಿದಾಗ, ಭ್ರಮೆಯು ನೀಗಿದ ಮೇಲೆ, ಇರುವುದು ಕೇವಲ ಹಗ್ಗವೇ ಎಂದರೆ ಹೇಗೋ, ಹಾಗೆ ಇಲ್ಲಿಯೂ ತಿಳಿಯಬೇಕು. ಭ್ರಮೆಯ ಹಾವಿಗೆ ಹಗ್ಗವು ಅಧಿಷ್ಠಾನ. ಅಂತೆಯೇ ಈ ಜಗತ್ತಿಗೆ ಬ್ರಹ್ಮವು ಅಧಿಷ್ಠಾನವಾಗಿದೆ.

## ಜಗನ್ಮಿಥ್ಯಾವಾದದ ಅಭಿಪ್ರಾಯ

'ನಾವು ವಾಸಿಸುವ ಮನೆ ಮಠಗಳೆಲ್ಲವೂ ಮಿಥ್ಯೆ. ಯಂತ್ರಗಳೂ ಕಾರ್ಖಾನೆಗಳು ಮೊದಲಾದವೂ ಸುಳ್ಳು. ಈ ಜಗತ್ತು ಇಲ್ಲವೇ ಇಲ್ಲ' – ಎಂದು ಹೇಳಿದರೆ ಆಶ್ಚರ್ಯವೆನಿಸುತ್ತದೆ. ಇಂತಹ ಮಾತನ್ನು ನಂಬಬಹುದೆ? ಎಂದು ಕೇಳಿದರೆ ವಿಸ್ಮಯವೇನಿಲ್ಲ. ಇದರ ಯಥಾರ್ಥತೆಯನ್ನು ತಿಳಿದುಕೊಳ್ಳಬೇಕು. ಸತ್ಯವಲ್ಲದ್ದು ಮಿಥ್ಯೆ ಎಂದು ಹೇಳಬಹುದಷ್ಟೇ? ಸತ್ಯವೆಂದರೇನೆಂಬುದನ್ನು ಮೊದಲು ತಿಳಿಯುವುದು ಅವಶ್ಯಕ. ಶ್ರೀಶಂಕರಾಚಾರ್ಯರು "**ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ನ ವ್ಯಭಿಚರತಿ ತತ್ ಸತ್ಯಂ**" ಎಂದು ಸತ್ಯದ ಲಕ್ಷಣವನ್ನು ಹೇಳಿದ್ದಾರೆ. ಎಂದರೆ ಯಾವ ಪದಾರ್ಥವು ಯಾವ ರೂಪದಲ್ಲಿ ನಿಶ್ಚಿತವಾಗಿದೆಯೋ ಆ ರೂಪವು ಸತತವಾಗಿ ಸಮಭಾವದಿಂದ ವಿದ್ಯಮಾನ ವಾಗಿದೆಯೋ ಎಂದಿಗೂ ತನ್ನ ರೂಪವನ್ನು ಬದಲಾಯಿಸುವುದಿಲ್ಲವೋ ಅದು **ಸತ್ಯವೆಂದರ್ಥ**. ಈ ಲಕ್ಷಣದಂತೆ ಜಗತ್ತು ಎಂದಿಗೂ ಸತ್ಯವಾಗುವುದಿಲ್ಲ. ಜಗತ್ತಿನಲ್ಲಿರುವ ಪ್ರತಿಯೊಂದು ಪದಾರ್ಥವೂ ತನ್ನ ಸ್ವರೂಪವನ್ನು

ಪರಿವರ್ತಿಸಿಕೊಳ್ಳುತ್ತಲೇ ಇರುತ್ತದೆ. ಪ್ರತಿಯೊಂದು ವಸ್ತುವೂ ಬೆಳೆಯುತ್ತದೆ, ಕ್ಷೀಣಿಸುತ್ತದೆ, ನಾಶವಾಗುತ್ತದೆ. ಅತ್ಯಂತಿಕ ಪ್ರಳಯದಲ್ಲಂತೂ ಸಮಸ್ತಜಗತ್ತೂ ಏಕಕಾಲದಲ್ಲಿ ನಾಶವಾಗಿರುತ್ತದೆ. ತ್ರಿಕಾಲಾಬಾಧಿತ ಸತ್ಯವಾಗಿ ಇರತಕ್ಕದ್ದು ಸತ್ಯವಾದ ಬ್ರಹ್ಮ ಒಂದೇ. **'ಸತ್ಯಂ ಜ್ಞಾನಮನಂತಂ ಬ್ರಹ್ಮ'** ಎಂದು ಉಪನಿಷತ್ತು ಬ್ರಹ್ಮವನ್ನು ಮಾತ್ರ ಸತ್ಯವೆಂದು ತಿಳಿಸಿದೆ.

ರಜ್ಜುವನ್ನು ಸರ್ಪವೆಂದು ಭ್ರಮಿಸಿದಾಗ ರಜ್ಜುವೇ ಸತ್ಯ, ಸರ್ಪವು ಮಿಥ್ಯೆ ಎಂಬುದು ನಿರ್ವಿವಾದ. ಆದರೆ ಸರ್ಪವೆಂಬ ಭ್ರಮೆ ಇರುವವರೆಗೂ ಸರ್ಪವೇ ಸತ್ಯವೆಂದು ಮನುಷ್ಯನು ತಿಳಿದಿರುತ್ತಾನೆ. ಹಾಗೆಯೇ ಜನರಿಗೆ ಅವಿದ್ಯೆ ಇರುವವರೆಗೂ ಜಗತ್ತು ಸತ್ಯವಾಗಿಯೇ ಇರುತ್ತದೆ. ಲೋಕವ್ಯವಹಾರಗಳೆಲ್ಲವೂ ಅವಿದ್ಯಾದಶೆಯಲ್ಲಿಯೇ ನಡೆಯುವುದರಿಂದ ನಮ್ಮ ವ್ಯವಹಾರಗಳೆಲ್ಲವೂ ನಡೆಯಲೇಬೇಕು. ಜಗತ್ತು, ಪಾಪ, ಪುಣ್ಯ, ವಿಧಿ, ನಿಷೇಧ ಮೊದಲಾದವು ಗಳೆಲ್ಲವೂ ಈ ವ್ಯವಹಾರ ಸ್ಥಿತಿಯಲ್ಲಿ ಸತ್ಯವೆಂದೇ ತಿಳಿಯಬೇಕು. ಅವಿದ್ಯೆಯು ತೊಲಗಿದ ಬ್ರಹ್ಮಜ್ಞಾನಿಗೆ ಸಾಂಸಾರಿಕ ಅನುಭವವೆಲ್ಲವೂ ಬಾಧಿತವಾಗಿ ಜಗತ್ತು ಮಿಥ್ಯೆಯಾಗಿ ಬಿಡುತ್ತದೆ. ಜಗತ್ತು ಮಿಥ್ಯೆ ಎನ್ನುವುದು ಬ್ರಹ್ಮ ಜ್ಞಾನಿಯ ದೃಷ್ಟಿಯಿಂದ. ಬ್ರಹ್ಮಜ್ಞಾನವಾಗುವವರೆಗೆ ನಮ್ಮಂತಹವರಿಗೆ ಜಗತ್ತು ಸತ್ಯವೇ ಎಂಬುದು ಸರಳವಾಗಿ ಹೇಳಬಹುದಾದ ಸಿದ್ಧಾಂತ.

## ಸೃಷ್ಟಿಕ್ರಮ

ಸಗುಣ ಬ್ರಹ್ಮವೆಂದರೆ ಮಾಯೋಪಾಧಿಯಿಂದ ಕೂಡಿದ ಈಶ್ವರ, **'ಆತ್ಮನ ಆಕಾಶಃ ಸಂಭೂತಃ'** ಎಂದು ಸೃಷ್ಟಿಕ್ರಮವನ್ನು ಹೇಳುವ ಶ್ರುತಿವಾಕ್ಯದಲ್ಲಿ ಆತ್ಮನೆಂದರೆ ಈಶ್ವರ. ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ – ಇವು ಕ್ರಮವಾಗಿ ಹುಟ್ಟಿ **ಪಂಚೀಕರಣಪ್ರಕ್ರಿಯೆಯಿಂದ** ಪರಸ್ಪರ ಸಂಮಿಶ್ರವಾಗುತ್ತವೆ. ಅನಂತರ ಔಷಧಿಗಳೂ ಅನ್ನವೂ ಮನುಷ್ಯನೇ ಮೊದಲಾದ ಪ್ರಾಣಿಗಳೂ ಜನಿಸಿದವೆಂದು ಶ್ರುತಿಯ ಹೇಳುತ್ತದೆ. ಪ್ರಾಣಿಗಳ ದೇಹೇಂದ್ರಿಯಗಳೆಲ್ಲವೂ ಆಕಾಶಾದಿ ಪಂಚಭೂತಗಳಿಂದ ಹುಟ್ಟಿದ ವಿಕಾರಗಳು. ಇವೆಲ್ಲವೂ ಜಡಪ್ರಪಂಚಕ್ಕೆ ಪ್ರಕೃತಿ. ಏವಂಚ ಈ ಜಗತ್ತು ಪರಮಾತ್ಮನ ವಿವರ್ತವೆಂದೂ ಮಾಯಾಕಲ್ಪಿತವಾದ್ದರಿಂದ ಪಾರಮಾರ್ಥಿಕವಾದ ಅಸ್ತಿತ್ವವು ಇದಕ್ಕಿಲ್ಲವೆಂದೂ ಸಿದ್ಧವಾಗುತ್ತದೆ.

ಇನ್ನು ಮಾನವಾದಿಗಳ ಜಡಶರೀರದಲ್ಲಿ ಚೇತನಾತ್ಮಕವಾದ ಜೀವವಿದೆಯಲ್ಲ, ಇದು ಯಾವುದು? ಚೇತನಾತ್ಮಕವಾದದ್ದು **ಪರಬ್ರಹ್ಮ** ಒಂದೇ ಇನ್ನೊಂದಿಲ್ಲ. **'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್'** (ತೈತ್ತಿರೀಯ ಉ, ಆನಂದ. ೬) ಇತ್ಯಾದಿ ವೇದಪ್ರಾಮಾಣ್ಯದಿಂದ, ಮಾನವಾದಿಶರೀರಗಳಲ್ಲಿ ಅನುಪ್ರವೇಶ ಮಾಡಿದ ಪರಮಾತ್ಮನೇ ಜೀವಾತ್ಮನೆಂದು ಅದ್ವೈತ ವೇದಾಂತವು ಪ್ರತಿಪಾದಿಸಿದೆ.

## ಜೀವ

**'ಜೀವ-ಪ್ರಾಣಧಾರಣೇ'** ಎಂಬ ಧಾತುವಿನಿಂದ ಜೀವ ಶಬ್ದವು ನಿಷ್ಪನ್ನವಾಗಿದೆ. ಪ್ರಾಣವಾಯುವನ್ನು ಧರಿಸಿದವನು ಎಂದರೆ ಶರೀರದಲ್ಲಿ ಪ್ರಾಣವನ್ನು ಹಿಡಿದು ನಿಲ್ಲಿಸಿದವನು ಜೀವನೆಂದರ್ಥ. ಮೇಲೆ ಹೇಳಿದ ಅನುಪ್ರವೇಶದಲ್ಲಿ ಪರಮಾತ್ಮನೇ ಜೀವಾತ್ಮನೆಂದು ಹೇಳಲಾಯಿತು. ಇದು ಛಾಂದೋಗ್ಯದಲ್ಲಿ ಇನ್ನೂ ಸ್ಫುಟವಾಗಿದೆ. **'ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ'** (ಛಾಂ.ಉ ೬-೩-೨) ಇದಕ್ಕೆ ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ **'ಪ್ರಾಣಧಾರಣ ಕರ್ತ್ರಾ ಆತ್ಮನೇತಿ ವಚನಾತ್ ಸ್ವಾತ್ಮನೋಽವ್ಯತಿರಿಕ್ತೇನ ಚೈತನ್ಯರೂಪತಯಾ ಅವಿಶಿಷ್ಟೇನ - ಇತ್ಯೇತದ್ದರ್ಶಯತಿ'** ಎಂದು ಬರೆದಿದ್ದಾರೆ. ಇದರ ಅರ್ಥವೇನೆಂದರೆ, **'ಜೀವ** ಎಂದರೆ **ಪ್ರಾಣಧಾರಣ ಕರ್ತೃ.'** 'ಅಂತಹ ಕರ್ತೃವಾಗಿರುವ ಜೀವನಾದ ತನ್ನಿಂದ' ಎಂದು ಶ್ರುತಿಯು ಹೇಳಿದೆ. ಹೀಗೆ ಅಭೇದವನ್ನು ಹೇಳಿರುವುದರಿಂದ ಜೀವನು ಪರಮಾತ್ಮನಿಗಿಂತ ಭಿನ್ನನಲ್ಲವೆಂದೂ ಜೀವನು ಚೈತನ್ಯ ಸ್ವರೂಪನಾಗಿರುವುದರಿಂದ ಜೀವನಲ್ಲಿ ವಿಶೇಷವೇನೂ ಇಲ್ಲವೆಂದೂ ಶ್ರುತಿಯು ತಿಳಿಸುತ್ತದೆ.

ಅನುಪ್ರವೇಶವೆಂದರೆ ಗೃಹಪ್ರವೇಶದಂತೆ ಹೊರಗಿನಿಂದ ಒಳಗೆ ಹೋಗುವುದಲ್ಲ. ಆತ್ಮನು ಅಪರಿಚ್ಛಿನ್ನನೂ ಅಮೂರ್ತನೂ ಸರ್ವವ್ಯಾಪಿಯೂ ಆಗಿರುವುದರಿಂದ ಶರೀರದೊಳಗೆ ಸಹ ಮೊದಲೇ ವ್ಯಾಪಿಸಿಕೊಂಡಿರುತ್ತಾನೆ. ಆದ್ದರಿಂದ ಶರೀರದಲ್ಲಿರುವ ಬುದ್ಧಿಯೆಂಬ ಗುಹೆಯಲ್ಲಿಯೇ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದೂ ಹೊರಗೆ ಹುಡುಕಬೇಕಾದ್ದಿಲ್ಲವೆಂದೂ ತಿಳಿಸುವುದಕ್ಕಾಗಿ ಅನುಪ್ರವೇಶವನ್ನು ಆಲಂಕಾರಿಕವಾಗಿ ಶ್ರುತಿಯು ನಿರೂಪಿಸಿದೆ. **'ಯೋ ವೇದ ನಿಹಿತಂ ಗುಹಾಯಾಂ'** ಎಂಬುದು ಶ್ರುತಿವಚನ, **ಗುಹಾ** ಎಂದರೆ ಬುದ್ಧಿ, ಅಂತಃಕರಣ. ಈ ಅಂತಃಕರಣವೆಂಬ ಉಪಾಧಿ ವಿಶಿಷ್ಟನಾದ ಆತ್ಮನೇ

ವ್ಯವಹಾರದಲ್ಲಿ ಜೀವ. ಪರಮಾರ್ಥದಲ್ಲಿ ಈ ವೈಶಿಷ್ಟ್ಯವೂ ಇಲ್ಲ. ಶಾಸ್ತ್ರೀಯ ಪರಿಭಾಷೆಯಲ್ಲಿ ಜೀವನನ್ನು **ಅಂತಃಕರಣಾವಚ್ಛಿನ್ನಚೈತನ್ಯ** ಎನ್ನುತ್ತಾರೆ. ಉಪಾಧಿಗಳಾದ ಅಂತಃಕರಣಗಳು ಅನಂತವಾಗಿರುವುದರಿಂದ ಜೀವರೂ ಅನಂತ ಸಂಖ್ಯೆಯವರಾಗುತ್ತಾರೆ. ಆಕಾಶವು ಒಂದೇ ಆದರೂ ಘಟಗಳಿರುವಷ್ಟು ಘಟಾಕಾಶಗಳು ಬೆಳೆದು ಬಹು ಆಗುವಂತೆ ಎಂದು ತಿಳಿಯಬೇಕು.

ಪಾಪ ಪುಣ್ಯಗಳೆಂಬ ಸಂಸ್ಕಾರಗಳು ಅಂತಃಕರಣಗಳಿಗೆ ಮಾತ್ರ ಅಂಟತಕ್ಕವು. ಒಬ್ಬನ ಪಾಪಪುಣ್ಯಗಳು ಇನ್ನೊಬ್ಬನಿಗೆ ಸಂಬಂಧಿಸುವುದಿಲ್ಲ. ಸಂಸಾರವು ಅನಾದಿಯಾದ್ದರಿಂದ ಕರ್ಮಾನುಸಾರವಾಗಿ ನಾನಾ ಜನ್ಮಗಳನ್ನು ಜೀವರು ಪಡೆದಿದ್ದಾರೆ. ಜೀವನು ಮಾಯೆಗೆ ಅಧೀನ, ಅವಿದ್ಯಾವಶನಾಗಿ ಈತನು ಅಲ್ಪಜ್ಞನೂ ಅಲ್ಪಶಕ್ತನೂ ಆಗಿದ್ದಾನೆ. ಈಶ್ವರನಾದರೋ ಮಾಯೆಯನ್ನು ವಶಪಡಿಸಿಕೊಂಡವನು. ಅವನಿಗೆ ಅವಿದ್ಯಾಸಂಬಂಧವಿಲ್ಲ. ಆದ್ದರಿಂದ ಈಶ್ವರನು ಸರ್ವಜ್ಞನೂ ಸರ್ವಶಕ್ತನೂ ಆಗಿದ್ದಾನೆ.

## ಜೀವ-ಬ್ರಹ್ಮರ ಐಕ್ಯ

**ಸರ್ವಂ ಖಲ್ವಿದಂ ಬ್ರಹ್ಮ, ಆತ್ಮೈವೇದಂ ಸರ್ವಂ, ಪುರುಷ ಏವೇದಂ ಸರ್ವಂ** - ಇತ್ಯಾದಿ ಶ್ರುತಿವಾಕ್ಯಗಳಿಂದ, ಸಮಸ್ತ ಜಗತ್ತೂ ಬ್ರಹ್ಮವೇ ಆಗಿದೆ, ಜೀವಾತ್ಮನೂ ಬ್ರಹ್ಮವೇ ಆಗಿದ್ದಾನೆ, ಎಂಬುದು ಸ್ಪಷ್ಟವಾಗುತ್ತದೆ. ಸಂಸಾರ ವ್ಯವಹಾರಗಳಲ್ಲಿ ಮಗ್ನರಾದ ಜನರಿಗೆ ಈ ವಿಷಯದಲ್ಲಿ ವಿಶ್ವಾಸ ಹುಟ್ಟುವುದು ಕಷ್ಟವೇ. ಆದ್ದರಿಂದ ಸಂಸಾರ ದುಃಖದಲ್ಲಿ ಸಿಕ್ಕಿಕೊಂಡು ನರಳುವ ಜನರ ಸ್ಥಿತಿಗೆ ಮರುಗಿ, ಕೃಪಾದೃಷ್ಟಿಯುಳ್ಳ ಭಗವದ್ವಾಣಿಯಾದ ಉಪನಿಷತ್ತು ವೇದಾಂತಸಾರವಾದ ಅದ್ವೈತವನ್ನು ಮತ್ತೆ ಮತ್ತೆ ಉಪದೇಶಿಸಿದೆ. ಬೃಹದಾರಣ್ಯಕೋಪನಿಷತ್ತು **'ಇಯಂ ಪೃಥಿವೀ....'** ಎಂದು ಆರಂಭಿಸಿ **'ಯೋಽಯಮಾತ್ಮಾ ಇದಮಮೃತಮಿದಂ ಬ್ರಹ್ಮ ಇದಂ ಸರ್ವಮ್'** ಎಂದು ಹದಿನಾಲ್ಕು ಸಲ ಉದ್ಘೋಷಿಸಿದೆ (ಬೃಹ.ಉ. ೨-೫). ಛಾಂದೋಗ್ಯದಲ್ಲಿ ಉದ್ದಾಲಕ ಮಹರ್ಷಿಯು ತನ್ನ ಪುತ್ರನಾದ ಶ್ವೇತಕೇತುವಿಗೆ **'ಐತದಾತ್ಮ್ಯಮಿದಂ ಸರ್ವಮ್ । ತತ್ ಸತ್ಯಮ್ । ಸ ಆತ್ಮಾ । ತತ್ತ್ವಮಸಿ ಶ್ವೇತಕೇತೋ'** ಎಂದು ಒಂಬತ್ತು ಸಲ ಉಪದೇಶಿಸಿದ್ದಾನೆ. (ಛಾಂ.ಉ.೬-೧೧) "ಅತಿಸೂಕ್ಷ್ಮವಾದ ಸತ್ ಎಂಬುದು ಈ ಜಗತ್ತಿಗೆ ಮೂಲವೆಂದು ಹೇಳಿದೆನಷ್ಟೆ. ಇದೇ ವಿಶ್ವದ

ಸಾರಸರ್ವಸ್ವವಾಗಿದೆ. ಈ ಸತ್ ಎಂಬುದೊಂದೇ ಸತ್ಯವಾದದ್ದು. ಅದೇ ಪ್ರತ್ಯಗಾತ್ಮ (ಜೀವಾತ್ಮ). ಎಲೈ ಶ್ವೇತಕೇತು, ಆ ಸದ್ವಸ್ತುವೇ ನೀನಾಗಿದ್ದೀಯೆ" ಎಂದು ಉಪದೇಶದ ಅಭಿಪ್ರಾಯ. ಈ ಮಾತನ್ನಾಡಿದಾಗ ಎಲ್ಲರಿಗೂ ಆಗುವಂತೆ ಶ್ವೇತಕೇತುವಿಗೂ ದಿಗ್ ಭ್ರಮೆಯಾಗಿರಬೇಕು. ಅದನ್ನು ಹೋಗಲಾಡಿಸಿ ಸತ್ಯವನ್ನು ದೃಢಪಡಿಸುವುದಕ್ಕಾಗಿ ಉದ್ದಾಲಕ ಮಹರ್ಷಿಯು ಮತ್ತೆ ಮತ್ತೆ ಒಂಬತ್ತು ಸಲ ಹೇಳಿ ಮಗನಿಗೆ ಸತ್ಯವನ್ನು ತಿಳಿಸಿಕೊಟ್ಟಿದ್ದಾನೆ. ದ್ವೈತಿಗಳು ಹೇಳುವಂತೆ **'ತತ್ತ್ವಮಸಿ'** ಎಂಬ ಮಹಾವಾಕ್ಯದ ಅರ್ಥವನ್ನು ಎಳೆದಾಡುವುದಾದರೆ, ಒಂಬತ್ತು ಸಲ ಹೇಳಬೇಕಾದದ್ದೇ ಇರಲಿಲ್ಲ. ಅಂತೆಯೇ **'ಅಹಂ ಬ್ರಹ್ಮಾಸ್ಮಿ'** ಇತ್ಯಾದಿ ವೇದವಾಕ್ಯಗಳು ಅದ್ವೈತವನ್ನು ದೃಢಪಡಿಸುತ್ತವೆಯೆಂದು ತಿಳಿಯಬೇಕು.

## ಮೋಕ್ಷ

'ಮೋಕ್ಷ' ಶಬ್ದಕ್ಕೆ ಬಿಡುಗಡೆ ಎಂದರ್ಥ. ಯಾವುದರಿಂದ ಬಿಡುಗಡೆ? ತಾಪತ್ರಯಗಳಿಂದ ತುಂಬಿದ ಸಂಸಾರದಿಂದ ಬಿಡುಗಡೆ. ಅವಿದ್ಯೆಯಿಂದ ಮನುಷ್ಯನು ತನ್ನ ನಿಜಸ್ವರೂಪವನ್ನರಿಯದೆ, ನಾನು ಮನುಷ್ಯ, ಗಂಡಸು, ಹೆಂಗಸು, ಕೃಶ, ಸ್ಥೂಲ, ರೋಗಿ, ಕರ್ತಾ, ಭೋಕ್ತಾ – ಎಂದು ತನ್ನಲ್ಲಿಲ್ಲದ ಧರ್ಮಗಳನ್ನು ತನ್ನಲ್ಲಿ ಆರೋಪಿಸಿಕೊಂಡಿದ್ದಾನೆ. ವಸ್ತುತಃ ಪ್ರತ್ಯಗಾತ್ಮನಾದ ತನ್ನಲ್ಲಿ ಈ ಯಾವ ಗುಣಗಳೂ ಇಲ್ಲ. ದೇಹೇಂದ್ರಿಯಾದಿಗಳಿಗಿಂತ ಭಿನ್ನನಾದವನು ನಾನು, ನಿತ್ಯ ಶುದ್ಧಬುದ್ಧನಾದ ಆತ್ಮನೇ ನಾನು ಎಂದು ತನ್ನ ಸತ್ಯಸ್ವರೂಪವನ್ನು ಅರಿತುಕೊಳ್ಳುವುದೇ **ಆತ್ಮಜ್ಞಾನ**. ಅದೇ ಬ್ರಹ್ಮಜ್ಞಾನ. ಗುರು ಶಾಸ್ತ್ರಾದಿಗಳಿಂದ ಈ ಜ್ಞಾನವು ಉದಿಸಿದಾಗ ಮೋಕ್ಷವಾಯಿತೆಂದೇ ತಿಳಿಯಬೇಕು. **ಸ್ವಸ್ವರೂಪದಲ್ಲಿ ನಿಲ್ಲುವುದೇ ಮೋಕ್ಷ. "ಬ್ರಹ್ಮವಿದ್ ಬ್ರಹ್ಮೈವ ಭವತಿ"** ಮೋಕ್ಷವೆಂದರೆ ಯಾವ ಲೋಕಕ್ಕೆ ಹೋಗುವುದೂ ಅಲ್ಲ. ಸರ್ವವ್ಯಾಪಕನೂ ಸರ್ವ ಸ್ವರೂಪನೂ ಆದ ಆತ್ಮನು ಹೋಗುವುದಾದರೂ ಎಲ್ಲಿಗೆ? ನೀರು ತುಂಬಿದ ಗಡಿಗೆಯನ್ನು ಸಮುದ್ರದಲ್ಲಿ ಒಡೆದಾಗ ನೀರು ಸಮುದ್ರಜಲದಲ್ಲಿ ಕೂಡಿಹೋಗುವಂತೆ, ಜೀವಾತ್ಮನು ಪರಮಾತ್ಮನಲ್ಲಿ ಒಂದಾಗುವುದೇ ಮೋಕ್ಷ. ಈ ದೃಷ್ಟಾಂತ ಪೂರ್ಣರೀತಿಯದಲ್ಲ. ಸಂಸಾರಿಯೆನಿಸಿರುವುದು ಅವಿದ್ಯೆಯಿಂದಲೇ. ಆ ಸ್ಥಿತಿಯಲ್ಲಿಯೂ ಅವನು ಪರಮಾತ್ಮನೇ ಆಗಿರುವುದರಿಂದ ಹೊಸದಾಗಿ

ಆಗಬೇಕಾದ್ದೇನೂ ಇಲ್ಲ. **"ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ, ಬ್ರಹ್ಮವಿದ್ ಬ್ರಹ್ಮೈವ ಭವತಿ"** ಸ್ವಸ್ವರೂಪಾವಸ್ಥಾನವೇ ಮೋಕ್ಷ.

ಅದ್ವೈತದರ್ಶನವು ಜೀವನ್ಮುಕ್ತಿಯನ್ನು ಒಪ್ಪುತ್ತದೆ. ಮನುಷ್ಯನಿಗೆ ಸಮ್ಯಗ್ ಜ್ಞಾನ ಉಂಟಾಗಿ **'ಅಹಂ ಬ್ರಹ್ಮಾಸ್ಮಿ'** ಎಂಬ ಜ್ಞಾನವು ದೃಢವಾಗಿ ನಿಂತರೆ, ಅವನು ಮುಕ್ತನೇ ಸರಿ. **ಅತ್ರ ಬ್ರಹ್ಮ ಸಮಶ್ನುತೇ** = ಈ ದೇಹದಲ್ಲಿರುವಾಗಲೇ ಬ್ರಹ್ಮವನ್ನು ಪಡೆಯುತ್ತಾನೆ ಎಂದು ಶ್ರುತಿಯು ಸಾರುತ್ತದೆ. **'ತಮೇವಂ ವಿದ್ವಾನಮೃತ ಇಹ ಭವತಿ'** ಇತ್ಯಾದಿ ಪ್ರಮಾಣಗಳನ್ನು ಗಮನಿಸಬೇಕು. ಜೀವನ್ಮುಕ್ತನು ಜ್ಞಾನಿಯಾಗಿದ್ದರೂ ಪ್ರಾರಬ್ಧಕರ್ಮವು ಸವೆಯುವವರೆಗೂ ದೇಹವು ಉಳಿದಿರುತ್ತದೆ. ಆತನಿಗೆ ಅವಿದ್ಯಾಲೇಶವು ಇರುತ್ತದೆಯೆಂದೂ ಇರುವುದಿಲ್ಲವೆಂದೂ ಭಿನ್ನಾಭಿಪ್ರಾಯಗಳಿವೆ. ಲೋಕಸಂಗ್ರಹಕ್ಕಾಗಿ ಜೀವನ್ಮುಕ್ತನು ವ್ಯವಹಾರದಲ್ಲಿಯೂ ತೊಡಗಬಹುದು. ದೇಹಪಾತವಾದ ಮೇಲೆ ವಿದೇಹಮುಕ್ತಿಯೆಂದು ವ್ಯವಹಾರವಿದೆ. ಮುಕ್ತನಾದವನಿಗೆ ಪುನರ್ಜನ್ಮವಿಲ್ಲ.

## ಸಾಧನಗಳು

**'ಯೋ ವೇದ ನಿಹಿತಂ ಗುಹಾಯಾಂ, ವಿದಿತ್ವಾ ಅಮೃತತ್ವಮೇತಿ'** ಇತ್ಯಾದಿ ವಾಕ್ಯಗಳಿಂದ ಜ್ಞಾನವೇ ಮುಕ್ತಿಗೆ ಕಾರಣವೆಂದು ನಿಶ್ಚಿತವಾಗಿರುತ್ತದೆ. ಈ ಆತ್ಮಜ್ಞಾನವನ್ನು ಪಡೆಯುವುದು ಹೇಗೆ? ಈ ಪ್ರಶ್ನೆಯು ಮುಮುಕ್ಷುವಿಗೆ ಎದುರಾಗುತ್ತದೆ. ಈ ಪ್ರಶ್ನೆಯನ್ನು ಬಗೆಹರಿಸಿ ಜ್ಞಾನಕ್ಕೆ ಬೇಕಾದ ಸಾಧನ ಸಂಪತ್ತುಗಳನ್ನು ಹೇಳಿರುವುದು ವೇದಾಂತ ದರ್ಶನದ ಹೆಚ್ಚುಗಾರಿಕೆ. ಸಾಂಖ್ಯಾದಿ ದರ್ಶನಗಳು ಈ ಸಾಧನಸಂಪತ್ತನ್ನು ಸರಿಯಾಗಿ ವಿವರಿಸಿಲ್ಲ.

ಉಪನಿಷತ್ತುಗಳಲ್ಲಿಯೇ ಈ ಸಾಧನಗಳ ನಿರೂಪಣೆ ಇದೆ. ಭಗವದ್ಗೀತೆಯು ಅವನ್ನೇ ವ್ಯವಸ್ಥಿತವಾಗಿ ವಿಸ್ತರಿಸಿ ಹೇಳಿದೆ. ಧರ್ಮಶಾಸ್ತ್ರದಲ್ಲಿ ಇರತಕ್ಕವೇ ಇವು. ಉದ್ದೇಶ ಸಂಕಲ್ಪಗಳು ಬೇರೆಯಾಗಬಹುದು. ಕುಡಿಯುವ ನೀರಿನಲ್ಲಿ ಕೊಳೆ ಸೇರಿದರೆ ಆರೋಗ್ಯವು ಕೆಟ್ಟು ರೋಗ ಬರುತ್ತದೆ. ಮತ್ತೆ ಆರೋಗ್ಯವು ಲಭಿಸಬೇಕಾದರೆ ಕುಡಿಯುವ ನೀರು ಶುದ್ಧವಾಗಬೇಕು. ಹಾಗೆಯೇ ನಮ್ಮ ಚಿತ್ತದಲ್ಲಿ ನಾನಾ ಜನ್ಮದ ಸಂಸ್ಕಾರಗಳೆಂಬ ಕೊಳೆಯು ಸೇರಿ ಕಾಮಕ್ರೋಧಾದಿಗಳು

ಉಲ್ಬಣಿಸಿ ಅಜ್ಞಾನವೆಂಬ ರೋಗವನ್ನು ತಂದೊಡ್ಡಿ ಸಂಸಾರ ದುಃಖಕ್ಕೆ ಕಾರಣವಾಗಿದೆ. ಮೂಲಕಾರಣವಾದ ಕೊಳೆಯು ತೊಲಗಿ ಚಿತ್ತವು ಮೊದಲು ಶುದ್ಧವಾಗಬೇಕು. ಚಿತ್ತಶುದ್ಧಿಯಾಗದೆ ಜ್ಞಾನವು ಲಭಿಸದು. ಆತ್ಮ ಸಾಕ್ಷಾತ್ಕಾರವಾಗದು.

**ಕರ್ಮ, ಭಕ್ತಿ** ಇವೆರಡು ಚಿತ್ತಶುದ್ಧಿಗೆ ಆವಶ್ಯಕವಾದವು. ನಾವು ಮಾಡುವ ಶಾಸ್ತ್ರೀಯ ಕರ್ಮವಾಗಲಿ ಲೌಕಿಕಕರ್ಮವೇ ಆಗಲಿ ಸ್ವಾರ್ಥಾಭಿಲಾಷೆಯಿಂದ ನಡೆಯಕೂಡದು. ಎಲ್ಲವೂ ಭಗವಂತನ ಆಜ್ಞೆ, ಆತನು ಸುಪ್ರೀತನಾಗಲೆಂದು ಈ ಕಾರ್ಯವನ್ನು ಮಾಡುತ್ತೇನೆ, ದೇವರು ಸುಪ್ರೀತನಾಗಲಿ – ಎಂಬ ಬುದ್ಧಿಯಿಂದ ಮಾಡುವ ಕರ್ಮವು ನಿಷ್ಕಾಮಕರ್ಮವೆನಿಸುತ್ತದೆ. ಇದನ್ನು ಆಚರಿಸತಕ್ಕವನು ಕರ್ಮಯೋಗಿ. ಸ್ವಾರ್ಥಲೇಶವೂ ಇಲ್ಲದಿರುವುದರಿಂದ ನಿಷ್ಕಾಮ ಕರ್ಮಯೋಗ ದಲ್ಲಿ ದುಷ್ಕಾರ್ಯವು ನಡೆಯುವುದೇ ಇಲ್ಲ. ಈ ಕರ್ಮಯೋಗವು ಚಿತ್ತಶುದ್ಧಿಗೆ ಅತ್ಯಂತ ಆವಶ್ಯಕ.

ಈಶ್ವರ ಪ್ರೀತ್ಯರ್ಥವಾಗಿ ಕರ್ಮವನ್ನು ಮಾಡತಕ್ಕವನಿಗೆ ಈಶ್ವರನಲ್ಲಿ ಸಹಜವಾಗಿ ಭಕ್ತಿಯು ಮೂಡಿರಲೇಬೇಕು. ಉಪಾಸನೆಯು ಧ್ಯಾನರೂಪವಾದದ್ದು. ಏಕಾಗ್ರತೆಯಿಂದ ಮಾಡುವ ಪರಮಾತ್ಮಧ್ಯಾನವೇ **ಉಪಾಸನೆ**. ಭಕ್ತಿಪೂರ್ವಕವಾಗಿ ಕರ್ಮಯೋಗದಲ್ಲಿ ನಿರತರಾದವರಿಗೆ ಶಮ, ದಮ, ಉಪರತಿ ಮುಂತಾದ ಸಾಧನಸಂಪತ್ತುಗಳು ಈಶ್ವರಾನುಗ್ರಹದಿಂದ ದೊರಕುತ್ತವೆ. ಕರ್ಮ, ಭಕ್ತಿ ಇವೆರಡೂ ಚಿತ್ತಶುದ್ಧಿಯ ಸಾಧನಗಳು.

**'ಚಿತ್ತಸ್ಯ ಶುದ್ಧಯೇ ಕರ್ಮ ನ ತು ವಸ್ತೂಪಲಬ್ಧಯೇ'** ಎಂಬ ವಚನದಂತೆ ಕರ್ಮವು ಚಿತ್ತಶುದ್ಧಿಗೆ ಕಾರಣ. ಆತ್ಮಸಾಕ್ಷಾತ್ಕಾರಕ್ಕೆ ಅಲ್ಲ. **'ಭಕ್ತ್ಯಾ ಮಾಮಭಿಜಾನಾತಿ'** ಎಂಬ ಗೀತಾವಚನದಂತೆ ಭಕ್ತಿಯೂ ಆತ್ಮಜ್ಞಾನಕ್ಕೆ ಕಾರಣ. ಅನಂತರ ಮೋಕ್ಷವು ಸ್ವತಃ ಸಿದ್ಧ.

## ಅದ್ವೈತದರ್ಶನದ ಶ್ರೇಷ್ಠತೆ

ಅದ್ವೈತಸಿದ್ಧಾಂತವನ್ನು ಸರಿಯಾಗಿ ತಿಳಿದುಕೊಳ್ಳುವುದಕ್ಕೂ ಅದರಲ್ಲಿ ಪೂರ್ಣ ವಿಶ್ವಾಸವು ಮೂಡುವುದಕ್ಕೂ ಒಂದು ವಿಶಿಷ್ಟವಾದ ಅರ್ಹತೆ ಬೇಕು. ಎಲ್ಲರಿಗೂ

ಇದು ಸುಲಭವಾಗಿ ಅರ್ಥವಾಗತಕ್ಕದ್ದಲ್ಲ. ಆದ್ದರಿಂದಲೇ ಅವಧೂತ ಗೀತೆಯಲ್ಲಿ **'ಈಶ್ವರಾನುಗ್ರಹಾದೇವ ಪುಂಸಾಮದ್ವೈತವಾಸನಾ'** ಎಂದು ಹೇಳಿದೆ.

ಈ ಅದ್ವೈತ ವಾದವು ಅತ್ಯಂತ ಪ್ರಾಚೀನವಾದ ವೈದಿಕ ಸಿದ್ಧಾಂತ. ಆಧ್ಯಾತ್ಮಿಕ ಜಗತ್ತಿಗೆ ವೈದಿಕ ಮಹರ್ಷಿಗಳಿಂದ ಬಂದ ಅವಿಚ್ಛಿನ್ನವಾದ ಒಂದು ಕಾಣಿಕೆ ಇದು. ಕರ್ಮಕಾಂಡ ಪ್ರಧಾನವಾದ ಸಂಹಿತೆಗಳಲ್ಲಿ ಸಹ ಅದ್ವೈತಸ್ರೋತವು ಹರಿದಿರುವುದನ್ನು ಕಾಣಬಹುದು. ಶ್ರೀಶಂಕರಾಚಾರ್ಯರು ಅದ್ವೈತಸಿದ್ಧಾಂತವನ್ನು ಹೊಸದಾಗಿ ಸ್ಥಾಪಿಸಲಿಲ್ಲ. ಪರಂಪರೆಯಿಂದ ಬಂದ ಸನಾತನವಾದ ಈ ಸಿದ್ಧಾಂತವು ವಿವಿಧನಿಮಿತ್ತಗಳಿಂದ ಮಲಿನವಾದಾಗ, ಆಚಾರ್ಯರು ತಮ್ಮ ಅಸಾಧಾರಣವಾದ ಮೇಧಾಶಕ್ತಿಯಿಂದ ಮೇಲೆತ್ತಿ ಕೊಳೆಯೆಲ್ಲವನ್ನೂ ತೊಡೆದು ಹಾಕಿ ಜಗಜಗಿಸುವ ರತ್ನವನ್ನಾಗಿ ಮಾಡಿದರು. ನಾನಾತ್ಮಕವಾದ ಜಗತ್ತಿನ ಬುಡದಲ್ಲಿರುವುದು ಏಕತ್ವವೆಂಬುದನ್ನು ಸುಪ್ರತಿಷ್ಠಿತವನ್ನಾಗಿ ನಿಲ್ಲಿಸಿದರು. ಆಚಾರ್ಯರು ಸಾಂಖ್ಯಾದಿದರ್ಶನಾಂತರಗಳನ್ನು ಖಂಡಿಸಿದ್ದು ಮಾತ್ರವಲ್ಲ. ಪ್ರಾಚೀನವಾದ ಬ್ರಹ್ಮಾದ್ವೈತವಾದದಲ್ಲಿದ್ದ ಜ್ಞಾನಕರ್ಮಸಮುಚ್ಚಯವಾದ ಮೊದಲಾದವನ್ನೂ ದೂಷಿಸಿ ಶುದ್ಧವಾದ ಅದ್ವೈತ ಪ್ರಕ್ರಿಯೆಯನ್ನು ತೋರಿಸಿಕೊಟ್ಟಿದ್ದಾರೆ. ಗುರು-ಶಿಷ್ಯ ಸಂಪ್ರದಾಯದಿಂದ ಬಂದುದನ್ನೇ ತಮ್ಮ ಗ್ರಂಥಗಳಲ್ಲಿ ಸ್ಪಷ್ಟೀಕರಿಸಿದ್ದಾರೆ. ಆಚಾರ್ಯರ ಗುರುಪರಂಪರೆ ಹೀಗಿದೆ-

**ನಾರಾಯಣಂ ಪದ್ಮಭುವಂ ವಸಿಷ್ಠಂ ಶಕ್ತಿಂ ಚ ತತ್ಪುತ್ರಪರಾಶರಂ ಚ**
**ವ್ಯಾಸಂ ಶುಕಂ ಗೌಡಪದಂ ಮಹಾಂತಂ ಗೋವಿಂದಯೋಗೀಂದ್ರಮಥಾಸ್ಯ ಶಿಷ್ಯಮ್ ।**
**ಶ್ರೀ ಶಂಕರಾಚಾರ್ಯಮಥಾಸ್ಯ ಪದ್ಮಪಾದಂಚ ಹಸ್ತಾಮಲಕಂ ಚ ಶಿಷ್ಯಮ್**
**ತಂ ತೋಟಕಂ ವಾರ್ತಿಕಕಾರಮನ್ಯಾನ್ ಅಸ್ಮದ್‌ಗುರೂನ್ ಸಂತತಮಾನತೋಽಸ್ಮಿ ॥**

ಇಲ್ಲಿ ವಾರ್ತಿಕಕಾರರೆಂದರೆ ಶ್ರೀಸುರೇಶ್ವರಾಚಾರ್ಯರು.

## ಭಗವತ್ಪಾದರ ಕೆಲವು ಸೂಕ್ತಿಗಳು

ಶ್ರೀಶಂಕರಭಗವತ್ಪಾದರು ಬೇರೆ ಬೇರೆ ಗ್ರಂಥಗಳಲ್ಲಿ ನುಡಿದಿರುವ ಕೆಲವು ವಚನಗಳನ್ನು ಆರಿಸಿ ಅರ್ಥವಿವರಣೆಯೊಂದಿಗೆ ಕೆಳಗೆ ಬರೆಯಲಾಗಿದೆ. ಇವುಗಳ ಪರಾಮರ್ಶದಿಂದ ಹಿಂದೆ ಸಂಕ್ಷೇಪವಾಗಿ ತಿಳಿಸಿದ ಅದ್ವೈತ ಸಿದ್ಧಾಂತವನ್ನು

ಮನನ ಮಾಡಿದಂತಾಗುವುದಲ್ಲದೆ, ಅದ್ವೈತಕ್ಕೆ ಸಂಬಂಧಿಸಿದ ಅನೇಕ ಹೊಸ ವಿಷಯಗಳನ್ನೂ ತಿಳಿದುಕೊಂಡಂತಾಗುವುದು. ಆಚಾರ್ಯರ ಭಾಷಾಶೈಲಿಯ ಸೌಂದರ್ಯವನ್ನು ಆಸ್ವಾದಿಸಬಹುದು. ಈ ಸೂಕ್ತಿಗಳು ಕಂಠಪಾಠಮಾಡಲು ಯೋಗ್ಯವಾದವುಗಳು.

**೧. ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿಃ ॥**

– (ಅಧ್ಯಾಸಭಾಷ್ಯ)

ಅದಲ್ಲದ್ದರಲ್ಲಿ ಅದು ಎಂಬ ಬುದ್ಧಿಗೆ **ಅಧ್ಯಾಸ**ವೆಂದು ಹೆಸರು. ಹಗ್ಗವನ್ನು ನೋಡಿ ಹಾವು ಎಂದು ತಿಳಿಯುವುದನ್ನು ಭ್ರಮೆಯೆಂದು ಲೋಕದಲ್ಲಿ ನಾವು ಹೇಳುತ್ತೇವೆ. ಅಧ್ಯಾಸವೆಂದರೆ ಭ್ರಮೆಯೇ. ಮುಖ್ಯವಾಗಿ ವೇದಾಂತಿಗಳು ಆತ್ಮಾನಾತ್ಮಗಳ ವಿಷಯದಲ್ಲಿ ಬಳಸುವಾಗ ಅಧ್ಯಾಸ ಶಬ್ದವನ್ನೇ ಉಪಯೋಗಿಸುತ್ತಾರೆ. ನಿತ್ಯಶುದ್ಧವೂ ಚೈತನ್ಯರೂಪವೂ ಆದ ಬ್ರಹ್ಮದಲ್ಲಿ ಮಲಿನವಾದ ಈ ಜಡ ಪ್ರಪಂಚವಿದೆಯೆಂದು ತಿಳಿಯುವುದು ಅಧ್ಯಾಸ. ಪ್ರತ್ಯಗಾತ್ಮನಾದ ತಾನು ದೇಹವೆಂದೂ, ಬೆಳ್ಳಗಿದ್ದೇನೆ, ಕಪ್ಪಾಗಿದ್ದೇನೆ ಎಂದು ತಿಳಿಯುವುದೂ ಅಧ್ಯಾಸ. ನಾನು ಹುಟ್ಟುತ್ತೇನೆ, ಸಾಯುತ್ತೇನೆ – ಎಂದು ಭ್ರಮಿಸುವುದೂ ಅಧ್ಯಾಸವೇ.

**೨. ತಮೇತಮೇವಂ ಲಕ್ಷಣಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ ।**

– (ಅಧ್ಯಾಸಭಾಷ್ಯ)

ಈ ಪ್ರಕಾರವಾದ ಅಧ್ಯಾಸವನ್ನು ಪಂಡಿತರು ಅವಿದ್ಯೆಯೆಂದು ತಿಳಿದಿದ್ದಾರೆ. ಅಧ್ಯಾಸವೇ ಅವಿದ್ಯೆಯಾದರೂ ಈ ಅವಿದ್ಯಾ ಶಬ್ದವನ್ನು ಹೆಚ್ಚು ವ್ಯಾಪಕವಾದ ಅರ್ಥದಲ್ಲಿ ಬಳಸುತ್ತಾರೆ. ತಮೋಗುಣದಿಂದ ಆಗುವ ಅಜ್ಞಾನ, ಸಂಶಯ, ತಪ್ಪು ತಿಳಿವಳಿಕೆ – ಇದೆಲ್ಲವೂ ಅವಿದ್ಯೆಯೇ. ಸರ್ವವೂ ಆತ್ಮವಾಗಿದ್ದರೂ ಅನಾತ್ಮವಾದ ಘಟಪಟಾದಿಗಳಿವೆ ಎಂಬ **ದ್ವೈತಜ್ಞಾನವೇ ಅವಿದ್ಯೆ. 'ತಾಮಸಪ್ರತ್ಯಯ'** ಎಂದೂ ಆಚಾರ್ಯರೂ ಹೇಳಿದ್ದಾರೆ.

**೩. ತಾಮಸೋ ಹಿ ಪ್ರತ್ಯಯಃ ಆವರಣಾತ್ಮಕತ್ವಾತ್ ಅವಿದ್ಯಾ, ವಿಪರೀತ –ಗ್ರಾಹಕಃ ಸಂಶಯೋಪಸ್ಥಾಪಕೋ ವಾ ಅಗ್ರಹಣಾತ್ಮಕೋ ವಾ ।**

– (ಗೀತಾ ಭಾ.೧೩–೨)

ತಮೋಗುಣದಿಂದ ಬರುವ ತಪ್ಪು ತಿಳಿವಳಿಕೆ ಅವಿದ್ಯೆ. ಇದು ಸತ್ಯವನ್ನು ಮುಚ್ಚಿಬಿಡುತ್ತದೆ. ಅದನ್ನು ಇನ್ನೊಂದನ್ನಾಗಿ ತಿಳಿಯುವುದು, ಸಂಶಯಕ್ಕೆ ಕಾರಣವಾಗುವುದು, ಅಥವಾ ವಸ್ತುವಿನ ಅಜ್ಞಾನ– ಇದೆಲ್ಲವೂ ಅವಿದ್ಯೆಗೆ ಸೇರಿದ್ದು.

**೪. ಸರ್ವಜ್ಞಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯ-ತ್ವಾಭ್ಯಾಮ್ ಅನಿರ್ವಚನೀಯೇ ಸಂಸಾರಪ್ರಪಂಚಬೀಜಭೂತೇ ಸರ್ವಜ್ಞಸ್ಯ ಈಶ್ವರಸ್ಯ ಮಾಯಾ ಶಕ್ತಿಃ ಪ್ರಕೃತಿರಿತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ ॥**

– (ಸೂ.ಭಾ. ೨–೧–೧೪)

ಸರ್ವಜ್ಞನಾದ ಈಶ್ವರನ ಸ್ವರೂಪದಲ್ಲಿ ಸೇರಿವೆಯೋ ಎಂಬಂತೆ ಅವಿದ್ಯೆಯಿಂದ ತೋರುತ್ತಿರುವ ನಾಮರೂಪಗಳು ಸರ್ವಜ್ಞನಾದ ಈಶ್ವರನ ಮಾಯೆಯೆಂದೂ ಶಕ್ತಿಯೆಂದೂ ಪ್ರಕೃತಿಯೆಂದೂ ಶ್ರುತಿಸ್ಮೃತಿಗಳಲ್ಲಿ ಉಕ್ತವಾಗಿವೆ. ಈ ನಾಮರೂಪಗಳು ಜಡವಸ್ತುಗಳಾದ್ದರಿಂದ ಈಶ್ವರನ ನಿಜಸ್ವರೂಪದಲ್ಲಿ ಸೇರಿಸಲಾಗುವುದಿಲ್ಲ. ಈಶ್ವರನನ್ನು ಬಿಟ್ಟು ಅನ್ಯತ್ರ ತೋರುವುದೂ ಇಲ್ಲ, ಇರುವುದಿಲ್ಲವಾದ್ದರಿಂದ ಈ ನಾಮರೂಪಗಳು ಈಶ್ವರನಿಗಿಂತ ಬೇರೆ ಎನ್ನಲಾಗುವುದಿಲ್ಲ. ಆದ್ದರಿಂದ ಇವು ಅನಿರ್ವಚನೀಯಗಳು. ಅವ್ಯಾಕೃತವಾದ ಈ ನಾಮರೂಪಗಳು ವ್ಯಾಕೃತವಾದ ಈ ಸಂಸಾರಪ್ರಪಂಚಕ್ಕೆ ಮೂಲ ಕಾರಣಗಳಾಗಿವೆ.

ಇದಿಷ್ಟು ಮೇಲ್ಕಂಡ ಸೂಕ್ತಿಯ ಅರ್ಥವಿವರಣೆ. ಇಲ್ಲಿ ಅವ್ಯಾಕೃತ ನಾಮ ರೂಪಗಳನ್ನು ಮಾಯಾ, ಶಕ್ತಿ, ಪ್ರಕೃತಿ ಎಂದು ಕರೆದಿದ್ದಾರೆ. ನಾಮರೂಪಗಳ ಸ್ಥೂಲರೂಪವೇ ಜಗತ್ತು. ಈಶ್ವರನ ಮಾಯೆಯು ತ್ರಿಗುಣಾತ್ಮಕವಾದ್ದು. ಈ ಮಾಯೆಗೆ ಸ್ಥೂಲವಾದ ನಾಮರೂಪಗಳನ್ನು ಸೃಜಿಸುವ ಶಕ್ತಿ ಇರುವುದರಿಂದ, ಸೂಕ್ಷ್ಮನಾಮ ರೂಪಗಳೇ ಮಾಯೆಯೆಂದು ಇಲ್ಲಿ ವರ್ಣಿಸಿದೆ. ಈ ಮಾಯಾಶಕ್ತಿಯು ಈಶ್ವರನಿಗೆ ಅಧೀನವಾದದ್ದು. ಗೀತಾಭಾಷ್ಯದ ಆರಂಭದಲ್ಲಿ ಆಚಾರ್ಯರು '**ಸ ಚ ಭಗವಾನ್ ..... ತ್ರಿಗುಣಾತ್ಮಿಕಾಂ ವೈಷ್ಣವೀಂ ಸ್ವಾಂ ಮಾಯಾಂ ಮೂಲಪ್ರಕೃತಿಂ ವಶೀಕೃತ್ಯ........ ಸ್ವಮಾಯಯಾ ದೇಹವಾನಿವ ಜಾತ ಇವ ಚ ಲೋಕಾನುಗ್ರಹಂ ಕುರ್ವನ್ ಲಕ್ಷ್ಯತೇ**' ಎಂದು ಬರೆದಿದ್ದಾರೆ. ಅಲ್ಲದೆ '**ಅವಿದ್ಯಾತ್ಮಿಕಾ ಹಿ ಬೀಜಶಕ್ತಿಃ ಅವ್ಯಕ್ತಶಬ್ದನಿರ್ದೇಶ್ಯಾ ಪರಮೇಶ್ವರಾಶ್ರಯಾ ಮಾಯಾಮಯೀ**

**ಮಹಾಸುಪ್ತಿಃ'** (ಸೂ.ಭಾ.೧-೪-೩) ಎಂದೂ ತಿಳಿಸಿದ್ದಾರೆ. ಮೂಲಪ್ರಕೃತಿಯೆಂದರೆ ಸಾಂಖ್ಯರು ಹೇಳುವ ಸ್ವತಂತ್ರವಾದ ಮೂಲಪ್ರಕೃತಿಯಲ್ಲ. ವೇದಾಂತದಲ್ಲಿ ಈಶ್ವರಾಧೀನವಾದ ಮಾಯೆಯನ್ನು ಪ್ರಕೃತಿಯೆಂದು ವ್ಯವಹರಿಸುತ್ತಾರೆ.

**'ಮಾಯಾಂ ತು ಪ್ರಕೃತಿಂ ವಿದ್ಯಾತ್ ಮಾಯಿನಂ ತು ಮಹೇಶ್ವರಮ್'** ಎಂದು (ಶ್ವೇ.ಉ. ೪-೧೦) ಶ್ರುತಿಯಲ್ಲಿಯೇ ಇದೆ

ಹೀಗೆ ಸೂಕ್ಷ್ಮವಾಗಿ ಅಧ್ಯಾಸ, ಅವಿದ್ಯೆ, ಮಾಯಾ-ಇವುಗಳಲ್ಲಿ ಅರ್ಥ ಭೇದವಿದ್ದರೂ ಎಲ್ಲವೂ ಅನ್ಯಥಾಜ್ಞಾನ, ಮಿಥ್ಯಾಜ್ಞಾನ, ಭ್ರಮೆ- ಇವುಗಳ ತೆಕ್ಕೆಯಲ್ಲಿ ಸೇರಿಹೋಗುತ್ತವೆ. ಆದ್ದರಿಂದ ವೇದಾಂತದಲ್ಲಿ ಇವುಗಳನ್ನು ಭೇದವಿಲ್ಲದೆ ಬಳಸುವುದುಂಟು. ಸಾಮಾನ್ಯವಾಗಿ ಈಶ್ವರನಿಗೆ ಸಂಬಂಧಿಸಿದಾಗ ಮಾಯೆ ಯೆಂದೂ ಜೀವನಿಗೆ ಸಂಬಂಧಿಸಿದಾಗ ಅವಿದ್ಯೆಯೆಂದೂ ಹೇಳುವುದು ಪ್ರಸಿದ್ಧವಾದದ್ದು. ಸಮುದ್ರ, ಮೋಡ, ನದಿ, ಕೆರೆ, ಬಾವಿ ಇವುಗಳಲ್ಲಿರುವುದು ಜಲವೇ. ಒಂದು ಪ್ರಕಾರದಲ್ಲಿ ಭೇದ, ಇನ್ನೊಂದು ಪ್ರಕಾರದಲ್ಲಿ ಅಭೇದ. ಇವುಗಳಿಗೆ ಕಾರ್ಯಕಾರಣ ಭಾವವೂ ಇದೆ. ಸಮುದ್ರದಿಂದ ಮೋಡ, ಮೋಡದಿಂದ ನದಿ ಇತ್ಯಾದಿ. ಎಲ್ಲ ಬಗೆಯ ಭ್ರಮೆಗಳಿಗೂ ಈಶ್ವರನ ಮಾಯಾಶಕ್ತಿಯೇ ಮೂಲವೆಂದು ತಿಳಿಯಬೇಕು. ಇದಿಷ್ಟು ಅದ್ವೈತವಾದದ ಮೂಲಾಧಾರ.

**೫. ದರ್ಶಯತಿ ಚ ಶ್ರುತಿಃ ಪರರೂಪಪ್ರತಿಷೇಧೇನೈವ ಬ್ರಹ್ಮ ನಿರ್ವಿಶೇಷತ್ವಾತ್ ।**

– (ಸೂ.ಭಾ.೩-೨-೧೭)

ವೇದಾಂತದಲ್ಲಿ ಪರಬ್ರಹ್ಮವನ್ನು ನಿರ್ವಿಶೇಷ, ನಿರ್ಗುಣ, ನಿರಾಕಾರ, ನಿರ್ವಿಕಲ್ಪಕ ಎಂದು ವರ್ಣಿಸಲಾಗಿದೆ. ಆದ್ದರಿಂದಲೇ ಶ್ರುತಿಯು ಬ್ರಹ್ಮವನ್ನು ಅನ್ಯರೂಪಪ್ರತಿಷೇಧದ ಮೂಲಕವೇ ತಿಳಿಸುತ್ತದೆ.

ಜಗತ್ತು ತ್ರಿಗುಣಾತ್ಮಕವಾದ್ದರಿಂದ ನಮಗೆ ಗೋಚರಿಸುವ ಸಮಸ್ತ ಪದಾರ್ಥಗಳೂ ಧರ್ಮ ಯುಕ್ತವಾಗಿಯೇ ತೋರುತ್ತವೆ. ಯಾವುದಾದರೊಂದು ಧರ್ಮಯುಕ್ತವಾಗಿಯೇ ತೋರುತ್ತವೆ. ಯಾವುದಾದರೊಂದು ಧರ್ಮವು ಪದಾರ್ಥದಲ್ಲಿರುತ್ತದೆ. ಅದನ್ನು ಜಾತಿ, ಗುಣ, ಕ್ರಿಯೆಯೆಂದು ಮೂರಾಗಿ ವಿಂಗಡಿಸಬಹುದು. **ಉದಾ:** ಮನುಷ್ಯ, ಮೃಗ, ವೃಕ್ಷ ಇವುಗಳಲ್ಲಿ ಮನುಷ್ಯತ್ವ

ಮೃಗತ್ವ, ವೃಕ್ಷತ್ವ ಎಂಬ ಜಾತಿಗಳು ಕ್ರಮವಾಗಿ ಇರುತ್ತವೆ. ಬಿಳಿಯದು, ಕಪ್ಪಾದದ್ದು ಮುಂತಾದವುಗಳಲ್ಲಿ ಶ್ವೇತತ್ವ, ಕೃಷ್ಣತ್ವ ಮುಂತಾದ ಗುಣಗಳಿವೆ. ಪಾಚಕ, ಲೇಖಕ ಮೊದಲಾದವರಲ್ಲಿ ಪಾಕ ಲೇಖನ – ಮುಂತಾದ ಕ್ರಿಯೆಗಳಿವೆ. ಆದ್ದರಿಂದ ಆಯಾ ಧರ್ಮಗಳ ಮೂಲಕ ಆ ಪದಾರ್ಥಗಳನ್ನು ಪರಿಚಯ ಮಾಡಿಸಿಕೊಡಬಹುದು. ಯಾವ ಧರ್ಮವೂ ಬ್ರಹ್ಮದಲ್ಲಿ ಇಲ್ಲವಾದ್ದರಿಂದ ಯಾವ ಶಬ್ದವೂ ಅದನ್ನು ಪರಿಚಯ ಮಾಡಿಸಿಕೊಡಲು ಸಮರ್ಥವಾಗಿಲ್ಲ. ಪ್ರತಿಯೊಂದು ಶಬ್ದವೂ ಜಾತಿ, ಗುಣ, ಕ್ರಿಯೆಗಳಲ್ಲಿ ಒಂದನ್ನು ಬೋಧಿಸುತ್ತದೆ. ಈ ಧರ್ಮಕ್ಕೆ ಪ್ರವೃತ್ತಿ ನಿಮಿತ್ತವೆಂದು ಹೆಸರು. ಇನ್ನು ಚೈತ್ರ, ಮೈತ್ರ – ಮೊದಲಾದ ಸಂಜ್ಞಾ ಶಬ್ದವು ಯಾವ ವ್ಯಕ್ತಿಗೂ ನಿಯತವಲ್ಲ. ಶ್ರುತಿಯ ಬ್ರಹ್ಮವನ್ನು ವರ್ಣಿಸುವ ಬಗೆ–

* **ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ** – (ಕೇ.ಉ. ೧–೪)

ಆ ಬ್ರಹ್ಮವು ವಿದಿತವೂ ಅಲ್ಲ, ಅವಿದಿತವೂ ಅಲ್ಲ.

** **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ** – (ತೈ.ಉ. ೨–೯)

ಮಾತುಗಳೂ ಮನಸ್ಸೂ ಯಾವುದನ್ನು ಎಟಕಲಾರದೆ ಹಿಂದಿರುಗುತ್ತವೆಯೋ ಅದು ಬ್ರಹ್ಮ.

*** **ಅಥಾತ ಆದೇಶೋ ನೇತಿ ನೇತೀತಿ** – (ಬೃಹ.ಉ. ೨–೩–೬)

ಇನ್ನು ಸತ್ಯಕ್ಕೆ ಸತ್ಯವಾದ ಪರಮಸತ್ಯವನ್ನು ನಿರ್ದೇಶಿಸಿ ಹೇಳಲಾಗುವುದು. ಇದಲ್ಲ ಇದಲ್ಲ – ಎಂದು ಹೇಳುವುದೇ ಅದು!

ನಿರ್ವಿಶೇಷವಾದ ಬ್ರಹ್ಮಸ್ವರೂಪವು ಶಬ್ದಕ್ಕೆ ಅಗೋಚರವಾದ್ದರಿಂದ ಅದನ್ನು ಹೇಗೆ ತಿಳಿಸಬೇಕು? ಯಾವ ಶಬ್ದದಿಂದ ಹೇಳಿದರೂ ಇದಲ್ಲ ಇದಲ್ಲ ಎಂದು ನಿಷೇಧಮುಖದಿಂದ ನುಡಿದು ಸುಮ್ಮನಾಗುವುದೇ ಮಾರ್ಗ. "**ವಿಜ್ಞಾನಮಾನಂದಂ ಬ್ರಹ್ಮ**", "**ವಿಜ್ಞಾನಘನ ಏವ**", "**ಬ್ರಹ್ಮ**", "**ಆತ್ಮಾ**" – ಎಂದೂ ನಿರ್ದೇಶಿಸುವುದು ಸಹ ನಾಮರೂಪಗುಣಕರ್ಮಗಳನ್ನು ಬ್ರಹ್ಮದಲ್ಲಿ ಆರೋಪಿಸಿಕೊಂಡು ಹೇಳಿದ್ದು. ಇದನ್ನು **ಅಧ್ಯಾರೋಪ** ಎನ್ನುತ್ತಾರೆ. ಇದು ಸಾಮಾನ್ಯವಾದ ಪರಿಚಯವನ್ನುಂಟು ಮಾಡುತ್ತದೆ. ಅನಂತರ ನೇತಿ, ನೇತಿ– ಎಂದು ನಾಮರೂಪಾದಿಗಳನ್ನು ನಿಷೇಧಿಸಿ ಕೈಬಿಡುತ್ತದೆ. ಈ ನಿಷೇಧಕ್ಕೆ **ಅಪವಾದ**ವೆಂದು ಹೆಸರು. ಬ್ರಹ್ಮವು

ಸ್ವಾನುಭವಗೋಚರವೆಂದು ಇದರ ತಾತ್ಪರ್ಯ. ಈ ಅಧ್ಯಾರೋಪಾಪವಾದ ಕ್ರಮವನ್ನೇ ಉಪನಿಷತ್ತು ಸರ್ವತ್ರ ಆಶ್ರಯಿಸಿ ಬೋಧಿಸುತ್ತದೆ ಎಂದು ತಿಳಿಯಬೇಕು.

೬. **ತಾರ್ಕಿಕೋ ಹಿ ಅನಾಗಮಜ್ಞಃ ಸ್ವಬುದ್ಧಿಪರಿಕಲ್ಪಿತಂ ಯತ್ಕಿಂಚಿದೇವ ಕಥಯತಿ** – ( ಕಠ ಭಾ.೧-೨-೯)

ತಾರ್ಕಿಕನು ವೇದವಿದನಲ್ಲ. ಅವನು ಸ್ವಬುದ್ಧಿಯಿಂದ ಕಲ್ಪಿತವಾದ ಏನೇನನ್ನೋ ಹೇಳಿಬಿಡುತ್ತಾನೆ. ಆದ್ದರಿಂದ ಶ್ರುತಿಯು "**ನೈಷಾ ತರ್ಕೇಣ ಮತಿರಾಪನೇಯಾ**" ಎಂದು ಸ್ಪಷ್ಟವಾಗಿ ನುಡಿದಿದೆ. ತಾರ್ಕಿಕರೆಂದರೆ ಸಾಂಖ್ಯ, ವೈಶೇಷಿಕ, ಬೌದ್ಧ ಮುಂತಾದ ಇತರ ದರ್ಶನಕಾರರು. ಅವರು ವೇದಾರ್ಥವನ್ನು ವಿಚಾರಮಾಡದೆ ಬುದ್ಧಿಶಕ್ತಿಯಿಂದ ತಮ್ಮ ಸಿದ್ಧಾಂತವನ್ನು ರೂಪಿಸಿಕೊಂಡಿದ್ದಾರೆ. ಅತಿಗಂಭೀರವಾದ ಬ್ರಹ್ಮವು ತರ್ಕಕ್ಕೆ ಎಂದಿಗೂ ನಿಲುಕತಕ್ಕದ್ದಲ್ಲ. ಆದ್ದರಿಂದ ಭರ್ತೃಹರಿಯು ವಾಕ್ಯಪದೀಯದ ಬ್ರಹ್ಮಕಾಂಡದಲ್ಲಿ ಹೇಳುತ್ತಾನೆ.

**ಯತ್ನೇನಾನುಮಿತೋಽಪ್ಯರ್ಥಃ ಕುಶಲೈರನುಮಾತೃಭಿಃ ।**
**ಅಭಿಯುಕ್ತತರೈರನ್ಯೈರನ್ಯಥೈವೋಪಪಾದ್ಯತೇ ॥**

ತರ್ಕಕುಶಲರಾದವರು ಪ್ರಯತ್ನಪೂರ್ವಕವಾಗಿ ಯಾವುದನ್ನು ಊಹಿಸಿ ನಿಶ್ಚಯಿಸುತ್ತಾರೋ ಅದನ್ನು ಅವರಿಗಿಂತ ಪ್ರಾಜ್ಞರಾದ ತಾರ್ಕಿಕರು ಖಂಡಿಸಿ, ಅದಕ್ಕೆ ವಿರುದ್ಧವಾಗಿ ಇನ್ನೊಂದನ್ನು ಸ್ಥಾಪಿಸಿಬಿಡುತ್ತಾರೆ.

ಪರಬ್ರಹ್ಮವಾದರೋ ಸಿದ್ಧವಾದ ವಸ್ತು, ಸಾಧ್ಯವಲ್ಲ. ಸಿದ್ಧವಾದ್ದನ್ನು ಬಲ್ಲವರು ಅದು ಹೇಗಿದೆಯೋ ಹಾಗೆ ತಿಳಿಸುತ್ತಾರೆ. ಆದ್ದರಿಂದ ಆರ್ಷವಾಣಿಯಾದ ವೇದವು ಮಾತ್ರ ಸತ್ಯವನ್ನು ತಿಳಿಸುತ್ತದೆ.

೭. **ನ ಚ ಪರಿನಿಷ್ಠಿತವಸ್ತುವಿಷಯತ್ವೇಽಪಿ ಪ್ರತ್ಯಕ್ಷಾದಿವಿಷಯತ್ವಂ ಬ್ರಹ್ಮಣಃ। 'ತತ್ತ್ವಮಸಿ' ಇತಿ ಬ್ರಹ್ಮಾತ್ಮಭಾವಸ್ಯ ಶಾಸ್ತ್ರಮಂತರೇಣ ಅನವಗಮ್ಯಮಾನತ್ವಾತ್ ।**
– (ಸೂ.ಭಾ. ೧-೧-೪)

ಬ್ರಹ್ಮವು ಸಿದ್ಧವಸ್ತುವೇ ಆದ ಮೇಲೆ ಅದನ್ನು ತಿಳಿಸಿಕೊಡಲು ವೇದವೇ ಏಕೆ

ಬೇಕು? ಪ್ರತ್ಯಕ್ಷದಿಂದಲೋ ಅನುಮಾನದಿಂದಲೋ ನಿಶ್ಚಯಿಸಬಹುದಲ್ಲ? ಉದಾಹರಣೆಗೆ ಸೂರ್ಯನು ಪ್ರತ್ಯಕ್ಷನಾಗಿದ್ದಾನೆ. ಆತನ ಗಾತ್ರ, ತೂಕ, ಭೂಮಿಗೆ ಎಷ್ಟು ದೂರದಲ್ಲಿದ್ದಾನೆ–ಎಂಬುದನ್ನು ವಿಜ್ಞಾನಿಗಳು ಪ್ರತ್ಯಕ್ಷಾದಿಪ್ರಮಾಣಗಳಿಂದ ನಿಶ್ಚಯಿಸಿ ಹೇಳಿದ್ದಾರೆ– ಎಂದರೆ, ಹಾಗಲ್ಲ. ಸೂರ್ಯನು ಪ್ರತ್ಯಕ್ಷನಾಗಿದ್ದಾನೆ. ಅನುಮಾನಾದಿ ಪ್ರಮಾಣಗಳನ್ನು ಆತನಲ್ಲಿ ಅನ್ವಯಿಸಲು ಸಾಧ್ಯ. ಬ್ರಹ್ಮವು ಸಿದ್ಧವಸ್ತುವಾದರೂ ಇಂದ್ರಿಯ ಗೋಚರವಲ್ಲ. ಅದರ ವಿಷಯದಲ್ಲಿ ಅನುಮಾನದ ಆಟವೇನೋ ಸಾಗದು. ಅಲ್ಲದೆ **'ತತ್ತ್ವಮಸಿ'** ಎಂದು ವೇದವು ತಿಳಿಸುತ್ತದೆ. ಇದರಿಂದ **'ಅಹಂ ಬ್ರಹ್ಮಾಸ್ಮಿ'** ನಾನು ಬ್ರಹ್ಮವೇ ಆಗಿದ್ದೇನೆ– ಎಂಬ ಅವಗತಿ ಉಂಟಾಗುತ್ತದೆ. ಜೀವನು ಬ್ರಹ್ಮವೇ ಹೌದು– ಎಂಬುದನ್ನು ವೇದವೇ ತಿಳಿಸಿಕೊಡಬೇಕಾಗಿದೆ. ಯುಕ್ತಿಗಳಿಂದ ಇದನ್ನು ಎಂದೆಂದಿಗೂ ನಿಶ್ಚಯಿಸಲು ಶಕ್ಯವಿಲ್ಲ.**'ನಾವೇದವಿನ್ಮನುತೇ ತಂ ಬೃಹಂತಮ್'** (ತೈಬ್ರಾ. ೩–೧೨–೯) ವೇದವನ್ನು ಅರಿಯದವನು ಆ ಪರಮಾತ್ಮನನ್ನು ಎಂದಿಗೂ ತಿಳಿಯಲಾರನೆಂದು ವೇದವೇ ಹೇಳಿದೆ.

**೮. ನ ಹಿ ಪ್ರತಿಬಂಧಕ್ಷಯಾದೇವ ವಿದ್ಯೋತ್ಪದ್ಯತೇ, ನತು ಈಶ್ವರಪ್ರಸಾದತಪೋ–ಧ್ಯಾನಾದ್ಯನುಷ್ಠಾನಾತ್ ಇತಿ ನಿಯಮೋಸ್ತಿ । ಬ್ರಹ್ಮಚರ್ಯಾದೀನಾಂ ಚ ವಿದ್ಯಾಂ ಪ್ರತ್ಯುಪ–ಕಾರಕತ್ವಾತ್, ಸಾಕ್ಷಾದೇವ ಕಾರಣತ್ವಾತ್ ಶ್ರವಣಮನನನಿದಿಧ್ಯಾಸನಾನಾಮ್।**

– (ತೈ.ಶಿಕ್ಷಾ ಭಾ. ಅನು ೧೧)

ವಿದ್ಯೋತ್ಪತ್ತಿಗಿರುವ ಪ್ರತಿಬಂಧಕಗಳು ಹೋದೊಡನೆ ವಿದ್ಯೆ ಹುಟ್ಟಿಬಿಡುತ್ತದೆ. ಈಶ್ವರಾನುಗ್ರಹ, ತಪಸ್ಸು, ಧ್ಯಾನಾದಿಗಳ ಅನುಷ್ಠಾನದಿಂದಲ್ಲ ಎಂಬ ನಿಯಮವೇನೂ ಇಲ್ಲವಷ್ಟೆ. ಬ್ರಹ್ಮಚರ್ಯ, ತಪಸ್ಸು ಮೊದಲಾದವು ವಿದ್ಯೋತ್ಪತ್ತಿಗೆ ಉಪಕಾರ ಮಾಡುತ್ತವೆ. ಶ್ರವಣ, ಮನನ, ನಿದಿಧ್ಯಾಸನಗಳು ವಿದ್ಯೆಗೆ ಸಾಕ್ಷಾತ್ ಕಾರಣಗಳು.

ವಿದ್ಯೆಯೆಂದರೆ ಬ್ರಹ್ಮಜ್ಞಾನ. ಶಾಸ್ತ್ರೋಕ್ತವಾದ ಕರ್ಮವನ್ನು ಆಚರಿಸುವುದರಿಂದ ಚಿತ್ತಶುದ್ಧಿಯಾಗುತ್ತದೆ. ಚಿತ್ತದ ಕೊಳೆಯೇ ಜ್ಞಾನೋತ್ಪತ್ತಿಗೆ ಪ್ರತಿಬಂಧಕ. ಈ ಪ್ರತಿಬಂಧಕವಾದ ಚಿತ್ತದ ಮಾಲಿನ್ಯವು ಕರ್ಮದಿಂದ ಹೋಗುವುದಾದರೆ, ಭಕ್ತಿಯಿಂದ ಈಶ್ವರಾನುಗ್ರಹವನ್ನು ಪಡೆಯಬಹುದು, ಶಮ ದಮಾದಿಗಳ

ಪರಿಪಾಲನೆ, ತಪಸ್ಸು ಮೊದಲಾದವು ಬೇಕಾಗಿಲ್ಲ– ಎಂಬ ಶಂಕೆ ಬರಬಹುದು. ಆ ಶಂಕೆ ಸರಿಯಲ್ಲ. ಕಣ್ಣಿನ ದೋಷ ಹೋದ ಮಾತ್ರದಿಂದ ಒಬ್ಬನು ವಿದ್ಯಾವಂತನಾಗಿ ಬಿಡುವುದಿಲ್ಲ. ಅವನು ಗ್ರಂಥವನ್ನು ಓದಬೇಕು, ಗುರುವಿನಿಂದ ಪಾಠ ಹೇಳಿಸಿಕೊಂಡು ಅಭ್ಯಾಸಮಾಡಬೇಕು. ಹಾಗೆಯೇ ಇಲ್ಲಿಯೂ ಈಶ್ವರಾನುಗ್ರಹ, ಧ್ಯಾನ, ಶ್ರವಣ, ಮನನಾದಿಗಳಿಂದ ಬ್ರಹ್ಮಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ.

**೬. ಬ್ರಾಹ್ಮಣತ್ವಸ್ಯ ಹಿ ರಕ್ಷಣೇನ ರಕ್ಷಿತಃಸ್ಯಾತ್ ವೈದಿಕೋ ಧರ್ಮಃ ।**
**ತದಧೀನತ್ವಾತ್ ವರ್ಣಾಶ್ರಮಭೇದಾನಾಮ್ ।** – (ಗೀತಾಭಾಷ್ಯ – ಪೀಠಿಕೆ)

ಬ್ರಾಹ್ಮಣತ್ವವನ್ನು ಕಾಪಾಡಿಕೊಂಡರೆ ವೈದಿಕಧರ್ಮದ ರಕ್ಷಣೆಯಾಗುತ್ತದೆ. ಏಕೆಂದರೆ, ವರ್ಣಾಶ್ರಮಭೇದಗಳು ಬ್ರಾಹ್ಮಣತ್ವಕ್ಕೆ ಅಧೀನವಾಗಿವೆ.

ಶ್ರೀಶಂಕರಭಗವತ್ಪಾದರ ಕಾಲದಲ್ಲಿ ವರ್ಣಾಶ್ರಮವ್ಯವಸ್ಥೆಯು ಭರತಖಂಡದಲ್ಲಿ ಭದ್ರವಾಗಿ ನೆಲೆಸಿತ್ತು. ಆದರೂ ಅವೈದಿಕಮತಗಳು ಹುಟ್ಟಿಕೊಂಡು ಅನೇಕ ಸ್ಥಳಗಳಲ್ಲಿ ಇದಕ್ಕೆ ಆಘಾತವನ್ನುಂಟುಮಾಡುತ್ತಿದ್ದವು. ವೈದಿಕಧರ್ಮದ ರಕ್ಷಣೆಗಾಗಿ ಪ್ರವೃತ್ತರಾದ ಆಚಾರ್ಯರು ವೇದಧರ್ಮದ ಪೋಷಣೆಗಾಗಿ ತಮ್ಮ ಗ್ರಂಥಗಳನ್ನು ರಚಿಸಿ, ಜನರನ್ನು ಉನ್ಮಾರ್ಗದಿಂದ ತಪ್ಪಿಸುವುದಕ್ಕಾಗಿ ಈ ರೀತಿ ಹಿತೋಪದೇಶವನ್ನು ಮಾಡುತ್ತ ಈ ಧರ್ಮದ ಶ್ರೇಷ್ಠತೆಯನ್ನು ಒತ್ತಿ ಹೇಳಿದ್ದಾರೆ. **'ಬ್ರಹ್ಮಕ್ಷತ್ರೇ ಪರಿಪಾಲಿತೇ ಜಗತ್ ಪರಿಪಾಲಯಿತುಮಲಮ್'** (ಗೀತಾ ಭಾ. ೪–೧) ಎಂದು ಇನ್ನೊಂದು ಕಡೆ ಹೇಳಿದ್ದಾರೆ. ಧರ್ಮಪುರಸ್ಕೃತವಾದ ಬುದ್ಧಿಬಲ, ಅದರಿಂದ ಪ್ರೇರಿತವಾದ ಬಾಹುಬಲ ಇವೆರಡು ಜಗತ್ತನ್ನೇ ಪಾಲಿಸಬಲ್ಲವು ಎಂದು ಈ ವಾಕ್ಯದ ತಾತ್ಪರ್ಯ. ಚಾತುರ್ವರ್ಣ್ಯದ ವ್ಯವಸ್ಥೆ ಇರುವುದು ಸಮಾಜದ ಹಿತಕ್ಕಾಗಿ, ರಾಷ್ಟ್ರದ ಹಿತಕ್ಕಾಗಿ. ವಿದ್ಯೆ, ಬಲ, ಧನ, ದೈಹಿಕಶ್ರಮ– ಇವನ್ನು ನಿಷ್ಠೆಯಿಂದ ಒಂದೊಂದು ಗುಂಪಿನವರು ತಪ್ಪದೆ ಪರಿಪಾಲಿಸಿಕೊಂಡಿರಲಿ, ಸಾಂಕರ್ಯವಾದರೆ ಈ ನಾಲ್ಕು ವಿಭಾಗಗಳೂ ದುರ್ಬಲವಾಗುತ್ತವೆ, ಅಧರ್ಮವು ತಲೆ ಎತ್ತುತ್ತದೆ ಎಂಬುದೇ ಚಾತುರ್ವರ್ಣ್ಯದ ಮೂಲೋದ್ದೇಶವಾಗಿದೆ. ಈ ವಿಭಾಗವು ಅತ್ಯಂತ ವೈಜ್ಞಾನಿಕವಾದದ್ದು. ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸಂನ್ಯಾಸ ಎಂಬ ಆಶ್ರಮಧರ್ಮಗಳು ಒಬ್ಬೊಬ್ಬ ವ್ಯಕ್ತಿಯನ್ನು ಅಭ್ಯುದಯ ಶ್ರೇಯಸ್ಸುಗಳಿಗಾಗಿ ಮುನ್ನಡೆಸುವ ಸಾಧನಗಳು. ಸಮಾಜದ ಹಿತಕ್ಕಾಗಿ

ವರ್ಣವ್ಯವಸ್ಥೆ, ವ್ಯಕ್ತಿಯ ಹಿತಕ್ಕಾಗಿ ಆಶ್ರಮವ್ಯವಸ್ಥೆ ಎಂದು ಗೊತ್ತು ಮಾಡಿದವರು ವೈದಿಕ ಋಷಿಗಳು. ಇದರ ಗುಟ್ಟನ್ನರಿಯದೆ, ಆಳವಾಗಿ ವಿಚಾರ ಮಾಡದೆ ಈ ವ್ಯವಸ್ಥೆಯನ್ನೇ ನಿಂದಿಸುವುದು ಮೂರ್ಖಪ್ರಲಾಪವೇ ಸರಿ. ಆದರೆ ಈ ವ್ಯವಸ್ಥೆಯು ಈಗ ಕೆಟ್ಟುಹೋಗಿದೆ ಎಂಬುದು ಬೇರೆ ವಿಷಯ.

**೧೦. ದ್ವಿವಿಧೋ ಹಿ ವೇದೋಕ್ತೋ ಧರ್ಮಃ ಪ್ರವೃತ್ತಿಲಕ್ಷಣೋ ನಿವೃತ್ತಿಲಕ್ಷಣಶ್ಚ ಜಗತಃ ಸ್ಥಿತಿಕಾರಣಮ್ ।** – (ಗೀತಾಭಾಷ್ಯ – ಪೀಠಿಕೆ)

ವೇದೋಕ್ತವಾದ ಧರ್ಮವು ಎರಡು ವಿಧ. ಒಂದು ಪ್ರವೃತ್ತಿರೂಪವಾದದ್ದು, ಇನ್ನೊಂದು ನಿವೃತ್ತಿರೂಪವಾದದ್ದು.

ಬ್ರಹ್ಮಚರ್ಯ, ಗೃಹಸ್ಥಧರ್ಮ ಇವೆರಡು ಪ್ರವೃತ್ತಿಮಾರ್ಗದವು. ವಾನಪ್ರಸ್ಥ, ಸಂನ್ಯಾಸ ಇವೆರಡು ನಿವೃತ್ತಿ ಮಾರ್ಗದವು. ಜಗತ್ತು ಸುಖವಾಗಿ ಬಾಳಬೇಕಾದರೆ ಈ ಎರಡು ಧರ್ಮಗಳೂ ಆವಶ್ಯಕ. ಇವು ಒಂದಕ್ಕೊಂದು ಪೂರಕವಾದವು. ಇದನ್ನು ಸಮರ್ಥಿಸಿ ವಿಸ್ತಾರವಾದ ಪ್ರಬಂಧವನ್ನು ಬರೆಯಬಹುದು. ಈ ಪ್ರಕಾರವಾಗಿ ಜಗತ್ತಿನಲ್ಲಿ ಇನ್ನು ಯಾವ ಮತವು ವಿಚಾರ ಮಾಡಿದೆ?

**೧೧. ಉಪಾಸನಂ ಚ ಯಥಾಶಾಸ್ತ್ರಂ ತುಲ್ಯಪ್ರತ್ಯಯಸಂತತಿಃ । ಅಸಂಕೀರ್ಣಾ ಚ ಅತತ್ಪ್ರತ್ಯಯೈಃ, ಶಾಸ್ತ್ರೋಕ್ತಾಲಂಬನವಿಷಯಾ ಚ ।** – (ತೈ.ಉ.ಭ. ೨–೩)

ಶಾಸ್ತ್ರೋಕ್ತವಾದ ವಿಧಾನವನ್ನನುಸರಿಸಿದ ಏಕಾಕಾರವಾದ ಜ್ಞಾನಧಾರೆಯು ಉಪಾಸನೆ. ಧ್ಯೇಯ ವಸ್ತುವಿನ ಹೊರತಾಗಿ ಇನ್ನೊಂದು ವಿಷಯದ ಜ್ಞಾನವು ಆ ಜ್ಞಾನಧಾರೆಯಲ್ಲಿ ಸೇರಬಾರದು ಮತ್ತು ಧ್ಯೇಯವಾದ ಆಲಂಬನವು ಶಾಸ್ತ್ರವಿಹಿತವಾಗಿರಬೇಕು.

**ಉಪಾಸನೆ** ಎಂದರೆ ಪೂಜ್ಯವಸ್ತುವಿನ ಸಂತತಸ್ಮರಣೆಯಾಗಿರುತ್ತದೆ. ಅದೂ ಸಹ ಒಂದಾನೊಂದು ಶಾಸ್ತ್ರವಿಧಿಗೆ ಒಳಪಟ್ಟಿರಬೇಕು. ಪೂಜ್ಯವೆಂದು ಯಾವುದನ್ನು ಧ್ಯೇಯವಾಗಿ ಇಟ್ಟುಕೊಳ್ಳುತ್ತೇವೋ ಅದೂ ಸಹ ಶಾಸ್ತ್ರಬೋಧಿತ ವಾಗಿರಬೇಕು. ಈ ಉಪಾಸನೆಗಳನ್ನು ಉಪನಿಷತ್ತುಗಳು ಶಾಂಡಿಲ್ಯವಿದ್ಯೆ, ದಹರವಿದ್ಯೆ, ಉಪಕೋಸಲವಿದ್ಯೆ ಮೊದಲಾದ ಸ್ಥಳಗಳಲ್ಲಿ ಬೋಧಿಸಿವೆ. ನಿರ್ವಿಶೇಷಬ್ರಹ್ಮವನ್ನು ಧ್ಯಾನಿಸುವುದು ಸಾಧಕರಿಗೆ ಸಾಧ್ಯವಿಲ್ಲವಾದ್ದರಿಂದ

ಉಪಾಸನೆಗೆ ಒಂದು ಪ್ರತೀಕವನ್ನು ಶಾಸ್ತ್ರವು ತಿಳಿಸಿಕೊಡುತ್ತದೆ. **'ಏಕಮಪಿ ಹಿ ಬ್ರಹ್ಮ ವಿಭೂತಿಭೇದೈರನೇಕಧಾ ಉಪಾಸ್ಯತ ಇತಿ ಸ್ಥಿತಿಃ'** (ಸೂ.ಭಾ.೩-೩-೨೩) ಎಂದು ಆಚಾರ್ಯರು ಹೇಳಿದ್ದಾರೆ. ಮಹಿಮಾನ್ವಿತವಾದ ರೂಪಭೇದಗಳೇ ಬ್ರಹ್ಮದ ವಿಭೂತಿಗಳು. ಆದಿತ್ಯ, ಅಗ್ನಿ, ಶಿವ, ವಿಷ್ಣು- ಮೊದಲಾದ ದೇವತೆಗಳು ಬ್ರಹ್ಮದ ವಿಭೂತಿಗಳು. ಆ ದೇವತಾ ವಿಷಯಕವಾದ ಜ್ಞಾನದ ನಡುವೆ ಇನ್ನೊಂದು ವಸ್ತುವಿನ ಸ್ಮರಣೆ ಬರಕೂಡದು. ಅದೇ ಏಕವಿಷಯಕವಾದ ಜ್ಞಾನಧಾರೆ. ಇದನ್ನೇ ಧ್ಯಾನವೆನ್ನಬಹುದು. **'ತೈಲಧಾರಾವತ್ ಸಂತತಃ ಅವಿಚ್ಛಿನ್ನಪ್ರತ್ಯಯೋ ಧ್ಯಾನಮ್'** (ಗೀತಾ ಭಾ.೧೩-೫). ಈ ಉಪಾಸನೆಯು ಚಿತ್ತಶುದ್ಧಿಯನ್ನುಂಟುಮಾಡಿ ಬ್ರಹ್ಮಜ್ಞಾನಕ್ಕೆ ಉಪಕರಿಸುತ್ತದೆ.

**೧೨. ಕೇವಲಾದೇವ ಜ್ಞಾನಾತ್ ಮೋಕ್ಷ ಇತ್ಯರ್ಥೋ ನಿಶ್ಚಿತೋ ಗೀತಾಸು ಸರ್ವೋಪನಿಷತ್ಸು ಚ ।** – (ಗೀತಾ ೩ನೇ ಅಧ್ಯಾಯ – ಪೀಠಿಕೆ)

ಕೇವಲ ಜ್ಞಾನದಿಂದಲೇ ಮೋಕ್ಷವಾಗುತ್ತದೆಯೆಂಬುದು ಗೀತೆಯಲ್ಲಿಯೂ ಸರ್ವೋಪನಿಷತ್ತುಗಳಲ್ಲಿಯೂ ನಿಶ್ಚಿತವಾದ ಸಿದ್ಧಾಂತ.

ಈ ಮಾತನ್ನು ಆಚಾರ್ಯರು ಹಲವಾರು ಸ್ಥಳಗಳಲ್ಲಿ ಮತ್ತೆ ಮತ್ತೆ ಹೇಳಿದ್ದಾರೆ. **ಮೋಕ್ಷವೆಂದರೆ ಅಜ್ಞಾನದ ನಿವೃತ್ತಿ.** ಅಜ್ಞಾನವನ್ನು ಹೋಗಲಾಡಿಸತಕ್ಕದ್ದು ಜ್ಞಾನವೇ ಹೊರತು ಇನ್ನಾವುದೂ ಅಲ್ಲ. ಕತ್ತಲೆಯನ್ನು ಬೆಳಕು ಮಾತ್ರ ಹೋಗಲಾಡಿಸ ಬಲ್ಲದು. ಇದು ಸರ್ವರಿಗೂ ನಿಶ್ಚಿತವಾಗಿ ತಿಳಿದಿರತಕ್ಕದ್ದು. ಆದರೂ ಕೆಲವರು ಕರ್ಮದಿಂದ ಮೋಕ್ಷ, ಭಕ್ತಿಯಿಂದ ಮೋಕ್ಷ, ಜ್ಞಾನಕರ್ಮಗಳ ಸಮುಚ್ಚಯದಿಂದ ಮೋಕ್ಷ ಎಂದು ವಾದಿಸುತ್ತಿದ್ದರು. ವೇದವಾದರೋ **'ತಮೇವ ವಿದಿತ್ವಾ ಅತಿಮೃತ್ಯುಮೇತಿ' 'ಬ್ರಹ್ಮವಿದ್ ಬ್ರಹ್ಮೈವ ಭವತಿ'** – ಇತ್ಯಾದಿ ವಾಕ್ಯಗಳಿಂದ ಜ್ಞಾನವೇ ಮೋಕ್ಷಕ್ಕೆ ಕಾರಣ ಎಂದು ಹೇಳಿದೆ. ಅಲ್ಲದೆ **'ನಾನ್ಯಃ ಪಂಥಾ ವಿದ್ಯತೇ ಅಯನಾಯ'** – ಆತ್ಮಜ್ಞಾನವಲ್ಲದೆ ಇನ್ನಾವ ಮಾರ್ಗವೂ ಮೋಕ್ಷಕ್ಕೆ ಇಲ್ಲ – ಎಂದು ಸ್ಪಷ್ಟವಾಗಿ ಪುರುಷಸೂಕ್ತವು ತಿಳಿಸಿದೆ.

**ಭಕ್ತ್ಯಾ ಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥**

– (ಗೀತಾ ೧೮-೫೫)

ಶ್ರೀಕೃಷ್ಣನು ಹೇಳುತ್ತಾನೆ: ನಾನು ಉಪಾಧಿಗಳಿಂದ ಎಷ್ಟು ವಿಸ್ತೃತನಾಗಿದ್ದೇನೆ, ವಸ್ತುತಃ ಸರ್ವೋಪಾಧಿಗಳಿಂದ ವಿಮುಕ್ತನಾಗಿ ನಾನು ನಿಜಸ್ವರೂಪದಿಂದ ಹೇಗಿದ್ದೇನೆ ಎಂಬುದನ್ನು ಭಕ್ತನು ಭಕ್ತಿಬಲದಿಂದ ತಿಳಿಯುತ್ತಾನೆ. ಹೀಗೆ ನನ್ನ ಸತ್ಯಸ್ವರೂಪವನ್ನರಿತ ಮೇಲೆ ಮುಕ್ತನಾಗುತ್ತಾನೆ.

ಇಲ್ಲಿಯೂ ಭಕ್ತಿಯಿಂದ ಆತ್ಮಜ್ಞಾನವಾಗುತ್ತದೆ ಎಂದು ಸ್ಫುಟವಾಗಿ ತಿಳಿಸಲಾಗಿದೆ.

**೧೩. ನ ಹಿ ಕ್ರಿಯಾನಿರ್ವೃತ್ತೋಽರ್ಥಃ ನಿತ್ಯೋ ದೃಷ್ಟಃ ।**

– (ಗೀತಾಭಾಷ್ಯ ೧೮-೫೫)

ಕ್ರಿಯಾಜನ್ಯವಾದ ವಸ್ತು ನಿತ್ಯವಾಗಿರುವುದು ಎಲ್ಲಿಯೂ ಕಂಡುಬರುವುದಿಲ್ಲ. ಕ್ರಿಯೆಯಿಂದ ಹುಟ್ಟತಕ್ಕದ್ದೆಲ್ಲವೂ ನಾಶವಾಗುತ್ತದೆ. ಹೊಸದಾಗಿ ಹುಟ್ಟತಕ್ಕದ್ದು ನಾಶವಾಗುತ್ತದೆ ಎಂಬುದು ಸಿದ್ಧವಾದ ನಿಯಮ. ಮೋಕ್ಷವು ನಿತ್ಯವಾದ್ದರಿಂದ ಅದು ಹೊಸದಾಗಿ ಹುಟ್ಟುವುದಿಲ್ಲ. ಆದ್ದರಿಂದ ಜೀವಾತ್ಮನು ವಸ್ತುತಃ ಮುಕ್ತನಾಗಿಯೇ ಇದ್ದಾನೆ. ಅವನು ಬದ್ಧನಲ್ಲ ಎಂಬುದೇ ಸಿದ್ಧಾಂತ. ಆದರೆ ತಾನು ದೇಹಾದಿಗಳ ಸಂಬಂಧವಿಲ್ಲದ ಶುದ್ಧನಾದ ಆತ್ಮನೆಂದು ತಿಳಿದುಕೊಂಡಿಲ್ಲ. ದೇಹಾದಿಗಳೊಡನೆ ತಾನು ಸಂಬದ್ಧನೆಂದು ಭಾವಿಸಿ ನನ್ನ ದೇಹ, ದೇಹವೇ ನಾನು, ನಾನು ಕರ್ತ, ನಾನು ಭೋಕ್ತ, ನಾನು ರೋಗಿ ಎಂದು ಭ್ರಮಿಸಿದ್ದಾನೆ. ಅವಿದ್ಯೆಯು ಇವನನ್ನು ಮುಸುಕಿದೆ. ಆದ್ದರಿಂದ ಇವನಿಗೆ ಕಾಮ (ಬಯಕೆ) ಹುಟ್ಟುತ್ತದೆ. ಈ ಅವಿದ್ಯಾಕಾಮಗಳು ಮುಸುಕಿರುವುದೇ ಸಂಸಾರಬಂಧ. ಪರಮಾರ್ಥಜ್ಞಾನವು ಮಾತ್ರ ಇದನ್ನು ಹೋಗಲಾಡಿಸುತ್ತದೆ.

**೧೪. ತಸ್ಮಾತ್ ಅವಿದ್ಯಾದಿಕರ್ಮೋಪಾದಾನಹೇತುನಿವೃತ್ತೌ ಸ್ವಾತ್ಮನಿ ಅವಸ್ಥಾನಂ ಮೋಕ್ಷಃ ।** – (ತೈ.ಉ.ಶೀಕ್ಷಾ ಪೀಠಿಕೆ)

ಆದ್ದರಿಂದ (ಮೋಕ್ಷವು ಕ್ರಿಯಾಜನ್ಯವಲ್ಲವಾದ್ದರಿಂದ) ಕರ್ಮಕ್ಕೆ ಮೂಲ ಕಾರಣಗಳಾದ ಅವಿದ್ಯಾಕಾಮಗಳು ತೊಲಗಲಾಗಿ ಸ್ವಸ್ವರೂಪದಲ್ಲಿ ನೆಲೆನಿಲ್ಲುವುದು ಮೋಕ್ಷವೆನಿಸುತ್ತದೆ.

**೧೫. ಅಭಾವಃ ಶರೀರೇಂದ್ರಿಯಾಣಾಂ ಮೋಕ್ಷೇ ।** – (ಸೂ.ಭಾ. ೪-೪-೧೦)

ಮೋಕ್ಷಕಾಲದಲ್ಲಿ ಶರೀರೇಂದ್ರಿಯಗಳು ಇರುವುದಿಲ್ಲ.

ಜೀವನ್ಮುಕ್ತನಿಗೆ ಶರೀರೇಂದ್ರಿಯಗಳು ಇದ್ದರೂ ಅವುಗಳಲ್ಲಿ ನನ್ನದೆಂಬ ಯಾವ ಅಭಿಮಾನವೂ ಇರುವುದಿಲ್ಲ. ಆದ್ದರಿಂದ ಅವು ಇಲ್ಲವೆಂದೇ ತಿಳಿಯಬೇಕು.

**೧೬. ಬ್ರಹ್ಮಭಾವಶ್ಚ ಮೋಕ್ಷಃ ।** – (ಸೂ.ಭಾ.೧–೧–೪)

ಬ್ರಹ್ಮಸ್ವರೂಪವಾಗಿ ನಿಲ್ಲುವುದೇ ಮೋಕ್ಷ.

ಜೀವನು ಅವಿದ್ಯಾದಿಬಂಧಗಳನ್ನು ಕಳಚಿಕೊಂಡಾಗ ಬ್ರಹ್ಮಸ್ವರೂಪನಾಗಿಯೇ ಉಳಿದಿರುತ್ತಾನೆ. ಮುಕ್ತಾತ್ಮನು ಎಲ್ಲಿಗೂ ಹೋಗುವುದೂ ಇಲ್ಲ, ಬರುವುದೂ ಇಲ್ಲ.

**೧೭. ನಿಯತರಚನಾವತೋ ವಿದ್ಯಮಾನಸ್ಯೈವ ವೇದಸ್ಯ ಅಭಿವ್ಯಕ್ತಿಃ ಪುರುಷ ನಿಃಶ್ವಾಸವತ್, ನ ಚ ಪುರುಷಬುದ್ಧಿಪ್ರಯತ್ನಪೂರ್ವಕಃ । ಅತಃ ಪ್ರಮಾಣ ನಿರಪೇಕ್ಷ ಏವ ಸ್ವಾರ್ಥೇ ।** – (ಬೃಹ.ಉ. ೨–೪–೧೦)

ಆನುಪೂರ್ವೀವಿಶಿಷ್ಟವಾಗಿ ಮೊದಲೇ ಇದ್ದ ವೇದವು, ಮನುಷ್ಯನ ನಿಃಶ್ವಾಸದಂತೆ, ಪರಮಾತ್ಮನಿಂದ ಅಭಿವ್ಯಕ್ತವಾಯಿತು. ಅದು ಯಾವನೊಬ್ಬ ಪುರುಷನ ಬುದ್ಧಿಪೂರ್ವಕ ಪ್ರಯತ್ನದಿಂದ ರಚಿತವಾದ್ದಲ್ಲ. ಆದ್ದರಿಂದ ವೇದವು ತಾನು ಬೋಧಿಸುವ ವಿಷಯದಲ್ಲಿ ಅನ್ಯನಿರಪೇಕ್ಷವಾಗಿ ಸ್ವತಂತ್ರವಾದ ಪ್ರಮಾಣವಾಗಿದೆ.

**'ತಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗೀರಸಃ'** ಎಂಬ ಉಪನಿಷದ್ವಚನಕ್ಕೆ ಇದು ವಿವರಣೆ.

**೧೮. ನ ಹಿ ಈದೃಶಸ್ಯ ಶಾಸ್ತ್ರಸ್ಯ ಋಗ್ವೇದಾದಿಲಕ್ಷಣಸ್ಯ ಸರ್ವಜ್ಞಗುಣಾನ್ವಿತಸ್ಯ ಸರ್ವಜ್ಞಾದನ್ಯತಃ ಸಂಭವೋಽಸ್ತಿ ।** – (ಸೂ.ಭಾ. ೧–೧–೩)

ಋಗ್ವೇದವೇ ಮೊದಲಾದ ಸರ್ವಾರ್ಥಪ್ರಕಾಶನ ಸಮರ್ಥವಾದ ಶಾಸ್ತ್ರವು ಸರ್ವಜ್ಞಗುಣವಾದ ಸರ್ವಾರ್ಥವನ್ನು ತಿಳಿಸುವ ಸಾಮರ್ಥ್ಯವುಳ್ಳದ್ದು. ಇಂತಹ ವೇದವು ಸರ್ವಜ್ಞನಾದ ಪರಮಾತ್ಮನಿಂದಲ್ಲದೆ ಇನ್ನೊಬ್ಬನಿಂದ ಆವಿರ್ಭೂತವಾದ್ದಲ್ಲ.

ಶ್ರೀಶಂಕರರು ವೇದವನ್ನೇ ಪರಮಪ್ರಮಾಣವೆಂದೂ ಅದ್ವೈತದರ್ಶನವೇ ವೈದಿಕದರ್ಶನವೆಂದೂ ಇದೇ ಸಮ್ಯಗ್ ದರ್ಶನವೆಂದೂ ಹೇಳಿದ್ದಾರೆ. ತರ್ಕವನ್ನು ವೇದಕ್ಕೆ ಅನುಗುಣವಾಗಿ ಬಳಸಬೇಕು. ವೇದಕ್ಕೆ ವಿರುದ್ಧವಾಗಿ ಬಳಸಿದರೆ ಅದು ಹೇತ್ವಾಭಾಸವಾಗುತ್ತದೆ. ಅಂತಹುದರಿಂದ ಸತ್ಯವು ತಿಳಿಯುವುದಿಲ್ಲ. ವೇದ ವಿರುದ್ಧವಾಗದಾಗ ತರ್ಕವೂ ಪ್ರಮಾಣವಾದರೆ ಬಾಧವೇನೂ ಇಲ್ಲ. ಅತೀಂದ್ರಿಯವಾದ ಬ್ರಹ್ಮವನ್ನು ತಿಳಿಯಲು ವೇದವು ಮಾತ್ರ ಉಪಕರಿಸಬಲ್ಲದು.

## ಸಂಕೀರ್ಣ

ಶ್ರೀಭಗವತ್ಪಾದರಿಗೆ ನಾನಾ ಶಾಸ್ತ್ರಗಳಲ್ಲಿ ಪಾಂಡಿತ್ಯವಿದ್ದಂತೆ ಲೋಕ ವ್ಯವಹಾರದಲ್ಲಿಯೂ ಅಪಾರವಾದ ಜ್ಞಾನವಿತ್ತು. ಭಾಷ್ಯಗಳಲ್ಲಿ ಪ್ರಾಸಂಗಿಕವಾಗಿ ಉದಾಹರಿಸಿದ ಕೆಲವು ವಾಕ್ಯಗಳು, ಸರ್ವರೂ ಕಂಠಪಾಠಮಾಡಬೇಕಾದ ಸೂಕ್ತಿಗಳು, ಅಂತಹವು ವಿಫುಲವಾಗಿ ದೊರಕುತ್ತವೆ. ಉದಾಹರಣೆಗಾಗಿ ಕೆಲವನ್ನು ಮಾತ್ರ ಇಲ್ಲಿ ಬರೆಯಲಾಗುವುದು.

**೧೯. ತಸ್ಮಾತ್ ನ ಪರಮಪೀಡಯಿತ್ವಾ ಗ್ರಸಿತುಮಪಿ ಶಕ್ಯತೇ ।**

– (ಬೃಹ.ಉ. ೧–೫–೨)

ಅನ್ನವು ಸರ್ವಭೋಜ್ಯವಾದ್ದರಿಂದ ಪೀಡಿಸದೆ ಒಂದು ತುತ್ತನ್ನು ತಿನ್ನುವುದಕ್ಕೆ ಸಹ ಶಕ್ಯವಾಗದು.

ಭಗವಂತನು ಸೃಷ್ಟಿಸಿದ ಆಹಾರದ ಮೇಲೆ ಸರ್ವಪ್ರಾಣಿಗಳಿಗೂ ತಿನ್ನುವ ಅಧಿಕಾರ ಉಂಟು. ಒಂದು ತುತ್ತನ್ನು ನಾವು ತಿಂದರೆ, ಅದು ಇನ್ನೊಬ್ಬರಿಗೆ ತಪ್ಪಿಸಿ ತಿಂದದ್ದಾಗುವುದೆಂದು ತಿಳಿಯಬೇಕು, ಸರ್ವಪ್ರಾಣಿಗಳಿಗೂ ಉಳಿಸತಕ್ಕದ್ದು ಅನ್ನವಾದ್ದರಿಂದ **'ಏಕಮಸ್ಯ ಸಾಧಾರಣಮ್'** ಎಂದು ಬೃಹದಾರಣ್ಯಕಶ್ರುತಿಯು ಹೇಳಿದೆ. ಧರ್ಮಶಾಸ್ತ್ರವು **'ನಾತ್ಮಾರ್ಥಂ ಪಾಚಯೇದನ್ನಮ್'** ಎಂದು ತಿಳಿಸುತ್ತದೆ. ತನ್ನೊಬ್ಬನಿಗಾಗಿ ಅನ್ನವನ್ನು ಮಾಡಕೂಡದು ಎಂದರ್ಥ. ಇನ್ನೊಬ್ಬ ಮನುಷ್ಯನಿಗೋ ಪ್ರಾಣಿಗೋ ಕ್ರಿಮಿಕೀಟಗಳಿಗೋ ಅರ್ಪಿಸಿಯೇ ತಾನು ತಿನ್ನಬೇಕೆಂದು ಅಭಿಪ್ರಾಯ ವೈಶ್ವದೇವದ ಉದ್ದೇಶವೇ ಇದು.

**೨೦. ನ ಹಿ ಪೂರ್ವಜೋ ಮೂಢ ಆಸೀದಿತ್ಯಾತ್ಮನಾಪಿ ಮೂಢಾತ್ಮನಾ ಭವಿತವ್ಯಮಿತಿ ಕಿಂಚಿದಸ್ತಿ ಪ್ರಮಾಣಮ್ ।** – (ಸೂ.ಭಾ.೨-೧-೧೧)

ಹಿಂದಿನವನು ಮೂಢನಾಗಿದ್ದುದರಿಂದ ತಾನೂ ಮೂಢನಾಗಿಯೇ ಉಳಿಯ ಬೇಕೆಂಬುದಕ್ಕೆ ಯಾವ ಆಧಾರವೂ ಇಲ್ಲ.

ಆಚಾರ್ಯರು ವಿಚಾರಕ್ಕೆ ತರ್ಕಕ್ಕೆ ಎಷ್ಟು ಪ್ರಾಧಾನ್ಯವನ್ನು ಕೊಟ್ಟಿದ್ದರೆಂಬುದನ್ನು ಇದರಿಂದ ಊಹಿಸಿಕೊಳ್ಳಬಹುದು. ಈಗಿನವರು ಮೂಢನಂಬಿಕೆ ಎಂದು ಹಿಂದಿನವರ ಮಾತನ್ನು ಹಂಗಿಸುತ್ತಾರಷ್ಟೆ. ಅಂತಹ ಮೂಢನಂಬಿಕೆಗೆ ಶರಣಾದರೆ ಶಾಸ್ತ್ರವು ಬೆಳೆಯುವುದು ಹೇಗೆ? ಜ್ಞಾನದ ವೃದ್ಧಿ ಹೇಗಾದೀತು? ಶ್ರೀ ಶಂಕರರು ತಮ್ಮ ಭಾಷ್ಯಗಳಲ್ಲಿ ಯುಕ್ತಿಗಳ ಸುರಿಮಳೆಯನ್ನು ಬಳಸಿ ಇತರ ಮತಗಳನ್ನು ಖಂಡಿಸಿದ್ದಾರೆ. ಆದರೆ ತರ್ಕಕ್ಕೂ ಒಂದು ಪರಿಮಿತಿಯುಂಟು. ಬರಿಯತರ್ಕ ದಿಂದಲೇ ನಿರ್ಣಯಿಸಹೊರಟರೆ, ತರ್ಕಕ್ಕೆ ಮಿತಿಯಿಲ್ಲವಾದ್ದರಿಂದ ಯಾವ ಸಿದ್ಧಾಂತವೂ ಆಗದೆ ಹೋದೀತು. ಬ್ರಹ್ಮ, ಧರ್ಮ – ಇವೆರಡು ಎಂದೆಂದಿಗೂ ಮಾನವನ ತರ್ಕಕ್ಕೆ ನಿಲುಕತಕ್ಕದ್ದಲ್ಲ. ಅಪೌರುಷೇಯವಾದ ವೇದವೇ ಅವನ್ನು ತಿಳಿಸಿಕೊಡಬೇಕು, ಶ್ರುತ್ಯನುಸಾರಿಯಾಗಿ ಬೇಕಾದಷ್ಟು ತರ್ಕಗಳನ್ನು ಮಾಡ ಬಹುದು. ಶ್ರುತಿವಿರುದ್ಧವಾದ್ದನ್ನು ಮಾತ್ರ ತರ್ಕದ ಒರೆಗೆ ಹಚ್ಚಲು ಯತ್ನಿಸಕೂಡದು. ಏಕೆಂದರೆ, ಬ್ರಹ್ಮ, ಧರ್ಮ–ಇವೆರಡು ಮನುಷ್ಯನ ಬುದ್ಧಿಶಕ್ತಿಗೆ ಅಳವಡತಕ್ಕವಲ್ಲ. ಇವೆರಡರ ಗೋಜಿಗೆ ಕೈಹಾಕದೆ ಮನುಷ್ಯನು ಸಮಾಜದ ಹಿತಕ್ಕಾಗಿ ಯಾವ ನಿಯಮವನ್ನಾದರೂ ಮಾಡಿಕೊಳ್ಳಬಹುದು.

**೨೧. ಉದಯಶ್ಚ ನಾಮ ಸವಿತುಃ ತನ್ನಿವಾಸಿನಾಂ ಪ್ರಾಣಿನಾಂ ಚಕ್ಷುರ್ಗೋಚರ-ತಾಪತ್ತಿಃ, ತದತ್ಯಯಶ್ಚ ಅಸ್ತಮನಮ್ । ನ ಪರಮಾರ್ಥತಃ ಉದಯಾಸ್ತಮಾನೇ ಸ್ತಃ ।** – (ಛಾಂ.ಉ. ೩-೧೦-೪)

ಆಯಾ ಪ್ರಾಂತದಲ್ಲಿ ವಾಸಮಾಡುವ ಪ್ರಾಣಿಗಳ ದೃಷ್ಟಿಗೆ ಗೋಚರವಾಗುವುದೇ ಸೂರ್ಯನ ಉದಯ. ಹಾಗೆ ಗೋಚರವಾಗದೆ ಹೋದಾಗ ಸೂರ್ಯಾಸ್ತಮಯ. ಸೂರ್ಯನಿಗೆ ನಿಜವಾಗಿ ಉದಯಾಸ್ತಗಳಿಲ್ಲ.

ಈ ರೀತಿಯಲ್ಲಿ ಪೂರ್ವಾಚಾರ್ಯರು ಹೇಳಿದ್ದಾರೆಂದು ಶ್ರೀಶಂಕರರು ತಮ್ಮ

ಒಪ್ಪಿಗೆಯನ್ನು ಸೂಚಿಸಿದ್ದಾರೆ. ಅಂತೆಯೇ ಆನಂದಗಿರಿ ವ್ಯಾಖ್ಯಾನದಲ್ಲಿ **'ಸ ವಾ ಏಷ ನ ಕದಾಚನ ಅಸ್ತಮೇತಿ ನೋದೇತಿ'** ಎಂಬ ಶ್ರುತಿಯನ್ನು ಪ್ರಮಾಣವಾಗಿ ಉದಾಹರಿಸಿದ್ದಾರೆ. ಅಲ್ಲದೆ ಸೂರ್ಯನಿಗೆ ಉದಯಾಸ್ತಗಳಿಲ್ಲವೆಂಬುದಕ್ಕೆ ಗ್ರಂಥಾಂತರದಿಂದ ಎರಡು ಶ್ಲೋಕಗಳನ್ನು ಉಲ್ಲೇಖಿಸಿದ್ದಾರೆ.

**ಯೈರ್ಯತ್ರ ದೃಶ್ಯತೇ ಭಾಸ್ವಾನ್ ಸ ತೇಷಾಮುದಯಃ ಸ್ಮೃತಃ ।**
**ತಿರೋಭಾವಂ ಚ ಯತ್ರೈತಿ ತದೇವಾಸ್ತಮನಂ ರವೇಃ ॥**
**ನೈವಾಸ್ತಮನಮರ್ಕಸ್ಯ ನೋದಯಃ ಸರ್ವದಾ ಸತಃ ।**
**ಉದಯಾಸ್ತಮನೇ ನಾಮ ದರ್ಶನಾದರ್ಶನೇ ರವೇಃ ॥**

ಸೂರ್ಯನು ಹುಟ್ಟುವುದೂ ಇಲ್ಲ, ಮುಳುಗುವುದೂ ಇಲ್ಲ ಎನ್ನುವುದು ವೇದೋದಿತವಾದ ಸತ್ಯ. ಹಗಲು ರಾತ್ರಿಗಳಾಗುವುದು ಭೂಮಿಯ ಸುತ್ತಾಟದಿಂದ ಎಂದು ಸ್ವತಃ ಸಿದ್ಧವಾಗುತ್ತದೆ.

**೨೨. ಪೃಥಿವೀಚ್ಛಾಯಾಂ ಹಿ ಶಾರ್ವರಂ ತಮ ಆಚಕ್ಷತೇ ।**

– (ಬೃಹ.ಉ. ೬–೨–೧೧)

ಭೂಮಿಯ ನೆರಳನ್ನು ರಾತ್ರಿಯ ಕತ್ತಲೆ ಎನ್ನುತ್ತಾರೆ.

ಭೂಮಿಯ ಯಾವ ಪಾರ್ಶ್ವವು ಸೂರ್ಯನಿಗೆ ಎದುರಾಗಿರುತ್ತದೆಯೋ ಅಲ್ಲಿ ಹಗಲಾಗಿರುತ್ತದೆ. ಅದಕ್ಕೆ ನೇರವಾದ ಭೂಮಿಯ ಇನ್ನೊಂದು ಪಾರ್ಶ್ವದಲ್ಲಿ ಕತ್ತಲೆ ಇರುತ್ತದೆ. ಅದು ಭೂಮಿಯ ನೆರಳು, ಈ ನೆರಳು ಗಗನಮಂಡಲದ ಒಂದಾನೊಂದು ಸ್ಥಳದಲ್ಲಿದ್ದಾಗ **ರಾಹು** ಎನಿಸುತ್ತದೆ. ಆದ್ದರಿಂದ ಜೋತಿಃಶಾಸ್ತ್ರ ದಲ್ಲಿ ರಾಹುವಿಗೆ ತಮಸ್ಸು ಎಂದೂ ಛಾಯಾಗ್ರಹವೆಂದೂ ಹೆಸರಿದೆ. ಆನಂದಗಿರಿ ವಾಖ್ಯಾನದಲ್ಲಿರುವ ಈ ಶ್ಲೋಕವನ್ನು ಪರಾಮರ್ಶಿಸಬಹುದು –

**ಉದ್ಧೃತ್ಯ ಪೃಥಿವೀಛಾಯಾಂ ನಿರ್ಮಿತಂ ಮಂಡಲಾಕೃತಿ ।**
**ಸ್ವರ್ಭಾನೋಸ್ತು ಬೃಹತ್ ಸ್ಥಾನಂ ತೃತೀಯಂ ಯತ್ತಮೋಮಯಮ್ ॥**

"ಭೂಮಿಯ ನೆರಳನ್ನು ತೆಗೆದುಕೊಂಡು ಮಂಡಲಾಕಾರವಾಗಿ ಒಂದು ದೊಡ್ಡ ಸ್ಥಾನವನ್ನು ನಿರ್ಮಿಸಲಾಗಿದೆ ! ಅದು ರಾಹುವಿನ ತಮೋಮಯವಾದ ತೃತೀಯ ಸ್ಥಾನ !"

ಈ ಪ್ರಕಾರವಾಗಿರುವ ವೇದಶಾಸ್ತ್ರಗಳನ್ನು ಕಣ್ಣೆತ್ತಿಯೂ ನೋಡದೆ, ಅವುಗಳ ಪರಮಾರ್ಥವೇನೆಂಬುದನ್ನು ಗ್ರಹಿಸದೆ ಮಾತಾಡತಕ್ಕವರು ಅಜ್ಞರು.

**೨೩. ನ ಹಿ ಅನುತ್ಸಾಹವತಾಂ ಅನನುತಿಷ್ಠತಾಂ ಅಲಸಾನಾಂ ಭೋಗಪ್ರಾಪ್ತಿಃ ಲೋಕೇ ದೃಷ್ಟಾ ।** – (ಛಾಂ.ಉ. ೩–೬–೨)

ಉತ್ಸಾಹರಹಿತರಾಗಿ ಉದ್ಯೋಗವನ್ನು ಮಾಡದಿರುವ ಸೋಮಾರಿಗಳಿಗೆ ಸುಖಭೋಗ ದೊರೆಯುವುದು ಲೋಕದಲ್ಲಿ ಕಂಡುಬಂದಿಲ್ಲ.

ಲೋಕದಲ್ಲಿ ಪ್ರತಿಯೊಬ್ಬರು ಸುಖವನ್ನು ಬಯಸುತ್ತಾರೆ. ದುಃಖವನ್ನು ಯಾರೂ ಅಪೇಕ್ಷಿಸುವುದಿಲ್ಲ. ಆದ್ದರಿಂದ ಪ್ರತಿಯೊಬ್ಬನೂ ಉತ್ಸಾಹಶೀಲನೂ ಕರ್ಮನಿರತನೂ ಆಗಿರಬೇಕು, **'ಎಲೈ ಮಾನವ, ದುಡಿ ದುಡಿ, ಕೆಲಸವನ್ನು ಮಾಡು, ಸೋಮಾರಿಯಾಗಿರಬೇಡ'** ಎಂಬುದೇ ಆಚಾರ್ಯರ ಉಪದೇಶ. **'ಕಾಯಕವೇ ಕೈಲಾಸ'** ಎನ್ನುವುದೇನೂ ನೂತನವಾದ ಉದ್ಘೋಷವಲ್ಲ. **'ಕುರು ಕರ್ಮೈವ ತಸ್ಮಾತ್ ತ್ವಂ ಪೂರ್ವೈಃ ಪೂರ್ವತರಂ ಕೃತಮ್'** ಎಂದು ಶ್ರೀ ಕೃಷ್ಣನು ಗೀತೆಯಲ್ಲಿ ಬೋಧಿಸುತ್ತಾನೆ. ವೇದಾಂತವು ನಿರುದ್ಯಮವನ್ನು, ಸೋಮಾರಿತನವನ್ನು ಎಲ್ಲಿಯೂ ಉಪದೇಶಿಸಿಲ್ಲ. ಆದರೆ ನಿನ್ನ ದುಡಿತ, ಹಣದ ಸಂಪಾದನೆ ಧರ್ಮಪೂರ್ವಕವಾಗಿ ಇರತಕ್ಕದ್ದು. ಅಧರ್ಮದಿಂದ ಸಂಪಾದಿಸಲು ಯತ್ನಿಸಬೇಡ. ಧರ್ಮಪೂರ್ವಕವಾಗಿ ದುಡಿದರೂ ನಿನ್ನ ಭೋಗವು ಪರೋಕ್ಷವಾಗಿ ಇನ್ನೊಬ್ಬರಿಗೆ ಸ್ವಲ್ಪ ಪೀಡೆಯನ್ನುಂಟುಮಾಡುತ್ತದೆ. **'ತಸ್ಮಾತ್ ಪರಮಪೀಡಯಿತ್ವಾ ಗ್ರಸಿತುಮಪಿ ನ ಶಕ್ಯತೇ'** (೧೯ನೆಯ ಸೂಕ್ತಿಯನ್ನು ನೋಡಿ). ಹೀಗಿರುವಾಗ ಅಧರ್ಮದ ಸಂಪಾದನೆಯಲ್ಲಿ ಪರಪೀಡೆ ಅತ್ಯಧಿಕವಾಗಿರುತ್ತದೆ ಎಂದು ಹೇಳಬೇಕಾದ್ದಿಲ್ಲ ಎನ್ನುವುದೇ ಆಚಾರ್ಯರ ಉಪದೇಶಸಾರವಾಗಿದೆ. ಆದರೆ ಶಾಶ್ವತವಾದ ಸುಖವು ಯಾವುದೆಂಬುದನ್ನು ಮಾತ್ರ ವೇದಾಂತವೇ ತಿಳಿಸಿ ಕೊಡುತ್ತದೆ. ಅದೇನೂ ಸುಲಭವಾಗಿ ದೊರಕತಕ್ಕದ್ದಲ್ಲ. **'ಈಶಾವಾಸ್ಯಮಿದಂ ಸರ್ವಮ್'**. ಆದ್ದರಿಂದ ಈಶ್ವರಪ್ರೀತ್ಯರ್ಥವಾಗಿ ದುಡಿ. ಈಶ್ವರನನ್ನು ಎಂದಿಗೂ ಮರೆಯಬೇಡ. ಈಶ್ವರನೇ ಸರ್ವವೂ. ಆದ್ದರಿಂದ **'ಜನತೆಯೇ ಜನಾರ್ದನ'** ಎಂಬ ಘೋಷಣೆಯೂ ಸ್ವತಃಸಿದ್ಧವಾದದ್ದು. ಶ್ರೀಶಂಕರಾಚಾರ್ಯರ ಜೀವನವೇ **'ಕಾಯಕ'** ಕ್ಕೆ ಪ್ರಥಮೋದಾಹರಣೆ. ಇನ್ನೊಬ್ಬನು ನೂರಾರು ವರ್ಷಗಳಿಂದಲೂ ಸಾಧಿಸಲಾಗದ

ಬೃಹತ್ ಕಾರ್ಯವನ್ನು ಅತ್ಯಲ್ಪಕಾಲದಲ್ಲಿ ಸಾಧಿಸಿದ ಆಚಾರ್ಯರ ಜೀವನದಲ್ಲಿ ಒಂದು ಕ್ಷಣವಾದರೂ ಆಲಸ್ಯವು ಪ್ರವೇಶಿಸಲಿಲ್ಲ ಎಂಬುದನ್ನು ಬುದ್ಧಿಯಿದ್ದವರು ಪರ್ಯಾಲೋಚಿಸಬೇಕು. **'ಉತ್ತಿಷ್ಠತ, ಜಾಗೃತ, ಪ್ರಾಪ್ಯ ವರಾನ್ ನಿಬೋಧತ'** ಎಂಬುದೇ ವೇದಾಂತದ ವೀರವಾಣಿ.

ಕವಿತೆಯು ಹೃದಯಂಗಮವಾದ ಒಂದು ಕುಶಲಕಲೆ. ಸದಾ ವೇದಾಂತಾದಿ ಶಾಸ್ತ್ರಗಳಲ್ಲಿ ಮುಳುಗಿ ಕರ್ಕಶತರ್ಕಕುಶಲರಾದವರಿಗೆ ಅದು ಒಲಿಯುವುದು ಅಪೂರ್ವವೇ ಸರಿ, ಕವಿತೆಯು ಒಂದು ಪ್ರತಿಭಾವಿಶೇಷವನ್ನು ಅಪೇಕ್ಷಿಸುತ್ತದೆ.

ಅದರಲ್ಲಿಯೂ ಭಕ್ತಿರಸಪೂರ್ಣವಾದ ಕವಿತೆಯನ್ನು ರಚಿಸುವ ಕವಿಯು ದೇವತೆಯ ಪರಮಭಕ್ತನಾಗಿರಬೇಕು. ಭಗವಂತನ ಮಹಿಮೆಯ ಸ್ಮರಣ ಮಾತ್ರದಿಂದ ಅವನ ಕೋಮಲ ಚಿತ್ತವು ದ್ರುತವಾಗಿಬಿಡಬೇಕು. ಈ ದೃಷ್ಟಿಯಿಂದ ವಿಮರ್ಶಿಸಿದಾಗ ಶ್ರೀಶಂಕರಭಗವತ್ಪಾದರು ರಚಿಸಿದ ವಿವಿಧ ದೇವತಾಸ್ತೋತ್ರಗಳು ವಿಸ್ಮಯವನ್ನುಂಟುಮಾಡುತ್ತವೆ. ಶಿವಾಪರಾಧಕ್ಷಮಾಪಣಸ್ತೋತ್ರ, ಭಜಗೋವಿಂದ, ಶಿವಾನಂದಲಹರೀ, ಸೌಂದರ್ಯಲಹರೀ, ದೇವ್ಯಪರಾಧಕ್ಷಮಾಪಣಸ್ತೋತ್ರ,ಆನಂದ-ಲಹರೀ, ಶ್ರೀಲಕ್ಷ್ಮೀನರಸಿಂಹಸ್ತೋತ್ರ, ಅಚ್ಯುತಾಷ್ಟಕ, ಗಂಗಾಷ್ಟಕ ಇತ್ಯಾದಿ ಸ್ತೋತ್ರಗಳು ಭಕ್ತಿಯೆಂಬ ಮಧುವಿನಿಂದ ತುಂಬಿದ ದ್ರಾಕ್ಷಿಯ ಗೊಂಚಲುಗಳು. ಲಲಿತಪದಪುಂಜಗಳಿಂದ ಶ್ರೋತೃಗಳನ್ನು ಆಕರ್ಷಿಸುವ ಚೇತೋಹಾರಿ ಗೀತಗಳು. **'ಜೇಷ್ಯಾಮಿ ಸರ್ವಾನ್ ಆರಭೇ ಚ ಚಿಂತಾಮ್'** ಎಂದು ತೈತ್ತಿರೀಯ ಭಾಷ್ಯದಲ್ಲಿ ತಾರ್ಕಿಕರೊಡನೆ ಕಠೋರ ಸ್ಪರ್ಧೆಗೆ ನಿಂತ ಆಚಾರ್ಯರು ಸ್ತೋತ್ರರಚನಾಕಾಲದಲ್ಲಿ ಮೃದುಹೃದಯವುಳ್ಳ ಭಕ್ತಿಯ ಭಾಂಡಾಗಾರವಾಗಿ ಬಿಡುತ್ತಾರೆ. ಎಲ್ಲ ದೇವತೆಗಳೂ ಅವರಿಗೆ ಪೂಜ್ಯರೇ ಯಾರಲ್ಲಿಯೂ ಪಕ್ಷಪಾತವಿಲ್ಲ. ಪ್ರಾರ್ಥನೆಯ ಪ್ರಕಾರ ವಾದರೂ ಯಾವುದು? ಆಯಸ್ಸು, ಆರೋಗ್ಯ, ಧನ, ಸುಖ ಯಾವುದನ್ನು ಆವರು ಬೇಡುವುದಿಲ್ಲ. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಪರಮೋಚ್ಚಸ್ಥಾನವನ್ನಡರಿದ ಮಹಾ ಪುರುಷರ ಮನೋವೃತ್ತಿಯು ಮಹನೀಯವಾದದ್ದು, ಗಮನೀಯವಾದದ್ದು, ಲೋಕಕಲ್ಯಾಣಕಾರಿಯಾದದ್ದು.

**ಅವಿನಯಮಪನಯ ವಿಷ್ಣೋ**
**ದಮಯ ಮನಃ ಶಮಯ ವಿಷಯಮೃಗತೃಷ್ಣಾಮ್ ।**

**ಭೂತದಯಾಂ ವಿಸ್ತಾರಯ**
**ತಾರಯ ಸಂಸಾರಸಾಗರತಃ ॥** – (ವಿಷ್ಣುಷಟ್ಪದೀಸ್ತೋತ್ರ-೧)

'ಹೇ ವಿಷ್ಣೋ! ನನ್ನಲ್ಲಿರುವ ಅವಿನಯವನ್ನು (ಔದ್ಧತ್ಯವನ್ನು) ಹೋಗಲಾಡಿಸು, ಮನಸ್ಸಿನ ಚಂಚಲತೆಯನ್ನು ನಿವಾರಿಸು, ವಿಷಯಸುಖದ ಬಯಕೆಯನ್ನು ತಪ್ಪಿಸು, ಪ್ರಾಣಿಗಳಲ್ಲಿ ನನ್ನ ದಯೆ ವಿಸ್ತರಿಸುವಂತೆ ಮಾಡು. ಸಂಸಾರಸಾಗರದಿಂದ ನನ್ನನ್ನು ಪಾರುಮಾಡು'

ಕೃತಕೃತ್ಯರಾದ ಆಚಾರ್ಯರಿಗೆ ಇಂತಹ ಪ್ರಾರ್ಥನೆ ಬೇಕಾಗಿಯೇ ಇಲ್ಲ. "ಈ ರೀತಿಯಲ್ಲಿ ದೇವರನ್ನು ಪ್ರಾರ್ಥಿಸಿಕೊಳ್ಳಿರಿ" ಎಂದು ಜನತೆಗೆ ಆದರ್ಶವಾದ ಪ್ರಾರ್ಥನಾ ಪ್ರಕಾರವನ್ನು ಆಚಾರ್ಯರು ತಿಳಿಸಿಕೊಟ್ಟಿದ್ದಾರೆ.

'ಅಹಂ ಬ್ರಹ್ಮಾಸ್ಮಿ' ಎಂಬ ಅದ್ವೈತಿಯು ದೇವರನ್ನು ಬೇಡಿಕೊಳ್ಳುವುದು ಹೇಗೆ?

**ಸತ್ಯಪಿ ಭೇದಾಪಗಮೇ**
**ನಾಥ ತವಾಹಂ ನ ಮಾಮಕೀನಸ್ತ್ವಮ್ ।**
**ಸಾಮುದ್ರೋ ಹಿ ತರಂಗಃ**
**ಕ್ವಚನ ಸಮುದ್ರೋ ನ ತಾರಂಗಃ ॥** – (ವಿಷ್ಣುಷಟ್ಪದೀಸ್ತೋತ್ರ-೩)

ಜೀವನಿಗೂ ಪರಮಾತ್ಮನಿಗೂ ಭೇದವಿಲ್ಲವಾದರೂ, ಹೇ ಸ್ವಾಮಿ! ನಾನು ನಿನ್ನವನು, (ನಿನ್ನ ಭಕ್ತ). ನೀನು ನನ್ನ ಅಧೀನನಲ್ಲ. ಹೇಗೆಂದರೆ, (ಸಮುದ್ರಕ್ಕೂ, ಅಲೆಗೂ ಭೇದವಿಲ್ಲವಾದರೂ) ಅಲೆಯು ಸಮುದ್ರಕ್ಕೆ ಸೇರಿದ್ದು, ಸಮುದ್ರವು ಎಂದಿಗೂ ಅಲೆಗೆ ಸೇರಿದ್ದಲ್ಲ !

ಒಬ್ಬ ವೃದ್ಧನು '(ಡು) **ಕುರುಞ್-ಕರಣೇ**' ಎಂದು ಗಟ್ಟಿಯಾಗಿ ಹೇಳುತ್ತ ವ್ಯಾಕರಣವನ್ನು ಕಲಿಯುತ್ತಿದ್ದನಂತೆ. ಆಗಲೂ '**ಡುಕೃಞ್**' ಎಂಬುದನ್ನು **ಕುರುಞ್** ಎಂದು ತಪ್ಪಾಗಿ ಹೇಳುತ್ತಿದ್ದನು. ಅದನ್ನು ಕೇಳಿ ಶ್ರೀಶಂಕರರು ವೃದ್ಧರಿಗೆ 'ಭಜಗೋವಿಂದ' ಸ್ತೋತ್ರವನ್ನು ರಚಿಸಿ ಆ ವೃದ್ಧನಿಗೆ ಬುದ್ಧಿ ಹೇಳಿದರು–

**ಭಜ ಗೋವಿಂದಂ ಭಜ ಗೋವಿಂದಂ**
**ಗೋವಿಂದಂ ಭಜ ಮೂಢಮತೇ ।**

**ಸಂಪ್ರಾಪ್ತೇ ಸಂನಿಹಿತೇ ಕಾಲೇ**
**ನಹಿ ನಹಿ ರಕ್ಷತಿ ಡುಕುರುಙ್ ಕರಣೇ ॥**

– (ಭಜಗೋವಿಂದ ಸ್ತೋತ್ರ-೧)

'ಎಲೋ ಮೂಢ! ಗೋವಿಂದನನ್ನು ಭಜಿಸು, ಗೋವಿಂದನನ್ನು ಭಜಿಸು. ಮರಣಕಾಲವು ಹತ್ತಿರ ಬಂದಿರುವಾಗ ಈ **'ಡುಕುರುಙ್ ಕರಣೇ'** ನಿನ್ನನ್ನೆಂದಿಗೂ ರಕ್ಷಿಸುವುದಿಲ್ಲ !'

ಆಚಾರ್ಯರು ಇಲ್ಲಿ ವ್ಯಾಕರಣಶಾಸ್ತ್ರವನ್ನು ನಿಂದಿಸಿಲ್ಲ. ಅದೆಲ್ಲವೂ ಬಾಲ್ಯದಲ್ಲಿಯೇ ಕಲಿಯಬೇಕಾದದ್ದು. ಆ ವೃದ್ಧನು ಮುದಿವಯಸ್ಸಿನಲ್ಲಿ ಅದನ್ನು ಕಲಿಯಲು ಯತ್ನಿಸುತ್ತಾ ಇದ್ದಾನೆ. ವ್ಯಾಕರಣದಲ್ಲಿ ಪಾರಂಗತನಾಗಿ ವೇದಾಂತವನ್ನು ಅಭ್ಯಾಸ ಮಾಡುವುದು ಯಾವಾಗ? ಆದ್ದರಿಂದ 'ಇದು ಹೊಸದಾಗಿ ವಿದ್ಯಾಭ್ಯಾಸ ಮಾಡುವ ಕಾಲವಲ್ಲ, ಮರಣ ಸಮೀಪಿಸಿದೆ. ಕಡೆಗಾಲದಲ್ಲಿ ಗೋವಿಂದ ನನ್ನಾದರೂ ಭಜಿಸು. ಅದರಿಂದ ನಿನಗೆ ಶ್ರೇಯಸ್ಸುಂಟು' ಎಂದು ಅಭಿಪ್ರಾಯ.

ಆದರೆ ಏನು ಮಾಡುವುದು? ವಯಸ್ಸಾಗಿ ಸಾಯುವ ಕಾಲ ಬಂದರೂ ಮನಸ್ಸು ದೇವರ ಕಡೆಗೆ ತಿರುಗುವುದಿಲ್ಲ. ವಿದ್ಯಾವಂತನೆಂದು ಹೆಸರುಗಳಿಸುವ ಆಸೆ, ಹಣದ ಆಸೆ ಇಂತಹ ಆಸೆಗಳು ಒಂದಾದ ಮೇಲೊಂದು ಹುಟ್ಟುತ್ತಲೇ ಇರುತ್ತವೆ–

**ಅಂಗಂ ಗಲಿತಂ ಪಲಿತಂ ಮುಂಡಂ**
**ದಶನವಿಹೀನಂ ಜಾತಂ ತುಂಡಮ್ ।**
**ವೃದ್ಧೋ ಯಾತಿ ಗೃಹೀತ್ವಾ ದಂಡಂ**
**ತದಪಿ ನ ಮುಂಚತ್ಯಾಶಾಪಿಂಡಮ್ ॥**

– (ಭಜಗೋವಿಂದ ಸ್ತೋತ್ರ-೧೫)

ಕೈಕಾಲು ಮೊದಲಾದ ಅವಯವ ಬಲಹೀನವಾಯಿತು. ತಲೆಯು ಬೆಳ್ಳಗೆ ನೆರೆಯಿತು. ಬಾಯಿಯಲ್ಲಿ ಒಂದು ಹಲ್ಲೂ ಇಲ್ಲ. ಆದರೂ ವೃದ್ಧನು ದೊಣ್ಣೆಯನ್ನು ಊರುತ್ತ ಎಲ್ಲಿಗೋ ಹೋಗುತ್ತಲೇ ಇದ್ದಾನೆ. ಇಷ್ಟಾದರೂ ಇವನನ್ನು ಆಸೆ ಮಾತ್ರ ಬಿಡುವುದಿಲ್ಲ.

ದೇವಿಯನ್ನು ಸ್ತುತಿಸುತ್ತ ಶ್ರೀಶಂಕರರು ಹೇಳುತ್ತಾರೆ "ತಾಯಿ, ನಿನ್ನ ಪಾದಸೇವೆಯನ್ನು ನಾನು ಸರಿಯಾಗಿ ಮಾಡಲಿಲ್ಲ. ಅದಕ್ಕೆ ಏನೋ ಒಂದು ನೆವ ಇರಬಹುದು. ಸೇವಾವಿಧಾನ ತಿಳಿಯಲಿಲ್ಲ. ಕೈಯಲ್ಲಿ ಹಣವಿರಲಿಲ್ಲ. ಮಾಡುವ ಸಾಮರ್ಥ್ಯವಿರಲಿಲ್ಲ ಎನ್ನಬಹುದು ಅಥವಾ ನನ್ನ ಸೋಮಾರಿತನವೇ ಕಾರಣವಾಗಿರಬಹುದು. ಹೇಗೇ ಇರಲಿ, ಸಕಲರನ್ನು ಉದ್ಧಾರ ಮಾಡತಕ್ಕ ದೇವಿ! ಕೆಟ್ಟವನಾದ ಮಗನು ಹುಟ್ಟಬಹುದು ಆದರೆ ಎಲ್ಲಿಯೂ ಕೆಟ್ಟವಳಾದ ತಾಯಿ ಇರುವುದಿಲ್ಲ!"

**ವಿಧೇರಜ್ಞಾನೇನ ದ್ರವಿಣವಿರಹೇಣಾಲಸತಯಾ**
**ವಿಧೇಯಾಶಕ್ಯತ್ವಾತ್ ತವ ಚರಣಯೋರ್ಯಾ ಚ್ಯುತಿರಭೂತ್ ।**
**ತದೇತತ್ ಕ್ಷಂತವ್ಯಂ ಜನನಿ ಸಕಲೋದ್ಧಾರಿಣಿ ಶಿವೇ**
**ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥**

– (ದೇವ್ಯಪರಾಧಕ್ಷಮಾಪಣಸ್ತೋತ್ರ)

**'ಮಾತೃದೇವೋಭವ'** ಎಂಬ ಪ್ರಭುಸಂಮಿತೆಯನ್ನು ಕವಿಶ್ರೇಷ್ಠರಾದ ಆಚಾರ್ಯರು ಹೇಗೆ ಕಾಂತಾಸಂಮಿತೆಗೆ ತಿರುಗಿಸಿದ್ದಾರೆಂಬುದನ್ನು ಇಲ್ಲಿ ಕಾಣಬಹುದು.

ಶ್ರೀಶಂಕರಾಚಾರ್ಯರು ರಚಿಸಿದ ಸ್ತೋತ್ರಗಳಲ್ಲಿ ಪ್ರತಿಯೊಂದು ಪದ್ಯವೂ ಸಹ ರಸಮಯವಾಗಿ ಆಸ್ವಾದ್ಯವಾಗಿದೆ. ಭಕ್ತಿಯ ಅಭಿವ್ಯಕ್ತಿಗೆ ಯೋಗ್ಯವಾದ ಸರಳಪದಗಳಿಂದ ಗರ್ಭಿತವಾದ ವೈದರ್ಭೀಶೈಲಿಯನ್ನಿಲ್ಲಿ ಕಾಣಬಹುದು. ಅರ್ಥನಿರೂಪಣೆಯನ್ನು ಮಾಡದೆಯೇ ಎರಡು ಪದ್ಯಗಳನ್ನಿಲ್ಲಿ ಉದಾಹರಿಸ ಲಾಗುವುದು.

ದೇವಿಯ ಸಿಮಂತದ (ಬೈತಲೆಯ) ವರ್ಣನೆ ಇದು–

**ತನೋತು ಕ್ಷೇಮಂ ನಃ ತವವದನಸೌಂದರ್ಯಲಹರೀ–**
**ಪರೀವಾಹಸ್ರೋತಃಸರಣಿರಿವ ಸೀಮಂತಸರಣಿಃ ।**
**ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರ–**
**ದ್ವಿಷಾಂ ವೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್ ॥**

– (ಸೌಂದರ್ಯಲಹರೀ–೪೪)

ಈ ಶ್ಲೋಕವನ್ನು ಶ್ರೀಮದಪ್ಪಯ್ಯದೀಕ್ಷಿತರು ಕುವಲಯಾನಂದದಲ್ಲಿ ಪ್ರಸ್ತುತಾಂಕುರಾಲಂಕಾರಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾರೆ. 'ಸ್ರೋತಃಸರಣಿರಿವ' ಎಂಬಲ್ಲಿ ಉತ್ಪ್ರೇಕ್ಷಾಲಂಕಾರವೂ ಇದೆ.

ಶಂಭೋ ! ಮಹಿಮಾನ್ವಿತವಾದ ನಿನ್ನ ಕಥಾವಾಹಿನಿಯು ಹರಿಯುತ್ತ ಬಂದು ನನ್ನ ಚಿತ್ತವೆಂಬ ಮಡುವಿನಲ್ಲಿ ನಿಂತುಬಿಡಲಿ.

**ಗಲಂತೀ ಶಂಭೋ ತ್ವಚ್ಚರಿತಸರಿತಃ ಕಿಲ್ಬಿಷರಜೋ**
**ದಲಂತೀ ಧೀಕುಲ್ಯಾಸರಣಿಷು ಪತಂತೀ ವಿಜಯತಾಮ್ ।**
**ದಿಶಂತೀ ಸಂಸಾರಭ್ರಮಣಪರಿತಾಪೋಪಶಮನಂ**
**ವಸಂತೀ ಮಚ್ಚೇತೋ ಹ್ರದಭುವಿ ಶಿವಾನಂದಲಹರೀ ॥**

–(ಶಿವಾನಂದಲಹರೀ–೨)

ಆಚಾರ್ಯರು ರಚಿಸಿದ ವಿವೇಕ ಚೂಡಾಮಣಿಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಅದು ಸರಳ ಶೈಲಿಯಲ್ಲಿ ವೇದಾಂತದ ತತ್ತ್ವಗಳನ್ನು ನಿರೂಪಿಸುವ ಪದ್ಯಗ್ರಂಥ. ಗುರು–ಶಿಷ್ಯ ಸಂವಾದರೂಪದಲ್ಲಿವೆ. ಅದು ಶಾಸ್ತ್ರಗ್ರಂಥವಾದರೂ ಆಚಾರ್ಯರ ಕವಿಹೃದಯವು ಅದರಲ್ಲಿಯೂ ಪ್ರಭಾವವನ್ನು ತೋರಿಸಿದೆ ! ಶ್ರೀಶಂಕರರು ತಮ್ಮ ಗುರುಗಳಾದ ಶ್ರೀಗೋವಿಂದಭಗವತ್ಪಾದರನ್ನು ಗೋವಿಂದನಾದ ವಿಷ್ಣುವಿನೊಡನೆ ಅಭೇದ ರೂಪಕದಿಂದ ವಂದಿಸುತ್ತಾರೆ.

**ಸರ್ವವೇದಾಂತಸಿದ್ಧಾಂತಗೋಚರಂ ತಮಗೋಚರಮ್ ।**
**ಗೋವಿಂದಂ ಪರಮಾನಂದಂ ಸದ್ಗುರುಂ ಪ್ರಣತೋಽಸ್ಮ್ಯಹಮ್ ॥**

ಇಲ್ಲಿ 'ಅಗೋಚರ' ಎಂದು ಸದ್ಗುರುವಿಗೆ ವಿಶೇಷಣವನ್ನಿತ್ತಿರುವುದರಿಂದ ವಿವೇಕಚೂಡಾಮಣಿಯನ್ನು ರಚಿಸುವ ಸಮಯದಲ್ಲಿ ಬಹುಶಃ ಶ್ರೀಗೋವಿಂದ ಯತಿಗಳು ವಿದೇಹ ಕೈವಲ್ಯವನ್ನು ಪಡೆದಿದ್ದರೆಂದು ಹೇಳಬಹುದು. ತಮ್ಮ ಪರಮ ಗುರುಗಳಾದ ಶ್ರೀಗೌಡಪಾದಾಚಾರ್ಯರನ್ನು ವಂದಿಸುವ ಶ್ಲೋಕವು ಪರಮ ರಮಣೀಯವಾಗಿದೆ. ಮಾಂಡೂಕ್ಯ ಭಾಷ್ಯದ ಕಡೆಯಲ್ಲಿ ಈ ಶ್ಲೋಕ ಬರುತ್ತದೆ.

**ಪ್ರಜ್ಞಾವೈಶಾಖವೇಧ ಕ್ಷುಭಿತಜಲನಿಧೇರ್ವೇದನಾಮ್ನೋಽಂತರಸ್ಥಂ**
**ಭೂತಾನ್ಯಾಲೋಕ್ಯ ಮಗ್ನಾನ್ಯವಿರತಜನನಗ್ರಾಹಘೋರೇ ಸಮುದ್ರೇ ।**

**ಕಾರುಣ್ಯಾದುದ್ಧಧಾರಾಮೃತಮಿದಮಮರೈರ್ದುರ್ಲಭಂ ಭೂತಹೇತೋಃ**
**ಯಸ್ತಂ ಪೂಜ್ಯಾಭಿಪೂಜ್ಯಂ ಪರಮಗುರುಮಹಂ ಪಾದಪಾತೈರ್ನತೋಽಸ್ಮಿ ॥**

"ಮತ್ತೆ ಮತ್ತೆ ಜನನಗಳೆಂಬ ಮೊಸಳೆಗಳಿಂದ ತುಂಬಿ ಬಹುಘೋರವಾದ ಸಂಸಾರಸಾಗರದಲ್ಲಿ ಬಿದ್ದು ತೆರಪಿಲ್ಲದೆ ಪ್ರಾಣಿಗಳು ಹೊರಳಾಡುತ್ತಿವೆ. ಅವರ ದುರವಸ್ಥೆಯನ್ನು ಕಂಡು ಕಾರುಣ್ಯದಿಂದ ತಮ್ಮ ಪ್ರಜ್ಞಾಶಕ್ತಿಯೆಂಬ ಕಡೆಗೋಲಿನಿಂದ ವೇದವೆಂಬ ಮಹಾಸಮುದ್ರವನ್ನು ಕಡೆದು ಕ್ಷೋಭೆಗೊಳಿಸಿ ಅದರ ತಳದಲ್ಲಿದ್ದ ಆತ್ಮಜ್ಞಾನವೆಂಬ ಈ ಅಮೃತವನ್ನು ಜನತೆಯ ಶ್ರೇಯಸ್ಸಿಗಾಗಿ ಶ್ರೀಗೌಡಪಾದರು ಎತ್ತಿ ತಂದುಕೊಟ್ಟಿದ್ದಾರೆ. ಪೂಜ್ಯರಾದ ನನ್ನ ಗುರುಗಳಿಗೂ ಪೂಜ್ಯರಾದ ಆ ಪರಮಗುರುಗಳ ಚರಣಗಳಿಗೆ ಮತ್ತೆ ಮತ್ತೆ ಅಡ್ಡಬಿದ್ದು ನಮಸ್ಕರಿಸುತ್ತೇನೆ."

ಚಮತ್ಕಾರಿಗಳಾದ ಅರ್ಥವಿಶೇಷಗಳು ಇಲ್ಲಿ ಅಭಿವ್ಯಕ್ತವಾಗಿವೆ. ವೇದವು ಅಪಾರವಾದ ಕ್ಷೀರಸಮುದ್ರ. ಅದನ್ನು ಕಡೆದು ಅಮೃತವನ್ನು ತೆಗೆಯಲು ದೇವತೆಗಳು ಮಂದರಪರ್ವತವನ್ನು, ವಾಸುಕಿಯನ್ನು ತರಬೇಕಾಯಿತು. ಶ್ರೀಗೌಡಪಾದರಿಗಾದರೋ ತಮ್ಮ ಮೇಧಾಶಕ್ತಿಯೇ ಸಾಕಾಯಿತು. ಕ್ಷೀರ ಸಮುದ್ರವನ್ನು ಕಡೆದಾಗ ಮೊದಲು ಹಾಲಾಹಲ ವಿಷವು ಹುಟ್ಟಿ ಜಗತ್ತು ತಲ್ಲಣಗೊಂಡಿತು. ವೇದಸಾಗರವನ್ನು ಕಡೆದಾಗ ವಿಷವು ಹುಟ್ಟಲೇ ಇಲ್ಲ. ದೇವತೆಗಳು ತಮ್ಮ ಸ್ವಾರ್ಥಕ್ಕಾಗಿ ಕಡೆದರು. ಶ್ರೀಗೌಡಪಾದರಾದರೋ ಸಂಸಾರ ಸಾಗರದಲ್ಲಿ ಮುಳುಗಿದ್ದ ಜನರ ಕಲ್ಯಾಣಕ್ಕಾಗಿ, ಪರೋಪಕಾರಕ್ಕಾಗಿ ಶ್ರಮಿಸಿದರು. ದೇವತೆಗಳಿಗೆ ದೊರಕಿದ್ದು ಶುದ್ಧವಾದ ಅಮೃತವಲ್ಲ. ಕಂತ್ರಿ ಅಮೃತ, ಅದನ್ನು ಕುಡಿದರೂ ಅವರಿಗೆ ರಾಕ್ಷಸರ ಹೊಡೆತ ತಪ್ಪಲಿಲ್ಲ. ಪ್ರಳಯ ಕಾಲದಲ್ಲಿ ಸಾವೂ ತಪ್ಪಲಿಲ್ಲ. ನಮ್ಮ ಆಚಾರ್ಯರು ತೆಗೆದ ಆತ್ಮಜ್ಞಾನವೆಂಬ ಅಮೃತವೇ ಶುದ್ಧವಾದದ್ದು. ಇದನ್ನು ಕುಡಿದ ಕ್ಷಣದಿಂದಲೇ ಸಕಲ ಸಂಸಾರಯಾತನೆಗಳೂ ತಪ್ಪಿಹೋಗುತ್ತವೆ ! ಪುನರ್ಜನ್ಮ ಇಲ್ಲವೇ ಇಲ್ಲ ! ಇದು ದೇವತೆಗಳಿಗೂ ಸಿಗದೆ ಹೋದ ಅಮೃತ. ದೇವತೆಗಳು ಸ್ವಾರ್ಥಿಗಳು. ಆಚಾರ್ಯರು ಭೂತದಯೆಯುಳ್ಳ ಕರುಣಾಶಾಲಿಗಳು. ಈ ಆತ್ಮಜ್ಞಾನವೆಂಬ ಅಮೃತವು ಭೂಲೋಕದಲ್ಲಿರುವ ಸಮಸ್ತರಿಗೂ ಲಭ್ಯವಾದದ್ದು. ಈ ಅಮೃತವನ್ನು ಲೋಕಕ್ಕೆ ಹಂಚಲು ಅವಕಾಶ ಮಾಡಿಕೊಟ್ಟ ನನ್ನ ಗುರುಗಳ

ಪಾದಗಳಿಗೆ ಮತ್ತೆ ಮತ್ತೆ ಅಡ್ಡಬಿದ್ದು 'ಪಾದಪಾತ್ರೈರ್ನತೋಽಸ್ಮಿ !' ಭಕ್ತಿಭಾವವನ್ನು ಉತ್ಕೃಷ್ಟವಾಗಿ ವ್ಯಂಜಿಸುವ ಉತ್ತಮ ಕಾವ್ಯವಿದು.

ಭೂತಕಾರುಣ್ಯದಿಂದಲೇ ಪ್ರೇರಿತರಾದ ಶ್ರೀಶಂಕರರೂ ಸಹ ವಿವೇಕ ಚೂಡಾಮಣಿಯೆಂಬ ಚಿಂತಾಮಣಿಯನ್ನು ವೇದಸಾಗರದಿಂದ ತಂದು ಕೊಟ್ಟಿದ್ದಾರೆ. ಸರ್ವಜನರಿಗೂ ಅರ್ಥವಾಗುವ ಸುಲಭಶೈಲಿಯಲ್ಲಿ ಕಾವ್ಯದ ಹೊಳಪಿನಿಂದ ಮುದ್ರಿತವಾದ ಈ ಗ್ರಂಥವನ್ನು ರಚಿಸಿದ್ದಾರೆ. ಈ ಸುಭಾಷಿತಗಳು ಸ್ಮರಣೀಯವಾದವು.

1. **ದುರ್ಲಭಂ ತ್ರಯಮೇವೈತದ್ ದೈವಾನುಗ್ರಹಹೇತುಕಮ್ ।**
**ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥**

– (ವಿವೇಕಚೂಡಾಮಣಿ–೩)

ಈ ಲೋಕದಲ್ಲಿ ಅತ್ಯಂತ ದುಲರ್ಭವಾದವು ಈ ಮೂರು ಮಾತ್ರ ಮನುಷ್ಯಜನ್ಮ, ಮೋಕ್ಷೇಚ್ಛೆ ಮತ್ತು ಉತ್ತಮರಾದ ಸಾಧುಜನರ ಸಹವಾಸ. ಈ ಮೂರು ಈಶ್ವರಾನುಗ್ರಹದಿಂದ ಮಾತ್ರ ದೊರಕತಕ್ಕವು.

2. **ಇತಃ ಕೋ ನ್ವಸ್ತಿ ಮೂಢಾತ್ಮಾ ಯಸ್ತು ಸ್ವಾರ್ಥೇ ಪ್ರಮಾದ್ಯತಿ ।**
**ದುಲರ್ಭಂ ಮಾನುಷಂ ದೇಹಂ ಪ್ರಾಪ್ಯ ತತ್ರಾಪಿ ಪೌರುಷಮ್ ॥**

– (ವಿವೇಕಚೂಡಾಮಣಿ–೫)

ದುರ್ಲಭವಾದ ಮನುಷ್ಯ ದೇಹವು ದೊರಕಿದೆ. ಅದರಲ್ಲಿಯೂ ಪುರುಷನಾಗಿ ಹುಟ್ಟಿದ್ದಾನೆ. ಹೀಗಿರುವಾಗ ತನ್ನ ಸ್ವಾರ್ಥಕ್ಕಾಗಿ ಮಾಡಬೇಕಾದ್ದನ್ನು ಉಪೇಕ್ಷಿಸ ತಕ್ಕವನು ಮೂಢಾತ್ಮನೇ ಸರಿ. ಅವನಿಗಿಂತ ಇನ್ನೊಬ್ಬ ದಡ್ಡನೇ ಇಲ್ಲ !

ಮೋಕ್ಷವು ತನಗಾಗಿ; ಅದು ಸ್ವಾರ್ಥವೇ; ನಿನ್ನ ಉದ್ಧಾರಕ್ಕಾಗಿ ವೇದಾಂತವನ್ನು ಅಭ್ಯಾಸ ಮಾಡು ಎಂದರೆ, ಅದು ಬೇಡ ಎನ್ನತಕ್ಕವರಿದ್ದಾರಲ್ಲ, ಏನು ಆಶ್ಚರ್ಯವಿದು! ಹೊರಗೆ ಹೋಗಿ ಸಾಧುಜನಸಂಪರ್ಕದಿಂದ ವೇದಾಂತವನ್ನು ಅಭ್ಯಾಸ ಮಾಡಲು ಹೆಚ್ಚಿನ ಅವಕಾಶ ಸೌಕರ್ಯಗಳು ಗಂಡಸರಿಗಿರುತ್ತವೆ. ಗೃಹಕೃತ್ಯದಲ್ಲಿ ಮಗ್ನರಾದ ಸ್ತ್ರೀಯರಿಗೆ ಅಂತಹ ಸೌಲಭ್ಯವು ಕಡಿಮೆಯಾದ್ದರಿಂದ ಆಚಾರ್ಯರು '**ಪ್ರಾಪ್ಯ ತತ್ರಾಪಿ ಪೌರುಷಮ್**' ಎಂದು ಹೇಳಿದ್ದಾರೆ. ಸ್ತ್ರೀಯರು ವೇದಾಂತವನ್ನು ಕಲಿಯಬಾರದು

ಎಂದು ಸರ್ವಥಾ ಅಲ್ಲ.

3. **ಅರ್ಥಸ್ಯ ನಿಶ್ಚಯೋ ದೃಷ್ಟೋ ವಿಚಾರೇಣ ಹಿತೋಕ್ತಿತಃ ।**
**ನ ಸ್ನಾನೇನ ನ ದಾನೇನ ಪ್ರಾಣಾಯಾಮಶತೇನ ವಾ ॥**

– (ವಿವೇಕಚೂಡಾಮಣಿ–೧೩)

ವೇದ ಮತ್ತು ಸದ್ಗುರು ಇವರ ಹಿತೋಪದೇಶಗಳಂತೆ ಆತ್ಮತತ್ತ್ವವನ್ನು ವಿಚಾರ ಮಾಡಿ ಸತ್ಯವೇನೆಂಬುದನ್ನು ನಿಶ್ಚಯಿಸಿಕೊಳ್ಳಬೇಕು. ಅದನ್ನು ಬಿಟ್ಟು ತಾನೇ ವಿಚಾರ ಮಾಡುವುದರಿಂದಾಗಲಿ ಇನ್ನಾವ ಮಾರ್ಗದಿಂದಾಗಲಿ ಆತ್ಮಸ್ವರೂಪವನ್ನು ತಿಳಿಯಲು ಶಕ್ಯವಿಲ್ಲ. ಸ್ನಾನ, ದಾನಗಳಿಂದಲೂ ಸಾಧ್ಯವಿಲ್ಲ, ನೂರು ಪ್ರಾಣಾಯಾಮ ಮಾಡಿದರೂ ಆಗುವುದಿಲ್ಲ !

4. **ಋಣಮೋಚನಕರ್ತಾರಃ ಪಿತುಃ ಸಂತಿ ಸುತಾದಯಃ ।**
**ಬಂಧಮೋಚನಕರ್ತಾ ತು ಸ್ವಸ್ಮಾದನ್ಯೋ ನ ಕಶ್ಚನ ॥**

– (ವಿವೇಕಚೂಡಾಮಣಿ–೫೩)

ಸಾಲ ಮಾಡಿ ಬಂಧನದಲ್ಲಿ ಸಿಕ್ಕಿಕೊಂಡಾಗ, ತಂದೆಯನ್ನು ಮಗನೋ ಅಥವಾ ಬಂಧುಮಿತ್ರರೋ ಸಾಲವನ್ನು ತೀರಿಸಿ, ಬಂಧನದಿಂದ ಬಿಡಿಸಬಹುದು. ಆದರೆ ಈ ಸಂಸಾರ ಬಂಧನವಿದೆಯಲ್ಲ ಈ ಬಂಧನದಿಂದ ತಾನೇ ಪ್ರಯತ್ನಿಸಿ ಪಾರಾಗಬೇಕು. ಇನ್ನು ಯಾವನಿಗೂ ಈ ಬಂಧನದಿಂದ ಬಿಡಿಸಲು ಎಂದಿಗೂ ಸಾಧ್ಯವಿಲ್ಲ. **'ಉದ್ಧರೇದಾತ್ಮನಾತ್ಮಾನಮ್'**.

## ಗ್ರಂಥಗಳು

ಆಚಾರ್ಯರ ಗ್ರಂಥಗಳನ್ನು ಭಾಷ್ಯ, ಪ್ರಕರಣ, ಸ್ತೋತ್ರ ಎಂದು ಮೂರು ವಿಭಾಗ ಮಾಡಬಹುದು. ಈ ವಿಭಾಗಗಳಲ್ಲಿಯೂ ಶ್ರೀಶಂಕರಾಚಾರ್ಯ ಕೃತಿಗಳೆಂದು ಬಹಳ ಗ್ರಂಥಗಳು ದೊರಕುತ್ತವೆ. ಸ್ತೋತ್ರವಿಭಾಗ ಒಂದರಲ್ಲಿಯೇ ೨೪೦ ಸ್ತೋತ್ರಗಳು ಆಚಾರ್ಯರ ಹೆಸರಿನಲ್ಲಿ ದೊರೆಯುತ್ತವೆಯೆಂದು ಪರಿಶೋಧಕರು ಬರೆದಿದ್ದಾರೆ! ಶ್ರೀ ಭಗವತ್ಪಾದರೇ ರಚಿಸಿದವೆಂದು ವಿದ್ವತ್ಸಂಮತವಾದ ಕೃತಿಗಳನ್ನು ಕೆಳಗೆ ಕಂಡಂತೆ ವಿಂಗಡಿಸಬಹುದು.

೧. **ಭಾಷ್ಯ:** ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆಯೆಂಬ ಪ್ರಸ್ಥಾನತ್ರಯದ ಭಾಷ್ಯಗಳು. ಉಪನಿಷತ್ತುಗಳಲ್ಲಿ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಎಂಬ ದಶೋಪನಿಷತ್ತುಗಳ ಭಾಷ್ಯಗಳು ಮಾಂಡೂಕ್ಯಕಾರಿಕಾಭಾಷ್ಯ ವಿಷ್ಣುಸಹಸ್ರನಾಮ, ಸನತ್ಸುಜಾತೀಯ, ಲಲಿತಾತ್ರಿಶತೀ ಇವುಗಳ ಭಾಷ್ಯಗಳು.

೨. **ಪ್ರಕರಣ:** ಭಾಷ್ಯಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸದೇ ಇರುವ ಯಾವುದಾದರೊಂದು ವಿಷಯವನ್ನು ವಿಶದವಾಗಿ ವರ್ಣಿಸುವ ಚಿಕ್ಕಗ್ರಂಥಗಳಿಗೆ ಪ್ರಕರಣಗಳೆಂದು ಹೆಸರು. ಆಚಾರ್ಯರು ರಚಿಸಿದ ಕೃತಿಗಳು ಇವು – ದಶಶ್ಲೋಕೀ, ಉಪದೇಶಸಾಹಸ್ರೀ, ವಿವೇಕಚೂಡಾಮಣಿ, ಅಪರೋಕ್ಷಾನುಭೂತಿ, ಶತಶ್ಲೋಕೀ, ಮನೀಷಾಪಂಚಕ, ನಿರ್ವಾಣಷಟ್ಕ, ದೃಗ್‌ದೃಶ್ಯವಿವೇಕ, ಸವಾರ್ತಿಕಪಂಚೀಕರಣ, ಭಜಗೋವಿಂದಸ್ತೋತ್ರ (ಮೋಹಮುದ್ಗರ), ಅದ್ವೈತಪಂಚರತ್ನ, ಏಕಶ್ಲೋಕೀ, ಪ್ರಶ್ನೋತ್ತರರತ್ನಮಾಲಿಕಾ.

೩. **ಸ್ತೋತ್ರ:** ಗಣೇಶಪಂಚರತ್ನ, ಶಿವಾನಂದಲಹರೀ, ಸೌಂದರ್ಯಲಹರೀ, ಶಿವಾಪರಾಧಕ್ಷಮಾಪಣಸ್ತೋತ್ರ, ದೇವ್ಯಪರಾಧಕ್ಷಮಾಪಣಸ್ತೋತ್ರ, ವಿಷ್ಣುಷಟ್ಪದೀ, ದಕ್ಷಿಣಾಮೂರ್ತಿಸ್ತೋತ್ರ, ದಶಶ್ಲೋಕಿ, ಆನಂದಲಹರೀ, ಹರಿಮೀಡೆ, ಇತ್ಯಾದಿ, ಸ್ತೋತ್ರಗಳಲ್ಲಿ ಇವಿಷ್ಟು ಪ್ರಸಿದ್ಧವಾದವು. ಇನ್ನೂ ಕೆಲವು ಆಚಾರ್ಯರ ಕೃತಿಗಳೆಂದು ಹೇಳುತ್ತಾರೆ.

ಇವುಗಳಲ್ಲಿ ಪ್ರಸ್ಥಾನತ್ರಯಭಾಷ್ಯಗಳು ಪ್ರಮುಖವಾದವು. ಕೇವಲ ಈ ಭಾಷ್ಯಗಳ ಸಮೀಚೀನವಾದ ಅಧ್ಯಯನಕ್ಕೆ ಒಂದು ಪುರುಷಾಯುಷ್ಯವೇ ಬೇಕಾದೀತು !

## ಉಪಸಂಹಾರ

ಇನ್ನು ಶ್ರೀಶಂಕರಭಗವತ್ಪಾದರ ಶಾಸ್ತ್ರೋಪಕಾರಗಳನ್ನು ಲೋಕೋಪಕಾರಗಳನ್ನು ಅಸಾಧಾರಣವಾದ ವ್ಯಕ್ತಿತ್ವವನ್ನು ಕುರಿತು ಸ್ವಲ್ಪವಾದರೂ ಸಮೀಕ್ಷಿಸುವುದು ಯುಕ್ತವಾಗಿದೆ.

ವೇದಗಳು ಮಾತ್ರವೇ ಪ್ರಮಾಣಭೂತವಾದ ಶಾಸ್ತ್ರ. ಅವು ಅಪೌರುಷೇಯವಾದ್ದರಿಂದಲೂ ಸರ್ವಜ್ಞನಾದ ಪರಮಾತ್ಮನ ಬಾಯಿಯಿಂದ ನಿಃಸೃತವಾದ್ದರಿಂದಲೂ ವೇದೋಕ್ತವಾದದ್ದನ್ನು ಸತ್ಯವೆಂದು ಗ್ರಹಿಸಬೇಕು. ವೇದವಿರುದ್ಧವಲ್ಲದ ಸ್ಮೃತಿಪುರಾಣಾದಿಗಳೂ ಪ್ರಮಾಣವೇ. ಶ್ರುತಿಸಂಮತವಾದ ತರ್ಕದಿಂದಲೂ ವಸ್ತುಸ್ವರೂಪವನ್ನು ನಿರ್ಣಯಿಸಿಕೊಳ್ಳಬಹುದು. ಈ ಜಗತ್ತಿಗೆ ಚೇತನವೇ ಕಾರಣವೆಂದು ವೇದವು ಸಾರಿರುವುದರಿಂದ ಸೃಷ್ಟಿಕರ್ತನಾದ ಈಶ್ವರನಿದ್ದಾನೆಂದು ಸಿದ್ಧವಾಗುತ್ತದೆ. ಬ್ರಹ್ಮ ಒಂದೇ ಸತ್ಯವಾದದ್ದರಿಂದಲೂ ಈ ಜಗತ್ತು ಈಶ್ವರನ ಇಚ್ಛಾಸೃಷ್ಟಿಯಾದ್ದರಿಂದಲೂ ವೈಶೇಷಿಕರ ಪರಮಾಣು-ಕಾರಣತಾವಾದ, ಸಾಂಖ್ಯರ ಜಡಪ್ರಕೃತಿಕಾರಣತಾವಾದ, ಜಗನ್ನಿತ್ಯತಾವಾದ, ಶೂನ್ಯವಾದ ಇವೆಲ್ಲವೂ ನಿರಾಕೃತವಾಗುತ್ತದೆ. ಆತ್ಮನಿಲ್ಲ ಎಂದು ಆತ್ಮನನ್ನು ನಿರಾಕರಿಸತಕ್ಕವನೇ ಆತ್ಮನಾದ್ದರಿಂದ ನಾಸ್ತಿಕನ ವಾದವೇ ನಗೆಪಾಟಲಾಗುತ್ತದೆ.

ವಿಧಿಯು ಜ್ಞಾಪಕವೇ ಹೊರತು ಕಾರಕವಲ್ಲ, ವಸ್ತುವಿನ ಯಥಾರ್ಥತೆಯನ್ನು ತಿಳಿಸಿ ವಿಧಿಯು ನಿವೃತ್ತವಾಗುತ್ತದೆ. ಮಾಡುವುದು ಬಿಡುವುದು ಕರ್ತೃವಿಗೆ ಸಂಬಂಧಿಸಿದ್ದು, ವೇದದ ಕರ್ಮಕಾಂಡ ಉಪಾಸನಾಕಾಂಡಗಳು ಜ್ಞಾನಕಾಂಡಕ್ಕೆ ಉಪಕಾರಿಗಳು, ಅವು ಸ್ವತಃ ಪ್ರಧಾನವಾದವಲ್ಲ. **'ಜ್ಞಾನದಿಂದಲೇ ಮೋಕ್ಷ'**, ಮೋಕ್ಷವೆಂದರೆ ಯಾವುದೋ ಲೋಕಕ್ಕೆ ಹೋಗುವುದಲ್ಲ. **'ಸ್ವಸ್ವರೂಪಾವಸ್ಥಾನವೇ ಮೋಕ್ಷ'** ಇತ್ಯಾದಿ ವಿಷಯಗಳು ದರ್ಶನಶಾಸ್ತ್ರಕ್ಕೆ ಆಚಾರ್ಯರು ಸಲ್ಲಿಸಿದ ಉಜ್ವಲವಾದ ಕಾಣಿಕೆಗಳು. ಅಲ್ಲದೆ ಬ್ರಹ್ಮಾದ್ವೈತವಾದವು ವೈದಿಕ ಮಹರ್ಷಿಗಳ ಸಂಪ್ರದಾಯದಲ್ಲಿ ಬಂದ ಒಂದು ಮಹತ್ತ್ವದ ಸಿದ್ಧಾಂತ. ಇದರಲ್ಲಿಯೇ ಕೆಲವು ಪ್ರಕ್ರಿಯಾಭೇದಗಳು ಕಾಲಾಂತರದಲ್ಲಿ ಹುಟ್ಟಿಕೊಂಡವು. **'ಲೋಕೋ ಭಿನ್ನರುಚಿಃ'** ಎಂಬ ಗಾದೆಯಂತೆ ಇದನ್ನೇ ಸ್ವಲ್ಪ ಮಾರ್ಪಡಿಸಿ ಶಾಕ್ತಾದ್ವೈತ, ಶಿವಾದ್ವೈತ, ಶುದ್ಧಾದ್ವೈತ – ಮುಂತಾದ ವಾದಗಳನ್ನು ಕೆಲವು ವಿದ್ವಾಂಸರು ಮುಂದಿಟ್ಟರು. ಅವೆಲ್ಲವನ್ನು ಮೂಲೆಗೊತ್ತಿ ಪ್ರಾಚೀನವಾದ ಬ್ರಹ್ಮಾದ್ವೈತವಾದವನ್ನು ಶ್ರೀಗೌಡಪಾದರು ತೋರಿಸಿಕೊಟ್ಟ ಪ್ರಕ್ರಿಯೆಗೆ ಅನುಗುಣವಾಗಿ ಪುನಃ ಪ್ರತಿಷ್ಠಾಪಿಸಿದ ಕೀರ್ತಿ ಶ್ರೀಶಂಕರಾಚಾರ್ಯರಿಗೆ ಸಲ್ಲುತ್ತದೆ.

## ಸರ್ವಮತಸಾಮರಸ್ಯ

ಸೂಕ್ಷ್ಮವಾಗಿ ಪರೀಶೀಲಿಸಿದರೆ ಈ ಅದ್ವೈತದರ್ಶನವು ಸಾಂಖ್ಯಾದಿ ದರ್ಶನಗಳಿಗಾಗಲಿ, ಶೈವವೈಷ್ಣವಾದಿ ಮತಗಳಿಗಾಗಲೀ ವಿರುದ್ಧವಾದದ್ದೇ ಅಲ್ಲ.

**ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।**
**ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥**

ಎಲ್ಲ ದರ್ಶನಗಳೂ, ಮತಗಳೂ ಅದ್ವೈತ ಮಹಾಸಾಗರದಲ್ಲಿ ಲೀನವಾಗಿ ಬಿಡುತ್ತವೆ. ಹೇಗೆಂದರೆ, ಆಚಾರ್ಯರು ತಮ್ಮ ದರ್ಶನದ ಪ್ರಚಾರಕ್ಕಾಗಿ ಇತರರಂತೆ ಯಾವ ನೂತನ ಮತವನ್ನು ಸ್ಥಾಪಿಸಲಿಲ್ಲ, ದೀಕ್ಷೆಯನ್ನಿತ್ತು 'ಶಾಂಕರರು' ಎಂಬ ಒಂದು ಹೊಸ ಗುಂಪನ್ನು ಕಟ್ಟಲಿಲ್ಲ. ಧಾರ್ಮಿಕ ಪದ್ಧತಿಗಳೂ, ಆಚಾರಗಳೂ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದವು. ಅದ್ವೈತವಾದಕ್ಕೂ ಅವುಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದು ಅವರ ನಿಲುವಾಗಿತ್ತು. ಮತಾಂತರೀಕರಣ ವೆಂಬುದು ಕನಸಿನಲ್ಲಿಯೂ ಸುಳಿಯಲಿಲ್ಲ. ಇನ್ನು ಮತನಿಮಿತ್ತವಾದ ದ್ವೇಷಕ್ಕೆ ನಿಮಿತ್ತವಾದರೂ ಏನು? 'ಶಂಕರಾಚಾರ್ಯರು ಬೌದ್ಧರನ್ನು ಹಿಂಸಿಸಿ ದೇಶಾಂತರಕ್ಕೆ ಓಡಿಸಿದರು' ಎಂದು ಕೆಲವರು ಈಚೆಗೆ ಹಲುಬಿರುವುದುಂಟು. ಇದು ಅಜ್ಞಾನ ದಿಂದಲೋ ಅಥವಾ ದ್ವೇಷಬುದ್ಧಿಯಿಂದಲೋ ಮಾಡಿದ ಮಿಥ್ಯಾರೋಪ. ಭರತ ಖಂಡದಲ್ಲಿ ಸರ್ವತ್ರ ವ್ಯಾಪಿಸಿದ್ದ ಒಂದು ಮತವನ್ನು ಒಬ್ಬ ಬಿಡಿಸಂನ್ಯಾಸಿಯು, ಓಡಿಸಲು ಸಾಧ್ಯವೇ? ಎಂಬುದನ್ನು ಸಹ ಈ ಜನರು ಪರ್ಯಾಲೋಚಿಸಲಿಲ್ಲ. ಐತಿಹಾಸಿಕ ಸತ್ಯವೇನೆಂದರೆ, ವಜ್ರಯಾನವೆಂಬ ಒಂದು ವಾಮಾಚಾರದ ದುಷ್ಟ ಪದ್ಧತಿ ಬೌದ್ಧಮತದಲ್ಲಿ ತಲೆಯೆತ್ತಿ ಸಮಾಜದ ದ್ವೇಷವನ್ನು ಗಳಿಸಿಕೊಂಡಿತು. ಸಂಘಾರಾಮಗಳಲ್ಲಿ ಸಾವಿರಾರು ಭಿಕ್ಷುಗಳು ಹೊಟ್ಟೆಪಾಡಿಗಾಗಿ ಸೇರಿಕೊಂಡು, ಭಿಕ್ಷಾನ್ನಕ್ಕಾಗಿ ಅಲೆಯುತ್ತ ಪ್ರಜೆಗಳಿಗೆ ಹೊರೆಯಾದರು. ಕೇರಳ ಮತ್ತು ಬಿಹಾರಗಳಲ್ಲಿದ್ದ ಸಂಘಾರಾಮಗಳನ್ನು ಮುಸ್ಲಿಮರು ಧ್ವಂಸಮಾಡಿ ಎಲ್ಲ ಭಿಕ್ಕುಗಳನ್ನು ಮುಸ್ಲಿಮರನ್ನಾಗಿ ಪರಿವರ್ತಿಸಿದರು ಎಂದು ಇತಿಹಾಸವು ದಾಖಲಿಸಿದೆ. ಅಲ್ಲದೆ ಬೌದ್ಧರ ನೈರಾತ್ಮ್ಯವಾದವು ಭಾರತೀಯರಿಗೆ ಪ್ರಿಯವಾಗದೆ

ಹೋಯಿತು. ಇತ್ಯಾದಿ ಕಾರಣಗಳಿಂದ ಈ ಬೌದ್ಧಮತವು ರಾಷ್ಟ್ರದಲ್ಲಿ ನೆಲೆಯಿಲ್ಲದೆ ತಾನಾಗಿ ದೇಶಭ್ರಷ್ಟವಾಯಿತು. ಬುದ್ಧನ ಕಾಲದಲ್ಲಿಯೇ ಪ್ರಚುರವಾದ ಜೈನಮತವು ವೇದವಿರುದ್ಧವೆಂದು ಆಚಾರ್ಯರು ಅದನ್ನು ಖಂಡಿಸಿದ್ದಾರೆ. ಆ ಜೈನಮತವು ಇಂದಿಗೂ ಭಾರತದಲ್ಲಿ ಭದ್ರವಾಗಿ ಉಳಿದಿರುವುದು ಹೇಗೆ? ಎಂದು ಈ ಆರೋಪಕರ್ತರು ಚಿಂತಿಸಲಿ.

ಇನ್ನೊಂದು ಸಂಗತಿಯು ಗಮನಾರ್ಹವಾದದ್ದು. ಬೌದ್ಧಮತವನ್ನು ವಿಶೇಷವಾಗಿ ಖಂಡಿಸಿದವರು ಕುಮಾರಿಲಭಟ್ಟರು. ಅವರು ಸ್ವಲ್ಪ ಕಾಲ ಒಬ್ಬ ಬೌದ್ಧಗುರುವಿನ ಶಿಷ್ಯರಾಗಿದ್ದರಂತೆ. ಏವಂಚ ಬೌದ್ಧಮತ ಖಂಡನೆಯಿಂದ ಗುರುದ್ರೋಹವಾಯಿತೆಂದು ಬಗೆದು ತಮಗೆ ತಾವೇ ಪ್ರಾಯಶ್ಚಿತ್ತವನ್ನು ವಿಧಿಸಿ ಕೊಂಡರು. ಎಂತಹ ಪ್ರಾಯಶ್ಚಿತ್ತ? ವಿಖ್ಯಾತವಿದ್ವಾಂಸರಾಗಿದ್ದು ಧರ್ಮನಿಷ್ಠರಾದ ಆ ಕರ್ಮಠರು ತುಷಾಗ್ನಿಮಧ್ಯದಲ್ಲಿ ಕುಳಿತು ಕ್ರಮವಾಗಿ ಬೆಂದು ದೇಹತ್ಯಾಗ ಮಾಡಿದರು ! ಚಾತುರ್ವರ್ಣ್ಯವನ್ನು ಸಮರ್ಥಿಸುತ್ತಿದ್ದ ಈ ವೈದಿಕ ಬ್ರಾಹ್ಮಣನ ಧರ್ಮನಿಷ್ಠೆಗೆ ಸಮಾನವಾದ ಇನ್ನೊಂದು ಉದಾಹರಣೆಯನ್ನು ಈ ಜಗತ್ತು ಕಂಡಿದೆಯೇನು?

ಶ್ರೀಭಗವತ್ಪಾದರು ಅನ್ಯಮತಗಳನ್ನು ಖಂಡಿಸಿ, ತಮ್ಮ ಸಿದ್ಧಾಂತವನ್ನು ಸ್ಥಾಪಿಸಿರುವುದು ಪರಮಾರ್ಥವಾದ ಸತ್ಯವನ್ನು ಜನತೆಯ ಶ್ರೇಯಸ್ಸಿಗಾಗಿ ತೋರಿಸಿಕೊಡಬೇಕೆಂಬ ಉದ್ದೇಶದಿಂದಲೇ ಹೊರತು ಅನ್ಯಮತದ್ವೇಷದಿಂದಲ್ಲ. ಜ್ಞಾನದಿಂದಲೇ ಮೋಕ್ಷವೆಂದು ಸಾಧಿಸುವುದಕ್ಕಾಗಿ, ಅದ್ವೈತಿಗಳೇ ಹೇಳುತ್ತಿದ್ದ ಜ್ಞಾನಕರ್ಮಸಮುಚ್ಚಯವಾದವನ್ನು ಖಂಡಿಸಿದರು. **ಸತ್ಯಾರ್ಥಾನ್ವೇಷಣೆಯೇ** ಅವರ ಧ್ಯೇಯವಾದ್ದರಿಂದ ಬೃಹದಾರಣ್ಯಕಭಾಷ್ಯದಲ್ಲಿ ಹೀಗೆ ನುಡಿದಿದ್ದಾರೆ: **'ತಸ್ಮಾತ್ ಶ್ರುತ್ಯರ್ಥಕಲ್ಪನಾಕುಶಲಾಃ ಸರ್ವ ಏವ ಉಪನಿಷದರ್ಥಮನ್ಯಥಾ ಕುರ್ವಂತಿ! ತಥಾಪಿ ವೇದಾರ್ಥಶ್ಚೇತ್ ಸ್ಯಾತ್ ಕಾಮಂ ಭವತು ನ ಮೇ ದ್ವೇಷಃ'** (ಬೃಹ.ಉ.೨-೩-೬). 'ಶ್ರುತ್ಯರ್ಥಕಲ್ಪನಾ ಕುಶಲರಾದ ಇತರರೆಲ್ಲರೂ ಉಪನಿಷತ್ತುಗಳ ಅರ್ಥವನ್ನು ಅನ್ಯಥಾ ಮಾಡಿಹೇಳುತ್ತಿದ್ದಾರೆ. ಆದರೂ ಅವರು ಹೇಳುವುದೇ ವೇದಾರ್ಥವಾಗಿದ್ದರೆ ಹಾಗೆಯೇ ಆಗಲಿ, ನನಗೆ ದ್ವೇಷವೇನೂ ಇಲ್ಲ' ಈ ಬಗೆಯ ಸತ್ಯಸಂಕಲ್ಪದ ಧೀರವಾಣಿಯನ್ನು ಇನ್ನಾರು ನುಡಿದಾರು.

ಸಾಂಖ್ಯಾದಿದರ್ಶನಗಳೆಲ್ಲವೂ ದ್ವೈತದರ್ಶನಗಳಾದ್ದರಿಂದ ವೇದಸಂಮತವಾದ ವಲ್ಲವೆಂಬುದು ಅವರ ನಿಲುವು. ಏಕೆಂದರೆ, ನಾನು–ನೀನು–ಅವನು ಎಂಬ ಭೇದವೂ ಜೀವಾತ್ಮನು ಪರಮಾತ್ಮನಲ್ಲವೆಂಬ ದ್ವೈತಬುದ್ಧಿಯೂ ಜಗತ್ತು ಸತ್ಯವೆಂಬ ತಿಳಿವಳಿಕೆಯೂ ಲೋಕಸಿದ್ಧವಾದದ್ದು. ಕಣ್ಣಿಗೆ ಕಾಣುವ ಈ ದ್ವೈತವನ್ನು ಶಾಸ್ತ್ರವು ತಿಳಿಸಿಕೊಡಬೇಕೆ? **"ನ ಚ ಉಪೇದಶಾರ್ಹಂ ದ್ವೈತಂ, ಜಾತಮಾತ್ರ ಪ್ರಾಣಿಬುದ್ಧಿ–ಗಮ್ಯತ್ವಾತ್"** (ಬೃಹ.ಉ. ೫ – ೧೧) ಎಂದು ಆಚಾರ್ಯರೇ ನುಡಿದಿದ್ದಾರೆ.

ಕಪಿಲಕಣಾದಾದಿ ಋಷಿಗಳಿಗೆ ಈ ಸತ್ಯವು ತಿಳಿಯದೆ ಇಲ್ಲ. ಅವರೇನು ಅಜ್ಞರಲ್ಲ. ಜ್ಞಾನಾಪೇಕ್ಷಿಗಳಾದ ಜನರ ಅರ್ಹತೆಗೆ ಅನುಗುಣವಾಗಿ ಬೇರೆ ಬೇರೆ ಶಾಸ್ತ್ರಗಳನ್ನು ರಚಿಸಬೇಕಾಯಿತು. ವಿದ್ಯಾರ್ಥಿಗಳ ತರಗತಿಗಳಿಗೆ ತಕ್ಕಂತೆ ಪಠ್ಯಪುಸ್ತಕಗಳನ್ನು ರಚಿಸಿದ ಹಾಗೆ. ಅವೆಲ್ಲವೂ ಸೋಪಾನಕ್ರಮದಿಂದ ಮೇಲೆ ಮೇಲಕ್ಕೆ ಕರೆದೊಯ್ದು ದೇವಸ್ಥಾನದ ಗರ್ಭಗೃಹದಲ್ಲಿರುವ ಅದ್ವಯಾತ್ಮನನ್ನು ದರ್ಶನಮಾಡಿಸತಕ್ಕವು. ಇದನ್ನು ಸೂತಸಂಹಿತೆಯು ಸ್ಪಷ್ಟವಾಗಿ ತಿಳಿಸಿದೆ.

**ಸೋಪಾನಕ್ರಮತೋ ದೇವೋ ವೇದಮಾರ್ಗಸ್ಯ ಕಾರಣಮ್ ।**
**ವೇದಮಾರ್ಗಸ್ಥಿತೋದೇವಃ ಸಾಕ್ಷಾನ್ಮುಕ್ತೇಸ್ತು ಕಾರಣಮ್ ॥**

**ತತ್ರಾಪಿ ಕರ್ಮಮಾರ್ಗಸ್ಥೋ ಜ್ಞಾನಶ್ರದ್ಧಾಪ್ರದೋ ಹರಃ ।**
**ಜ್ಞಾನಮಾರ್ಗಸ್ಥಿತಃ ಶಂಭುರ್ಜ್ಞಾನ ದ್ವಾರೇಣ ಮೋಕ್ಷದಃ ॥**

– (ಯಜ್ಞವೈಭವ ಖಂಡ, ೨೨ನೆಯ ಅಧ್ಯಾಯ)

ಇದರ ತಾತ್ಪರ್ಯವೇನೆಂದರೆ,

"ಯಾವ ಮತದವನೇ ಆಗಿರಲಿ ಭಗವಂತನಲ್ಲಿ ಅನನ್ಯವಾದ ಭಕ್ತಿಯನ್ನಿಟ್ಟಿದ್ದರೆ, ಭಗವಂತನೇ ಆ ಭಕ್ತನನ್ನು ಸೋಪಾನುಕ್ರಮದಿಂದ ವೇದೋಕ್ತಮಾರ್ಗಕ್ಕೆ ಕರೆದೊಯ್ಯುತ್ತಾನೆ. ವೇದೋಕ್ತವಾದ ಕರ್ಮಮಾರ್ಗದಲ್ಲಿ ನಿರತನಾಗಿದ್ದರೆ, ಸ್ವಾಮಿಯೇ ಆತನನ್ನು ಕ್ರಮವಾಗಿ ಜ್ಞಾನಮಾರ್ಗಕ್ಕೆ ಹತ್ತಿಸುತ್ತಾನೆ. ಪರಮೇಶ್ವರನಿರುವುದು ಆ ಜ್ಞಾನಮಾಗದಲ್ಲಿ. ಆತನು ಭಕ್ತನಿಗೆ ಜ್ಞಾನದ್ವಾರಾ ಕ್ರಮವಾಗಿ ಮೋಕ್ಷವನ್ನೀಯುತ್ತಾನೆ."

ಆದ್ದರಿಂದ ಶ್ರೀಗೌಡಪಾದರು ಅದ್ವೈತಿಗಳಿಗೆ ಯಾವ ದ್ವೈತಿಯೊಡನೆಯೂ ವಿರೋಧವಿಲ್ಲವೆಂದು ನುಡಿದಿದ್ದಾರೆ–

**ಸ್ವಸಿದ್ಧಾಂತವ್ಯವಸ್ಥಾಸು ದ್ವೈತಿನೋ ನಿಶ್ಚಿತಾ ದೃಢಮ್ ।**
**ಪರಸ್ಪರಂ ವಿರುಧ್ಯಂತೇ ತೈರಯಂ ನ ವಿರುಧ್ಯತೇ ॥**
**ಅದ್ವೈತ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ ।**
**ತೇಷಾಮುಭಯಥಾದ್ವೈತಂ ತೇನಾಯಂ ನ ವಿರುಧ್ಯತೇ ॥**

– (ಮಾಂಡೂಕ್ಯಕಾರಿಕಾ ೩–೧೭–೧೮)

ಇದರ ತಾತ್ಪರ್ಯ ಹೀಗಿದೆ: ಸಾಂಖ್ಯಾದಿದ್ವೈತಿಗಳು ತಮ್ಮ ಸಿದ್ಧಾಂತವನ್ನು ತಮಗೆ ತೋರಿದಂತೆ ಕಲ್ಪಿಸಿಕೊಂಡಿದ್ದಾರೆ. ತಮ್ಮ ಸಿದ್ಧಾಂತವೇ ಸರಿಯೆಂದು ಪರಸ್ಪರ ಜಗಳವಾಡುತ್ತಾರೆ. ಅದ್ವೈತಿಗಳಿಗೆ ಅವರೊಡನೆ ವಿರೋಧವೇನೂ ಇಲ್ಲ. ಏಕೆಂದರೆ ಈ ಅದ್ವೈತವು ಪರಮಸತ್ಯವನ್ನು ತಿಳಿಸುವ ಸಮ್ಯಗ್‌ದರ್ಶನ. ದ್ವೈತವು ಈ ಅದ್ವಯಬ್ರಹ್ಮದಿಂದ ಹೊರಬಂದ ವಿವರ್ತ. ಈ ವಿವರ್ತಗಳು ನಾನಾ ರೂಪಗಳಾದ್ದರಿಂದ ಬಡಿದಾಡಬಹುದು. ಮಣ್ಣಿನಿಂದ ಗಡಿಗೆ, ಹಣತೆ, ಹರವಿ, ಹೂಜಿಗಳು ಒಂದನ್ನೊಂದರಂತೆ ಘಟ್ಟಿಸಬಹುದು. ಆದರೆ ಗಡಿಗೆ, ಹಣತೆ ಮೊದಲಾದವು ತಮಗೆ ಕಾರಣವಾದ ಮಣ್ಣಿನೊಡನೆ ಹೋರಾಡಲಾರವು !

ಅದ್ವೈತಿಯು ಜಗತ್ತಿನ ವ್ಯಾವಹಾರಿಕ ಸತ್ಯತ್ವವನ್ನು ಒಪ್ಪಿರುವುದರಿಂದ ಜಗತ್ತು ಸತ್ಯವೆನ್ನುವ ದ್ವೈತಿಗಳೊಡನೆ ವಿರೋಧವಿಲ್ಲ. ಜೀವಾತ್ಮನು ಪರಮಾತ್ಮನಿಗೆ ಅಧೀನನೆಂಬ ವಾದವು ಭಕ್ತಿಮಾರ್ಗದಲ್ಲಿರುವ ಸಾಧಕನಿಗೆ ಅವಶ್ಯಕವಾದದ್ದರಿಂದ ಆ ವಿಷಯದಲ್ಲಿಯೂ ಕಲಹವಿಲ್ಲ. ಈಶ್ವರನು ನಿರಾಕಾರನೆಂದು ಕ್ರಿಶ್ಚಿಯನ್ನರೂ ಮುಸ್ಲಿಮರೂ ಹೇಳಿದರೆ, ನಿರ್ವಿಶೇಷಬ್ರಹ್ಮವನ್ನೊಪ್ಪುವ ಅದ್ವೈತಿಯು 'ಹೌದು' ಎನ್ನುತ್ತಾನೆ. ಈತನು ಸಗುಣಬ್ರಹ್ಮವನ್ನು ಅಂಗೀಕರಿಸಿರುವುದರಿಂದ ಈಶ್ವರನು ಸಾಕಾರನೆಂದರೂ, ಸಮ್ಮತಿಸುತ್ತಾನೆ. ಶಿವ, ವಿಷ್ಣು, ಗಣೇಶ, ಶಕ್ತಿ ಪಾರ್ವತಿ, ಕಾಳಿ, ಲಕ್ಷ್ಮಿ, ಸರಸ್ವತಿ – ಎಂದು ಎಷ್ಟು ದೇವತಾಭೇದಗಳನ್ನು ಕಲ್ಪಿಸಿ, ಒಬ್ಬೊಬ್ಬನು ಒಂದೊಂದನ್ನು ಅಧಿಕವೆಂದು ಹೇಳಿದರೂ ಸಮ್ಮತಿಯುಂಟು. **'ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್'** ಎಂಬುದು ಅದ್ವೈತಿಯ ತತ್ತ್ವವಾಗಿರುತ್ತದೆ. ಹೀಗೆ ಸರ್ವಮತ ಸಾಮರಸ್ಯವನ್ನು ಬೋಧಿಸುವ ಅದ್ವೈತ

ಸಿದ್ಧಾಂತವು ಯಾರೊಡನೆಯೂ ವಿರೋಧವನ್ನು ಕಟ್ಟಿಕೊಳ್ಳುವುದಿಲ್ಲ.

## ವೈದಿಕ ಸಿದ್ಧಾಂತದ ಪುನರುಜ್ಜೀವನ

ಅನಾದಿಕಾಲದಿಂದ ಈ ರಾಷ್ಟ್ರದಲ್ಲಿ ಪ್ರವೃತ್ತವಾಗಿದ್ದ ವೈದಿಕ ಸಿದ್ಧಾಂತಕ್ಕೆ ವಿವಿಧಕಾರಣಗಳಿಂದ ಕ್ಷೀಣಸ್ಥಿತಿಯೊದಗಿತು. ಅದನ್ನು ಪುನರುನ್ನತಿಗೆ ಏರಿಸಬೇಕೆಂದು ಕುಮಾರಿಲಭಟ್ಟರೇ ಮೊದಲಾದ ವಿದ್ವಾಂಸರು ಪ್ರಯತ್ನಿಸುತ್ತಲೇ ಇದ್ದರು. ಕ್ಷತ್ರಿಯ ರಾಜರಿಲ್ಲದ್ದರಿಂದ ವೈದಿಕ ಧರ್ಮಕ್ಕೆ ಯೋಗ್ಯವಾದ ಬೆಂಬಲ ದೊರೆಯಲಿಲ್ಲ. ತಾಂತ್ರಿಕ ಮತ್ತು ಅವೈದಿಕಮತಗಳು ಪ್ರಬಲವಾಗುತ್ತಲೇ ಇದ್ದವು. ಜ್ಞಾನಕಾಂಡದ ಅದ್ವೈತದರ್ಶನವಂತೂ ತಾರ್ಕಿಕರ ಹೊಡೆತದಿಂದ ತತ್ತರಿಸಿ ಹೋಗಿತ್ತು. ಈ ಸಮಯದಲ್ಲಿ ಭಗವಂತನ ಸೃಷ್ಟಿನಿಯಮದ ಪ್ರಕಾರ ವೈದಿಕಧರ್ಮವನ್ನು ಉದ್ಧರಿಸುವುದಕ್ಕಾಗಿ ಶ್ರೀಶಂಕರಭಗವತ್ಪಾದರ ಆವಿರ್ಭಾವ ವಾಯಿತು. ಅವರು ಅಖಂಡ ಭಾರತವನ್ನು ಸರ್ವತ್ರ ಸಂಚರಿಸಿ, ಚಳಿಗಾಲದಲ್ಲಿ ಎಲೆಯುದುರಿ ಮುದುರಿಹೋದ ವೃಕ್ಷಕ್ಕೆ ವಸಂತಕಾಲದಂತೆ ಬಂದು, ವೇದವೃಕ್ಷವು ಶಾಖೋಪಶಾಖೆಗಳಾಗಿ ಚಿಗುರುವಂತೆ ನವಚೈತನ್ಯವನ್ನು ತುಂಬಿದರು. ವೇದವೃಕ್ಷದ ಪರಿಸರದಲ್ಲಿ ಬೆಳೆದು ನಿಂತಿದ್ದ ಮುಳ್ಳುಬಳ್ಳಿಗಳನ್ನು ತೆಗೆದುಹಾಕಿ ನೆಲವನ್ನು ಸ್ವಚ್ಛಗೊಳಿಸಿದರು. ಧರ್ಮಪಾಲಕರಾದ ಕ್ಷತ್ರಿಯ ರಾಜರು ಇಲ್ಲದ್ದರಿಂದ ಮುಂದೆ ಮುಳ್ಳುಬಳ್ಳಿಗಳು ಮತ್ತೆ ಬೆಳೆಯಬಹುದೆಂಬ ಚಿಂತೆ ಅವರಿಗೆ ಬರದೇ ಇರಲಿಲ್ಲ. ದೂರಗಾಮಿಯಾದ ಸೂಕ್ಷ್ಮದೃಷ್ಟಿಯಿಂದ ಇದೆಲ್ಲವನ್ನು ಪರ್ಯಾಲೋಚಿಸಿ, ಈ ರಾಷ್ಟ್ರದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಧರ್ಮಪರಿಪಾಲನೆಗಾಗಿ ಸ್ಥಾಪಿಸಿದರು. ಸುರೇಶ್ವರರೇ ಮೊದಲಾದ ಪ್ರಮುಖ ಶಿಷ್ಯರನ್ನು ಆ ಮಠಗಳಿಗೆ ಅಧ್ಯಕ್ಷರೆಂದು ನಿಯೋಜಿಸಿದರು. ವಿಶಾಲವಾದ ಈ ರಾಷ್ಟ್ರಕ್ಕೆ ನಾಲ್ಕು ಮಠಗಳು ಸಾಲದೆ ಹೋದ್ದರಿಂದ ಆಚಾರ್ಯರ ಇತರ ಶಿಷ್ಯರು ರಾಷ್ಟ್ರದ ಇತರ ಕಡೆಗಳಲ್ಲಿಯೂ ಯಥಾಯೋಗ್ಯವಾಗಿ ಬೇರೆ ಬೇರೆ ಮಠಗಳನ್ನು ಸ್ಥಾಪಿಸಿದರು. ವೈದಿಕ ಧರ್ಮದ ರಕ್ಷಣೆ ಅದ್ವೈತಸಿದ್ಧಾಂತದ ಪೋಷಣೆ ಮೊದಲಾದ ಕಾರ್ಯಗಳು ಮಠಾಧಿಪತಿಗಳ ಕಾರ್ಯವ್ಯಾಪ್ತಿಗೆ ಸೇರಿದವು. ಆಚಾರ್ಯರ ಈ ಸೂಕ್ಷ್ಮದೃಷ್ಟಿಯ ಪರಿಣಾಮವಾಗಿ ಇನ್ನೂ ಈ ಪುರಾತನ ವೇದವೃಕ್ಷವು ಜೀವಂತವಾಗಿ ಉಳಿದಿದೆ.

## ರಾಷ್ಟ್ರೈಕತಾದೃಢೀಕರಣ

ನಾವು ಸಂಕಲ್ಪ ಮಾಡುವಾಗ **'ಭರತಖಂಡೇ, ಭಾರತವರ್ಷೇ'** ಎಂದು ಹೇಳುತ್ತಲೇ ಇದ್ದೇವೆ. ಭಾರತವು ಒಂದು ರಾಷ್ಟ್ರವೆಂಬ ಭಾವನೆ ಹೊಸದೇನಲ್ಲ. ಈ ದೇಶದಲ್ಲಿ ಕೋಸಲ, ವಿದೇಹ, ಮಗಧ, ಕೇರಳ–ಮುಂತಾದ ರಾಜ್ಯಗಳಲ್ಲಿ ಸ್ವತಂತ್ರರಾದ ಬೇರೆ ಬೇರೆ ರಾಜರಿದ್ದರೆಂಬುದು ರಾಮಾಯಣ, ಮಹಾಭಾರತಗಳಿಂದಲೂ ಈಚೆಗೆ ಬರೆದ ಇತಿಹಾಸಗಳಿಂದಲೂ ಗೊತ್ತಾಗುತ್ತದೆ. ಈ ರಾಷ್ಟ್ರದ ಏಕತೆಯು ಯಾವ ನಿಮಿತ್ತದಿಂದ ಉದ್ಭವಿಸಿತು? ಪುರಾಣಪ್ರಸಿದ್ಧ ನಾದ ಭರತನೆಂಬ ಚಕ್ರವರ್ತಿಗೊಳಪಟ್ಟಿದ್ದರಿಂದ ಏಕರಾಷ್ಟ್ರವಾಗಿದೆಯೆಂಬುದು ಅಷ್ಟು ಸಮಂಜಸವಾಗದು. ಒಂದು ವೇಳೆ ಹಾಗಾಗಿದ್ದರೂ ಇಷ್ಟು ದೀರ್ಘಕಾಲದವರೆಗೆ ಏಕರಾಷ್ಟ್ರವಾಗಿಯೇ ಉಳಿದುಕೊಂಡು ಬಂದದ್ದು ಹೇಗೆ? ಇದು ಅತ್ಯಂತ ವಿಶಾಲವಾದ ರಾಷ್ಟ್ರ. ನಾನಾ ಭಾಷೆಗಳನ್ನಾಡುವ ಜನರಿದ್ದಾರೆ. ಸ್ವತಂತ್ರರಾದ ಅನೇಕ ರಾಜರು ವಿಭಿನ್ನ ರಾಜ್ಯಗಳಲ್ಲಿ ಆಡಳಿತ ನಡೆಸಿದ್ದಾರೆ. ಆದ್ದರಿಂದ ಇದು ರಾಜಕೀಯವಾದ ಏಕತೆಯಲ್ಲ. ಏಕರಾಷ್ಟ್ರತೆಗೆ ನಿಬಂಧನ ವಾದದ್ದು ವೇದಗಳಿಂದಲೂ ಸಂಸ್ಕೃತ ಭಾಷಾ ಸಾಹಿತ್ಯದಿಂದಲೂ ನಿರ್ಮಿತವಾದ ವೈದಿಕ ಸಂಸ್ಕೃತಿ. ದಕ್ಷಿಣ ಸಮುದ್ರದಿಂದ ಉತ್ತರದ ಹಿಮಾಲಯದವರೆಗೂ ಈ ಸಂಸ್ಕೃತಿಯ ಪ್ರಬಲ ವ್ಯಾಪ್ತಿಯನ್ನು ಅಲ್ಲಗಳೆಯಲಾಗುವುದೇ ಇಲ್ಲ. ಶಿವ, ವಿಷ್ಣು ಮುಂತಾದ ದೇವತೆಗಳ ಪೂಜೆ, ದೇವಾಲಯಗಳು, ವಿಗ್ರಹಾರಾಧನೆ, ಪುನರ್ಜನ್ಮ ವಿಶ್ವಾಸ, ರಾಮೇಶ್ವರ, ಕಾಶಿ ಮೊದಲಾದವು ತೀರ್ಥಕ್ಷೇತ್ರಗಳೆಂಬ ಆದರ, ವಿವಾಹಾದಿ ಸಂಸ್ಕಾರಗಳು, ಧಾರ್ಮಿಕ ವಿಧಿಗಳಲ್ಲಿ ಏಕರೂಪತೆ, ರಾಮಾಯಣ, ಮಹಾಭಾರತಾದಿಗಳು ಪುಣ್ಯಗ್ರಂಥಗಳೆಂಬ ನಂಬಿಕೆ ಮುಂತಾದವುಗಳು ಈ ವೈದಿಕ ಸಂಸ್ಕೃತಿಯ ವಿವಿಧ ಮುಖಗಳು. ಈ ಸಂಸ್ಕೃತಿಯ ಪ್ರಭಾವದಿಂದ ಭಾರತೀಯರಾದ ಹಿಂದೂ ಜನರ ಆಚಾರವಿಚಾರ ವಿಶ್ವಾಸಗಳು ಏಕರೂಪತೆ ಯನ್ನು ಇನ್ನು ಕಳೆದುಕೊಂಡಿಲ್ಲ. ಬೌದ್ಧಜೈನಾದಿ ಸಾಹಿತ್ಯಗಳು ಸಂಸ್ಕೃತಭಾಷಾ ಪ್ರಭಾವಿತಗಳೆಂಬುದು ಸರ್ವವಿದಿತ.

ಶ್ರೀ ಶಂಕರಾಚಾರ್ಯರ ಕಾಲದಲ್ಲಿ ಸಂಸ್ಕೃತವು ರಾಷ್ಟ್ರವ್ಯಾಪಿಯಾಗಿತ್ತು. ಎಲ್ಲ ಪ್ರಾಂತದ ಜನರಿಗೂ ಅರ್ಥವಾಗುತ್ತಿತ್ತು. ಆದ್ದರಿಂದಲೇ ಆಚಾರ್ಯರು ಸಂಸ್ಕೃತ

ಭಾಷೆಯಲ್ಲಿಯೇ ಗ್ರಂಥಗಳನ್ನು ರಚಿಸಿದರು. ಸಂಸ್ಕೃತವು ಸರ್ವತ್ರ ಅರ್ಥವಾಗುತ್ತಿದ್ದುದರಿಂದಲೇ ಅವರು ಭರತಖಂಡದಲ್ಲಿ ಸರ್ವತ್ರ ಸಂಚರಿಸಿ ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡಲು ಸಾಧ್ಯವಾಯಿತು. ಈ ಸಿದ್ಧಾಂತದ ಪ್ರಭಾವವು ಸರ್ವತ್ರ ನೆಲೆಯೂರಿತು. ಸಂಸ್ಕೃತ ಸಾಹಿತ್ಯವು ಸಮೃದ್ಧವಾಗಿ ಬೆಳೆಯಿತು.

ವೇದಾಂತವು ಮಾನವ ಜನ್ಮವನ್ನು ನಿಕೃಷ್ಟವಾಗಿ ಭಾವಿಸುವುದಿಲ್ಲ. ನರಜನ್ಮವು ಈಶ್ವರಾನುಗ್ರಹದಿಂದಲೇ ಬಂದಿದೆಯೆಂದೂ ಇದನ್ನು ಸದುಪಯೋಗಪಡಿಸಿಕೊಳ್ಳಬೇಕೆಂದೂ ಬೋಧಿಸುತ್ತದೆ. ಮಾನವರನ್ನು **'ಅಮೃತಸ್ಯ ಪುತ್ರಾಃ** – ಪರಮಾತ್ಮನ ಮಕ್ಕಳೆ !' ಎಂದು ಸಂಬೋಧಿಸುತ್ತದೆ. **'ಆಶಿಷ್ಠೋ ದ್ರಢಿಷ್ಠೋಬಲಿಷ್ಠಃ'** ಆಗಿ ಬಾಳಬೇಕೆಂದು ಉಪದೇಶಿಸುತ್ತದೆ. ಸರ್ವರಿಗೂ ಸಾಧನದಿಶೆಯಲ್ಲಿ ಕರ್ಮಯೋಗವೇ ಅತ್ಯುತ್ತಮ ಮಾರ್ಗವಾದ್ದರಿಂದ **'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಗ್ಂ ಸಮಾಃ'** ಎಂದು ಈಶಾವಾಸ್ಯವು ಹಿತೋಪದೇಶವನ್ನಿತ್ತಿದೆ. ತೈತ್ತಿರೀಯಉಪನಿಷತ್ತು "**ಅಧ್ಯಯನ ಪ್ರವಚನಗಳನ್ನು ಬಿಡಕೂಡದು. ಇದೇ ತಪಸ್ಸು**" ಎಂದು ವಿಧಿಸುತ್ತದೆ. ಉಪನಿಷತ್ತಿನಲ್ಲಿ ಪ್ರವಹಣ ಜೈವಲಿ, ಅಶ್ವಪತಿ – ಮೊದಲಾದ ಜ್ಞಾನಿಗಳ ನಿರೂಪಣೆ ಇದೆ. ಶ್ರೀಕೃಷ್ಣನು "**ಏವಂ ಪರಂಪರಾಪ್ರಾಪ್ತಮಿದಂ ರಾಜರ್ಷಯೋ ವಿದುಃ**" ಎಂದು ಸ್ಪಷ್ಟವಾಗಿ ನುಡಿದಿದ್ದಾನೆ.

ಇದರ ತಾತ್ಪರ್ಯವೇನೆಂದರೆ ವೇದಾಂತವು ವೃದ್ಧರಿಗೋ ರೋಗಿಗಳಿಗೋ ಕೈಲಾಗದವರಿಗೋ ಸೋಮಾರಿಗಳಿಗೋ ಹೇಳಿದ್ದಲ್ಲ. ತಲೆಯಲ್ಲಿ ಬುದ್ಧಿ ಇರುವ ಸಕಲಮಾನವರಿಗೂ ಬೋಧಿಸಿದ ವಿದ್ಯೆ ಇದು. "ಈಗ ನಾನು ಸಂಸಾರಕ್ಕಾಗಿ ದುಡಿಯಬೇಕಾಗಿದೆ. ಮುಂದೆ ಸಮಯ ಬಂದಾಗ ನೋಡಿಕೊಳ್ಳೋಣ" ಎಂದರೆ ಎಂದಿಗೂ ನಡೆಯತಕ್ಕದ್ದಲ್ಲ. ಒಂದರಮೇಲೊಂದು ಅಡ್ಡಿ ಆತಂಕಗಳು ಕಾದುಕುಳಿತಿರುತ್ತವೆ. **'ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್'** ಎಂಬ ವಚನದಂತೆ ಯಥಾಶಕ್ತಿಯಾಗಿ ಒಂದೊಂದು ಹೆಜ್ಜೆಯನ್ನು ಮುಂದೆ ಇಡುತ್ತ ಹೋಗಲು ಯಾವ ಬಾಧೆಯೂ ಇಲ್ಲ.

ಬ್ರಹ್ಮಜ್ಞಾನವಾಗಲು ಬಹುಜನ್ಮಗಳ ಪುಣ್ಯ ಬಲವಿರಬೇಕು. ಬ್ರಹ್ಮಜ್ಞಾನವು ಕಷ್ಟಲಭ್ಯವೇ ಹೊರತು ಅಲಭ್ಯವಲ್ಲ. ಅಲಭ್ಯವಾದರೆ ವೇದಾಂತಶಾಸ್ತ್ರವೇ ಅಪ್ರಸ್ತುತವಾದೀತು. ಆತ್ಮಜ್ಞಾನಿಗಳು ಹಿಂದೆಯೂ ಇದ್ದರು. ಇಂದೂ ಇದ್ದಾರೆ.

ಮುಂದೆಯೂ ಇರುತ್ತಾರೆ. ಆದರೆ ಅವರು ಯಾವ ಪ್ರಕಾರದಲ್ಲಿರುತ್ತಾರೆಂಬುದನ್ನು ಮಾತ್ರ ಹೇಳಲಾಗುವುದಿಲ್ಲ.

**ಕೃಷ್ಣೋ ಭೋಗೀ ಶುಕಸ್ತ್ಯಾಗೀ ನೃಪೌ ಜನಕರಾಘವೌ ।**
**ವಸಿಷ್ಠಃ ಕರ್ಮನಿರತಃ ಸರ್ವೇ ತೇ ಜ್ಞಾನಿನಃ ಸ್ಮೃತಾಃ ॥**

"ಶ್ರೀಕೃಷ್ಣನು ಭೋಗಿಯಾಗಿದ್ದನು. ಶುಕಮಹರ್ಷಿಯು ತ್ಯಾಗಿ, ಜನಕ, ಶ್ರೀರಾಮ ರಾಜರು, ವಸಿಷ್ಠರು ಕರ್ಮನಿಷ್ಠರು, ಇವರೆಲ್ಲರೂ ಜ್ಞಾನಿಗಳೇ" ಈ ಶ್ಲೋಕದಲ್ಲಿ 'ಶುಕೋಯೋಗೀ' ಎಂದು ಪಾಠಾಂತರ ಉಂಟು.

ಶ್ರೀಶಂಕರಭಗವತ್ಪಾದರಿಂದ ಈಚೆಗೆ ಸಹ ಬ್ರಹ್ಮಜ್ಞಾನಿಗಳೂ ಜೀವನ್ಮುಕ್ತರೂ ಆದ ಎಷ್ಟೋ ಮಹಾತ್ಮರು ಈ ಭಾರತಭೂಮಿಯಲ್ಲಿ ಆಗಿಹೋಗಿದ್ದಾರೆ. ಕೆಲವರು ಇತಿಹಾಸ ಪ್ರಸಿದ್ಧರು. ಇನ್ನೂ ಕೆಲವರು ನಮಗೆ ಅತ್ಯಂತ ಸಮೀಪ ಕಾಲದಲ್ಲಿದ್ದವರು. ಇವರೆಲ್ಲರೂ ನಮಗೆ ಪ್ರಸ್ತುತರಾಗಿದ್ದು ಆದರ್ಶ ಮಹಾಪುರುಷರಾಗಿದ್ದಾರೆ.

ಶ್ರೀವಿದ್ಯಾರಣ್ಯಮಹಾಸ್ವಾಮಿಗಳ ಹೆಸರನ್ನು ಯಾರು ಕೇಳಿಲ್ಲ? ವಿಧರ್ಮೀಯರ ದುಷ್ಕಾರ್ಯಗಳಿಂದ ಹಿಂದೂಸಮಾಜವೇ ತಲ್ಲಣಗೊಂಡಾಗ, ವೈದಿಕಧರ್ಮವು ನೆಲಕಚ್ಚುವ ಪ್ರಸಂಗವು ಬಂದಾಗ, ಈ ಮಹಾತ್ಮರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿ ಹಿಂದೂಸಮಾಜವನ್ನುಳಿಸಿ ವೈದಿಕಧರ್ಮವನ್ನು ಮೇಲೆತ್ತಿದರು. ಹಕ್ಕಬುಕ್ಕರೆಂಬ ವೀರಯೋಧರಾದ ಅಣ್ಣತಮ್ಮಂದಿರಿಂದ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿಸಿದ ಕೀರ್ತಿ ಶ್ರೀ ವಿದ್ಯಾರಣ್ಯರಿಗೆ ಸಲ್ಲುತ್ತದೆ. ತಪೋನಿರತರೂ ಆತ್ಮಜ್ಞಾನಿಗಳೂ ಆದ ಶ್ರೀವಿದ್ಯಾರಣ್ಯರಿಂದ ವೈದಿಕ ಧರ್ಮಕ್ಕಾದ ಉಪಕಾರವು ಸದಾ ಸ್ಮರಣೀಯವಾದದ್ದು. ಇವರ ಪೂರ್ವಾಶ್ರಮದ ಸೋದರ ರಾದ ಶ್ರೀಸಾಯಣಾಚಾರ್ಯರು ನಾಲ್ಕು ವೇದಗಳಿಗೂ ಭಾಷ್ಯಗಳನ್ನು ರಚಿಸಿದರು. ಶ್ರೀವಿದ್ಯಾರಣ್ಯರೇ ಸ್ವತಃ ಪಂಚದಶೀ, ಅನುಭೂತಿಪ್ರಕಾಶ ಮುಂತಾದ ವೇದಾಂತ ಗ್ರಂಥಗಳನ್ನು ರಚಿಸಿದರು. ಇವರ ಕಾಲದಲ್ಲಿ ಬುಕ್ಕರಾಜನ ಆಶ್ರಯವನ್ನು ಪಡೆದು ನಿರ್ಮಿತವಾದ ಸಂಸ್ಕೃತಸಾಹಿತ್ಯವು ಅಪಾರವಾದದ್ದು. ಶೃಂಗೇರಿಯಲ್ಲಿ ಶ್ರೀಶಾರದಾಂಬಾದೇವಾಲಯ, ಶ್ರೀವಿದ್ಯಾಶಂಕರದೇವಾಲಯ ಮೊದಲಾದವನ್ನು

ಊರ್ಜಿತಗೊಳಿಸಿ, ಶೃಂಗೇರಿಜಗದ್ಗುರುಪೀಠವನ್ನು ಭದ್ರಗೊಳಿಸಿದ ಕೀರ್ತಿ ಶ್ರೀವಿದ್ಯಾರಣ್ಯ ಸ್ವಾಮಿಗಳಿಗೆ ಸಲ್ಲುತ್ತದೆ. ಶ್ರೀವಿದ್ಯಾರಣ್ಯರು **ಆತ್ಮಸಾಕ್ಷಾತ್ಕಾರವನ್ನು** ಪಡೆದಿದ್ದ **ಜೀವನ್ಮುಕ್ತರು.**

ಕ್ರಿ.ಶ. ೧೬-೧೭ನೆಯ ಶತಕಗಳಲ್ಲಿ ಮೊಗಲರ ದುರಾಡಳಿತವು ಪ್ರಬಲವಾಗಿತ್ತು. ಬಾದಶಹ ಔರಂಗಜೇಬನು ಮತಾಂಧನಾಗಿ, ಬಲಾತ್ಕಾರದಿಂದ ಹಿಂದೂಗಳನ್ನು ಮತಾಂತರಿಸತೊಡಗಿದನು. ಮುಸಲ್ಮಾನಮತಕ್ಕೆ ಸೇರದ ಹಿಂದೂಗಳ ಮೇಲೆ **'ಜೆಸಿಯಾ'** ಎಂಬ ತಲೆಗಂದಾಯವನ್ನು ಹೇರಿದನು. ಆ ಸಮಯದಲ್ಲಿ, ಛತ್ರಪತಿ ಶಿವಾಜಿಯು ಮರಾಠಾ ಚಕ್ರಾಧಿಪತ್ಯವನ್ನು ಕಟ್ಟಿ ಔರಂಗಜೇಬನ ಆಕ್ರಮಣವನ್ನು ತಡೆಗಟ್ಟಿದನು. ಆತನಿಗೆ ಮಹಾತ್ಮರಾದ **ಸಮರ್ಥರಾಮದಾಸರು** ಪ್ರೋತ್ಸಾಹವನ್ನಿತ್ತು ವೈದಿಕಧರ್ಮವನ್ನು ಘೋರ ವಿಪತ್ತಿನಿಂದ ಪಾರು ಮಾಡಿದರು.

**'ಬ್ರಹ್ಮಕ್ಷತ್ರೇ ಹಿ ಸಮ್ಯಕ್ ಪರಿಪಾಲಿತೇ ಜಗತ್ ಪರಿಪಾಲಯಿತುಮಲಮ್'** ಎಂಬ ಶ್ರೀಶಂಕರಾಚಾರ್ಯರ ಸೂಕ್ತಿಗೆ ಮೇಲ್ಕಂಡ ಎರಡು ಉದಾಹರಣೆಗಳು ಸಾಕಾಗುತ್ತವೆ.

ಜ್ಞಾನಿಗಳ ಆಚರಣೆ ನಾನಾವಿಧವಾಗಿರುತ್ತದೆಯೆಂದು ಹಿಂದೆ ಬರೆದಿದೆ. ಅವರು ರಾಜಕಾರ್ಯದಲ್ಲಿ ಸಹ ತೊಡಗಿ ಸ್ವತಃ ಜನಕರಾಜನಂತೆ, ಶ್ರೀರಾಮನಂತೆ ರಾಜ್ಯವನ್ನಾಳಬಹುದು. ಮಂತ್ರಿಗಳಾಗಿ ರಾಜನಿಗೆ ಸಲಹೆಯನ್ನು ಕೊಡುತ್ತ ಧರ್ಮರಕ್ಷಕರಾಗಿ ವರ್ತಿಸಬಹುದು. ರಾಜಪುರೋಹಿತರಾದ ವಸಿಷ್ಠಾದಿಮುನಿಗಳು ಪ್ರಾಯೇಣ ರಾಜನಿಗೆ ಸಲಹೆಯನ್ನೀಯುತ್ತಿದ್ದರು. **ಶ್ರೀವಿದ್ಯಾರಣ್ಯರೂ, ಶ್ರೀಸಮರ್ಥರಾಮದಾಸರೂ** ಅದೇ ಮಾರ್ಗವನ್ನವಲಂಬಿಸಿದರು. ಪಂಚದಶಿಯಲ್ಲಿ **'ಜ್ಞಾನಿನಾ ಚರಿತುಂ ಶಕ್ಯಂ ಸಮ್ಯಗ್ ರಾಜ್ಯಾದಿ ಲೌಕಿಕಮ್'** ಎಂದು ಶ್ರೀವಿದ್ಯಾರಣ್ಯ ಮುನಿಗಳೇ ಹೇಳಿದ್ದಾರೆ. **'ಜ್ಞಾನಿಯಾದವನು ರಾಜ್ಯಭಾರವೇ ಮುಂತಾದ ಲೌಕಿಕ ಕಾರ್ಯವನ್ನು ಚೆನ್ನಾಗಿಯೇ ನಡೆಸಲು ಶಕ್ಯವಿದೆ'** ಎಂದು ಅದರ ಅರ್ಥ.

ಇನ್ನೂ ನಮಗೆ ಹತ್ತಿರದಲ್ಲಿದ್ದು ಸುಪ್ರಸಿದ್ಧರಾದವರು **ಶ್ರೀಸದಾಶಿವ ಬ್ರಹ್ಮೇಂದ್ರರು.** ಇವರು ಪರಮಜ್ಞಾನಿಗಳಾಗಿದ್ದು ಶ್ರೀಶಂಕರಾಚಾರ್ಯರಂತೆ ಹಲವಾರು ಉತ್ತಮ ಗ್ರಂಥಗಳನ್ನೇ ರಚಿಸಿದ್ದಾರೆ. ಅವಧೂತರಾಗಿ ನಗ್ನರಾಗಿ ಯಥೇಚ್ಛೆಯಂತೆ ಅಲೆದೂ ಇದ್ದಾರೆ. ಜೀವಂತರಾಗಿದ್ದಾಗಲೇ ಸಮಾಧಿಯನ್ನು ಪ್ರವೇಶಿಸಿ ಮನುಷ್ಯ

ಕಳೇವರವನ್ನು ತ್ಯಜಿಸಿಯೂ ಇದ್ದಾರೆ. ಇವರು ತಮಿಳುನಾಡಿನ ಮಧುರೆ ಪ್ರಾಂತದವರು. **ಶಿವರಾಮಕೃಷ್ಣನ್** ಎಂದು ಪೂರ್ವಾಶ್ರಮದ ನಾಮ. **ಶ್ರೀಪರಮಶಿವೇಂದ್ರರೆಂಬ** ಯತಿವರೇಣ್ಯರು **ಶ್ರೀಸದಾಶಿವಬ್ರಹ್ಮೇಂದ್ರರಿಗೆ** ಸಂನ್ಯಾಸದೀಕ್ಷೆಯನ್ನಿತ್ತು ವೇದಾಂತ ಶಾಸ್ತ್ರವನ್ನು ಬೋಧಿಸಿದ ಗುರುಗಳು. **ಶ್ರೀಸದಾಶಿವಬ್ರಹ್ಮೇಂದ್ರರು** ಕ್ರಿ.ಶ. ಸುಮಾರು ೧೭೫೦ನೆಯ ವರ್ಷದಲ್ಲಿ ತಮಿಳುನಾಡಿನ ನೆರೂರು ಬಳಿ ಸಮಾಧಿಸ್ಥರಾದರೆಂದು ತಿಳಿದುಬರುತ್ತದೆ. ಅವರ ಸಮಾಧಿ ಈಗಲೂ ಇದೆ.

ಶ್ರೀವಿದ್ಯಾರಣ್ಯಸ್ವಾಮಿಗಳು ಜ್ಞಾನಿಯ ನಡತೆಯನ್ನು ವಿವರಿಸುತ್ತ **'ಅಂಧವಜ್ಜಡವಚ್ಚೈವ ಮೂಕವಚ್ಚ ಮಹೀಂ ಚರೇತ್'** ಎಂದಿದ್ದಾರೆ. ಜ್ಞಾನಿಯು ಕುರುಡನಂತೆ ಜಡನಂತೆ ಮೂಕನಂತೆ ಭೂಮಿಯಲ್ಲಿ ಅಲೆಯುತ್ತಿರಬಹುದು. ವಿಧಿ–ನಿಷೇಧಗಳೇನೂ ಆತನಿಗಿಲ್ಲ. ಆತನ ಯೋಗಸಿದ್ಧಿಯ ಫಲವಾಗಿ ಪವಾಡಸದೃಶವಾದ ಘಟನೆಗಳು ತಾವಾಗಿ ನಡೆದು ಹೋಗಬಹುದು. ನಡೆಯದೆಯೂ ಇರಬಹುದು. ಇವೆಲ್ಲವೂ ಶ್ರೀಸದಾಶಿವಬ್ರಹ್ಮೇಂದ್ರರ ಜೀವನದಲ್ಲಿ ಘಟಿಸಿವೆ. ಕಡೆಕಡೆಗೆ ಅವರು ಉನ್ಮತ್ತರಂತೆ ಬಾಹ್ಯಪ್ರಜ್ಞೆಯಿಲ್ಲದೆ ಸಂಚರಿಸುತ್ತಿದ್ದರು. ದಿಗಂಬರರಾಗಿ ಅಲೆಯುತ್ತಿದ್ದರು. ಅವರ ಲೋಕಬಾಹ್ಯವಾದ ವರ್ತನೆಯನ್ನು ಅವರು ಗುರುಗಳಾಗಿದ್ದ ಶ್ರೀಪರಮಶಿವೇಂದ್ರರಿಗೆ ಯಾರೋ ತಿಳಿಸಿದರಂತೆ. ಸತ್ಯಸ್ಥಿತಿಯನ್ನರಿತಿದ್ದ ಆ ಗುರುಗಳು **' ಆಹಾ ! ಅಂತಹ ಹುಚ್ಚು ನನಗೆ ಬಾರದೆ ಹೋಯಿತಲ್ಲ ! '** ಎಂದು ಪಶ್ಚಾತ್ತಾಪ ಪಟ್ಟರಂತೆ. ಈ ಘಟನೆಯನ್ನು ಶೃಂಗೇರಿ ಪೀಠಾಧಿಪತಿಗಳಾಗಿದ್ದ ಶ್ರೀಸಚ್ಚಿದಾನಂದಶಿವಾಭಿನವನರಸಿಂಹಭಾರತೀಮಹಾಸ್ವಾಮಿಗಳು ತಮ್ಮ ಶ್ರೀಸದಾಶಿವಬ್ರಹ್ಮೇಂದ್ರಸ್ತವದಲ್ಲಿ ಹೀಗೆ ವರ್ಣಿಸಿದ್ದಾರೆ–

**ಉನ್ಮತ್ತವತ್ ಸಂಚರತೀಹ ಶಿಷ್ಯಃ**
**ತವೇತಿ ಲೋಕಸ್ಯ ವಚಾಂಸಿ ಶೃಣ್ವನ್ ।**
**ಖಿದ್ಯನ್ನು ವಾಚಾಸ್ಯ ಗುರುಃ ಪುರಾಹ**
**ಹ್ಯುನ್ಮತ್ತತಾ ಮೇ ನ ಹಿ ತಾದೃಶೀತಿ ॥**

ಈ ಉನ್ಮತ್ತಸ್ಥಿತಿಯನ್ನು ತಲುಪುವುದಕ್ಕೆ ಮೊದಲು ಶ್ರೀಸದಾಶಿವಬ್ರಹ್ಮೇಂದ್ರರು ಬ್ರಹ್ಮಸೂತ್ರವೃತ್ತಿ, ಯೋಗಸುಧಾಕರ, ಸಿದ್ಧಾಂತಕಲ್ಪವಲ್ಲೀ, ಆತ್ಮಾನುಸಂಧಾನ,

ಆತ್ಮವಿದ್ಯಾವಿಲಾಸ – ಮುಂತಾದ ಸುಮಾರು ಇಪ್ಪತ್ತೆರಡು ವೇದಾಂತಗ್ರಂಥಗಳನ್ನು ರಚಿಸಿದ್ದರು. ಅಲ್ಲದೆ ಭಕ್ತಿಪೂರ್ಣವಾದ ಕೀರ್ತನೆಗಳನ್ನು ರಚಿಸಿದ್ದರು. ಕೀರ್ತನೆಗಳು ಚೇತೋಹಾರಿಗಳಾದವುಗಳು. ಉದಾ–

೧. ಸ್ಮರ ವಾರಂ ವಾರಂ – ಚೇತಃ । ಸ್ಮರ ನಂದಕುಮಾರಂ ॥
೨. ಪಿಬ ರೇ ರಾಮರಸಂ– ರಸನೇ ಪಿಬ ರೇ ರಾಮರಸಂ ॥
೩. ಗಾಯತಿ ವನಮಾಲೀ– ಮಧುರಂ । ಗಾಯತಿ ವನಮಾಲೀ ॥
೪. ಬ್ರೂಹಿ ಮುಕುಂದೇತಿ– ರಸನೇ । ಬ್ರೂಹಿ ಮುಕುಂದೇತಿ ॥
೫. ಕಿಂ ಪೃಚ್ಛಸಿ ರೇ ಮಾಂ । ಪಂಡಿತ– ಕಿಂ ಪೃಚ್ಛಸಿ ರೇ ಮಾಂ ॥

ಶ್ರೀ ಶ್ರೀಶಿವಾಭಿನವನರಸಿಂಹಭಾರತೀಮಹಾಸ್ವಾಮಿಗಳು ಶ್ರೀ ಶ್ರೀಸದಾಶಿವ ಬ್ರಹ್ಮೇಂದ್ರರನ್ನು ಸದ್ಗುರುಭಾವನೆಯಿಂದ ನಲವತ್ತೈದು ಶ್ಲೋಕಗಳಲ್ಲಿ ಸ್ತುತಿಸಿದ್ದಾರೆ.

ಅಂತೆಯೇ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀಚಂದ್ರಶೇಖರಭಾರತೀ ಮಹಾಸ್ವಾಮಿಗಳೂ ಸಹ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಮಹಾನುಭಾವರು. ನ್ಯಾಯ ವೇದಾಂತಾದಿ ಶಾಸ್ತ್ರಗಳಲ್ಲಿ ಅಪ್ರತಿಮಪಾಂಡಿತ್ಯವನ್ನು ಗಳಿಸಿದವರು. **'ವಸುಧೈವ ಕುಟುಂಬಕಮ್'** ಎಂಬ ಉದಾರ ಚರಿತವು ಅವರ ನಡೆನುಡಿಗಳಲ್ಲಿ ಎದ್ದು ಕಾಣುತ್ತಿತ್ತು. ಒಬ್ಬ ಮುಸ್ಲಿಂ ಜಾತಿಯ ಪೋಲೀಸ್ ಅಧಿಕಾರಿಯು ಅವರ ದರ್ಶನಕ್ಕಾಗಿ ಪಂಜಾಬಿನಿಂದ ಆಗಾಗ ಬಂದು ಹೋಗುತ್ತಿದ್ದನು. ಆತನು ತನ್ನನ್ನು ಹಿಂದೂಮತಕ್ಕೆ ಸೇರಿಸಿಕೊಳ್ಳುವಂತೆ ಪದೇ ಪದೇ ಪ್ರಾರ್ಥಿಸಿಕೊಳ್ಳುತ್ತಿದ್ದನಂತೆ. ಹಾಗೆಯೇ ಒಬ್ಬ ಕ್ರಿಶ್ಚಿಯನ್ ಗೃಹಸ್ಥನು ಹಿಂದೂಮತಕ್ಕೆ ಮತಾಂತರಗೊಳ್ಳಲು ಆಶಿಸುತ್ತಿದ್ದನು. ಅವರೀರ್ವರಿಗೂ **ಶ್ರೀಚಂದ್ರಶೇಖರ ಭಾರತೀಮಹಾಸ್ವಾಮಿಗಳು** ಹೇಳಿದ ಹಿತಬೋಧೆ ಇದು: **'ಮತಾಂತರಗೊಳ್ಳುವುದು ಅನಾವಶ್ಯಕ. ಯೇಸುಕ್ರಿಸ್ತನು ಬೋಧಿಸಿದ್ದರಲ್ಲಾಗಲಿ, ಮಹಮ್ಮದ್ ಪೈಗಂಬರನು ಬೋಧಿಸಿದ್ದರಲ್ಲಾಗಲಿ ತಪ್ಪೇನಿದೆ? ಒಳ್ಳೆಯ ಕ್ರಿಶ್ಚಿಯನ್ ಆಗಿರಿ. ಒಳ್ಳೆಯ ಮುಸಲ್ಮಾನ್ ಆಗಿರಿ. ನಿಮ್ಮ ಮತಾಚರಣೆಯಿಂದಲೇ ನಿಮಗೆ ಶ್ರೇಯಸ್ಸುಂಟು!'** ಈ ಪ್ರಕಾರ ಬೋಧಿಸತಕ್ಕವರು **'ಸರ್ವಂ ಬ್ರಹ್ಮಮಯಮ್'** ಎಂಬ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಂಡವರೆಂಬುದು ನಿಶ್ಚಯ. ಶ್ರೀಚಂದ್ರಶೇಖರಭಾರತೀಮಹಾಸ್ವಾಮಿಗಳಿಗೆ ದ್ವೈತಮತ ಖಂಡನೆ ಮುಂತಾದದ್ದು ರುಚಿಸುತ್ತಿರಲಿಲ್ಲ. ಅನ್ಯಮತ ದೂಷಣೆಯು

ರಾಗದ್ವೇಷಗಳಿಗೆ ಅವಕಾಶ ಮಾಡುತ್ತದೆ. ಅದು ಸಲ್ಲದು– ಎಂಬುದು ಅವರ ಸ್ಪಷ್ಟವಾದ ಅಭಿಪ್ರಾಯವಾಗಿತ್ತು. ಅವರ ಸಾಧನೆಗಳು ಮುಂದುವರಿದಂತೆ ಮತವ್ಯವಹಾರಗಳೆಲ್ಲವೂ ಅವರಿಂದ ದೂರವಾದವು. ಏಕಾಂತಪ್ರಿಯತೆ ಬೆಳೆಯಿತು. ಸದಾ ಧ್ಯಾನಸ್ಥರಾಗಿರುತ್ತಿದ್ದರು. ಕಡೆಕಡೆಗೆ ಅವಧೂತ ಸ್ಥಿತಿ ಪ್ರಾಪ್ತವಾಯಿತು. ನಡೆನುಡಿಗಳು ವಿಚಿತ್ರವಾದವು. ವಿಸ್ಮಯಕರವಾದವು. ಮಹಾಸ್ವಾಮಿಗಳಿಗೆ ಹುಚ್ಚು ಹಿಡಿದಿದೆ ಎಂದು ಜನರು ಹೇಳಿಕೊಳ್ಳಲಾರಂಭಿಸಿದರು! ರೈಲಿನಲ್ಲಿ ಕುಳಿತು ಓಡುತ್ತಿದ್ದವರಿಗೆ ಬದಿಯಲ್ಲಿ ಸ್ಥಿರವಾಗಿ ನಿಂತಿರುವ ಮರಗಳೇ ಓಡುವಂತೆ ಕಾಣುತ್ತವೆ. ಅಂತೆಯೇ ಅಸ್ಥಿರಪ್ರಜ್ಞೆಯ ಭ್ರಾಂತಜನರಿಗೆ ಸ್ಥಿತಪ್ರಜ್ಞನಾದ ಜ್ಞಾನಿಯು ಭ್ರಮಿಸಿದಂತೆ ಕಾಣಿಸುತ್ತಾನೆ !

ಈ ಎಲ್ಲ ಮಹಾನುಭಾವರ ಚರಿತೆಯನ್ನು ಅವಲೋಕಿಸಿದಾಗ ಒಂದು ವಿಷಯ ನಮಗೆ ಸ್ಪಷ್ಟವಾಗುತ್ತದೆ. ಇವರೆಲ್ಲರೂ ಸನಾತನ ವೈದಿಕಧರ್ಮದ ಪರಂಪರೆಯಲ್ಲಿ ಬೆಳೆದವರು, ಸಂಪ್ರದಾಯವನ್ನು ಅನುಸರಿಸಿದವರು, ಗೌರವಿಸಿದವರು. ಇವರಾರೂ ಸಮಾಜವನ್ನಾಗಲಿ, ರಾಷ್ಟ್ರವನ್ನಾಗಲಿ ಒಡೆಯಲಿಲ್ಲ. ಭೇದಭಾವ ವನ್ನು ಹುಟ್ಟುಹಾಕಲಿಲ್ಲ. ಬದಲಾಗಿ ಇಡೀ ರಾಷ್ಟ್ರದ ಒಳಿತನ್ನೇ ಸದಾ ಬಯಸಿ ಅದಕ್ಕಾಗಿ ಪ್ರಯತ್ನಿಸಿದರು. **'ಸರ್ವೇಜನಾಃ ಸುಖಿನೋ ಭವಂತು'** ಎಂಬುದನ್ನೇ ತಮ್ಮ ಧ್ಯೇಯವನ್ನಾಗಿಸಿಕೊಂಡು ರಾಷ್ಟ್ರದಲ್ಲಿ ಗುಣಶೀಲಸಂಪನ್ನರನ್ನು ನಿರ್ಮಾಣ ಮಾಡಿದರು. ಇವರು ಮಾತ್ರವಲ್ಲ ಇವರ ಶಿಷ್ಯೋಪಶಿಷ್ಯರೂ ಸಹ ಸತ್ತ್ವಸಂಪನ್ನರಾಷ್ಟ್ರನಿರ್ಮಾಣಕಾರ್ಯದಲ್ಲಿ ತಮ್ಮ ಕಾಣಿಕೆಯನ್ನಿತ್ತರು. ಇದಕ್ಕೆ ಕಾರಣ ಇವರು ನಂಬಿದ ಅದ್ವೈತತತ್ತ್ವ. **'ವಸುಧೈವ ಕುಟುಂಬಕಮ್'** ಎಂಬುದ ಕ್ಕಿಂತಲೂ ಮುಂದೆ ಸಾಗಿ ವಿಶ್ವವೆಲ್ಲ ಅದ್ವಿತೀಯಚೇತನದ ರೂಪಾಂತರವೆಂದೂ, ಆ ಚೇತನವೆ ತಾವೆಂದೂ ಭಾವಿಸಿದ ಇವರಿಗೆ ಈ ವಿಶ್ವದಲ್ಲಿ ದ್ವೇಷ್ಯವಾದದ್ದು ಯಾವುದೂ ಇಲ್ಲ. ಎಲ್ಲಿ ದ್ವೈತಬುದ್ಧಿಯಿರುತ್ತದೋ ಅಲ್ಲಿ ರಾಗದ್ವೇಷ ಗಳಿಗೆಡೆಯುಂಟು. ಅದ್ವೈತಭಾವನೆಯನ್ನು ಮೈಗೂಡಿಸಿಕೊಂಡವರಿಗೆ ಪ್ರಿಯವೂ ಇಲ್ಲ. ದ್ವೇಷವೂ ಇಲ್ಲ. ಮನೋವಾಕ್ಕಾಯಗಳಿಂದ ಯಾರನ್ನೂ ಹಿಂಸಿಸು ವುದಿಲ್ಲವೆಂದು ಲೋಕಕ್ಕೆಲ್ಲ ಅಭಯದಾನ ಮಾಡಿದವರು. ಇವರಿಂದ ಯಾರಿಗೂ ಯಾವ ತೊಂದರೆಯೂ ಆಗದು. ಇಷ್ಟೇ ಅಲ್ಲ, ಚಿದಾನಂದಸಾಗರ ರಾದ ಇವರು ತಮ್ಮ ಸುತ್ತಮುತ್ತಲಿನವರಿಗೂ ಆನಂದದ ಸವಿಯನ್ನುಣ್ಣಿಸುವವರು.

ಆದುದರಿಂದಲೇ ಇಂಥ ಬ್ರಹ್ಮಜ್ಞಾನಿಗಳು ರಾಷ್ಟ್ರದ ಸಂಪತ್ತು. ವಿಶ್ವದ ಸಂಪತ್ತು.

ಆಚಾರ್ಯರ ವಿಜಯಯಾತ್ರೆ ನಮ್ಮ ಊಹೆಗೆ ಮೀರಿದ್ದು. ಆ ಕಾಲದಲ್ಲಿ ಸರಿಯಾದ ರಸ್ತೆಗಳಿರಲಿಲ್ಲ. ಕೇರಳದಿಂದ ಕಾಶ್ಮೀರದವರೆಗೆ ಅಸ್ಸಾಮಿನಿಂದ ಗುಜರಾತಿನವರೆಗೆ ಕಾಲ್ನಡಗೆಯಿಂದ ಹೇಗೆ ಸಂಚರಿಸಿರಬಹುದು? ಪಂಡಿತರೊಡನೆ ವಾದ ಮಾಡುತ್ತ, ಸಾಮಾನ್ಯ ಜನರಿಗೆ ಪ್ರವಚನಗಳನ್ನು ನೀಡುತ್ತ, ಶಾಸ್ತ್ರಗ್ರಂಥಗಳನ್ನು ರಚಿಸುತ್ತ, ವಿವಿಧ ಸ್ತೋತ್ರಗಳನ್ನು ಗ್ರಥಿಸುತ್ತ, ಕರತಲಭಿಕ್ಷಾ ತರುತಲವಾಸಗಳ ನೆರವಿನಿಂದ ಸಮಸ್ತಭಾರತವನ್ನೂ ಸುತ್ತಿ, ಕಾಶ್ಮೀರದಲ್ಲಿ ಸರ್ವಜ್ಞ ಪೀಠವನ್ನೇರಿ, ವೈದಿಕಧರ್ಮಧ್ವಜವನ್ನು ಸ್ಥಾಪಿಸಿದರೆಂಬುದು ಮೈನವಿರೇಳಿಸುವ ವೃತ್ತಾಂತ. ಅದೂ ತಮ್ಮ ಮೂವತ್ತೆರಡುವಯೋ-ವರ್ಷಗಳೊಳಗೆ ! ಅಧಿಕಾರ ಐಶ್ವರ್ಯಗಳ ಯಾವ ಲಾಲಸೆಯೂ ಇಲ್ಲದೆ ಧರ್ಮರಕ್ಷಣೆಗಾಗಿ, ಸತ್ಯದ ಉಳಿವಿಗಾಗಿ, ಜನತೆಯ ಹಿತಕ್ಕಾಗಿ ಬಿಡುವಿಲ್ಲದೆ ದುಡಿದು, ರಾಷ್ಟ್ರದ ಅಧ್ಯಾತ್ಮ ಚಿಂತನ ಸಾಮರ್ಥ್ಯವನ್ನು ಮುಗಿಲೆತ್ತರಕ್ಕೆ ಏರಿಸಿ, ತಮ್ಮ ಚಂದ್ರಿಕಾಧವಳಕೀರ್ತಿಯನ್ನು ಶಾಶ್ವತವಾಗಿ ನಿಲ್ಲಿಸಿದ **ಶ್ರೀಶಂಕರ ಭಗವತ್ಪಾದರನ್ನು** ಭಾರತೀಯರು ಕೃತಜ್ಞತೆಯಿಂದ ಸ್ಮರಿಸುತ್ತಿರಬೇಕು.

* * * * *

# ಕೆಲವು ದೇಶೀಯ ವಿದೇಶೀಯ ವಿದ್ವಾಂಸರ ಅಭಿಪ್ರಾಯಗಳು
## About Adi Shankara Bhagavatpada

1. **Jawaharlal Nehru**

(Discovery of India, p. 190)

"Born in Malabar in the far south of India, he travelled incessanty all over India, meeting innumerable people arguing, debating, reasoning, convincing and filling them with a part of his own passion and tremendous vitality..... In a brief life of thirty-two years he did the work of many long lives and left such an impression of his powerful mind and rich personality on India that it is very evident to-day".

2. **Padmabhushan Sri Baldev Upadhyaya**

(Professor, Banaras Hindu University and Varanaseeya Sampurnanda Sanskrit University. Director- Research Institute Varanasi, Sahityacharya, Eminent Scholar.

"When this holy land of Bharat was sinking in the quagmire of non-vedic sects, when the black monster of immorality, malpractices and misbehaviour encircled Bharat on all the four sides. When from one end to the other end of the whole of Bharat fell into the clutches of lethargy and indolence, then happened the auspicious arrival of **Acharya Shankara** in this country. When the flame of religiosity was at the brink of exitinction in front of the dust storm of vanity and was counting its final moments **Acharya Shankara** saved it from getting extinguished.... In the whole world Shankara is completely identified with unity, integrity and religiousity of this vast and great country Bharat and for us, even today, the dignity of his profound scholarship and the importance of diligences is a great trust a great achievement.

3. **Dr. Rajendra Prasad**

(Former President of India, a Scholar)

**"Swami Shankaracharya** was that great religious teacher and reformer who took the world by storm with his dynamic personality subduing all opposition and difficulties. He covered the entire country from south to north.... And gave the ancient religion of the land founded by the Rishis, a new lease of life undertaking his self imposed mission of resuscitating the **Vedic Dharma".**

4. **Dr. S. Radhakrishnan**

(Former president of India, and internationally renowned scholar and Philosopher)

He (Shankara) is a philosopher and a poet, a savant and a saint, a mystic and religious reformer.... There have been few minds more universal than his".

5. **Maragaret Noble**

(Sister Nivedita)

"....Western people can hardly imagine a personality like that of **Shankaracharya.** We contemplate with wonder and delight the devotion of Francis of Assisi, the intellect of Abelard, the virile force and freedom of Martin Luther and the political efficiency of Ignatius Loyala, but who could imagin all those united in one person".

6. **Arthur Isenberg**

**"Adwaita** vedanta of Shankara provides a complete philosophical and conceptual frame work within which the findings of advanced modern Physical Science can be placed without stress or tear.... Shankara's philosophy is assuredly worth studying; the appeal of which became far greater with Einstein's

discovery that matter and energy are interchageable... We must realise that Shankara must for ever be numbered among the wisest sons, not of mother India alone, but of all mankind'.

**7. Rev. J.F. Pessein**

Great credit is due to Shankara and his school for having fought strenuously against the upholders of self existence of the material world and bought the whole universe under the sway of God whom it owes not only its origination but also its very being. Shankara understood that the independent existence of another being would imply limitation of God.

**8. Dr. Paul Deussen**

The system of the **Vedanta,** founded in the **Upanishads** and **Vedanta Sutras** and accompanied by Shankara's commentaries on them-equal in rank to Plato and Kant- is one of the most valuable products of genius of mankind in his researches of the eternal truth philosophical conceptions unequalled in India or perhaps anywhere else in the world.... Eternal philosophical truth has seldom found more decisive and striking expression than in the doctrine of the emancipating knowledge of the **Atma:**

**9. Romain Rolland**

The only religion that can have any hold on the intellecutal people is the rationalistic religion of **Adwaita.**

**10. E.W.F. Tomlin**

With Shankara we have to do with a philosopher of very different calibre; infact we have with one of the greatest of all philosophers, whose work ought to be better known in the occident than it is.

***

# ವೇದಾಂತಭಾರತೀ

(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ, ಮೈಸೂರು ಜಿಲ್ಲೆ

ಅದ್ವೈತವೇದಾಂತದ ಅಧ್ಯಯನ, ಅಧ್ಯಾಪನ, ಸಂಶೋಧನ ಪ್ರಚಾರಗಳಿಗಾಗಿಯೇ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ. **ಶ್ರೀಮಜ್ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು,** ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ ಶೃಂಗೇರಿ ಇವರೇ ಈ ಸಂಸ್ಥೆಯ ಮಹಾಸಂರಕ್ಷಕರು. ಕೃಷ್ಣರಾಜನಗರದ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧೀಶರಾದ **ಪರಮಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು** ಈ ಸಂಸ್ಥೆಯ ಸಂರಕ್ಷಕರು.

ಅಧೀತಿ - ಬೋಧ - ಆಚರಣ - ಪ್ರಚಾರಣ ಈ ನಾಲ್ಕು ಮಾರ್ಗಗಳಿಂದ ಅದ್ವೈತದರ್ಶನದ ಸೇವೆಯನ್ನು ಮಾಡುವುದೇ ಈ ಸಂಸ್ಥೆಯ ಪರಮೋದ್ದೇಶ. ಅದಕ್ಕಾಗಿ ಸಂಸ್ಥೆಯು ಹಮ್ಮಿಕೊಂಡಿರುವ ಯೋಜನೆಗಳು ಹಲವಾರು. ಅದ್ವೈತವೇದಾಂತಕೋಶದ ರಚನೆ, ಶಂಕರಾಚಾರ್ಯರಿಗೆ ಹಾಗೂ ಅದ್ವೈತವೇದಾಂತಕ್ಕೆ ಸಂಬಂಧಪಟ್ಟ ಗ್ರಂಥಗಳ ಪ್ರಕಾಶನ, ಅನುವಾದ, ಜನಸಾಮಾನ್ಯರಿಗೆ ಅದ್ವೈತದಲ್ಲಿ ಅಭಿರುಚಿಯನ್ನುಂಟುಮಾಡಲು ಸರಳ ಸುಬೋಧ ಗ್ರಂಥಗಳ ಪ್ರಕಾಶನ, ಶಾಸ್ತ್ರಗೋಷ್ಠಿ, ವಿದ್ಯಾರ್ಥಿಗಳಿಗಾಗಿ ವಿವೇಕದೀಪಿನೀ-ವಿವೇಕೋತ್ಕರ್ಷಿಣೀ ಸ್ಪರ್ಧಾ, ಶಾಂಕರಸಂದೇಶ-ಶಾಂಕರಸರಸ್ವತೀ ಇವೇ ಮೊದಲಾದವುಗಳು ಸಂಸ್ಥೆಯ ಕಾರ್ಯಗಳು.

ಗೇಯಂ ಗೀತಾ ನಾಮಸಹಸ್ರಂ
ಧ್ಯೇಯಂ ಶ್ರೀಪತಿರೂಪಮಜಸ್ರಮ್ ।
ನೇಯಂ ಸಜ್ಜನಸಂಗೇ ಚಿತ್ತಂ
ದೇಯಂ ದೀನಜನಾಯ ಚ ವಿತ್ತಮ್॥

-ಭಜಗೋವಿಂದಮ್ ಸ್ತೋತ್ರ